ಬೆಲೆ : ಎರಡು ಆಣೆ

ಕರ್ಮವೀರ

KARMAVEER
W-E-E-K-L-Y
HUBLI
MARCH 24
1947

ವರ್ಗಣಿ ದರ
(ಅಂಚೆವೆಚ್ಚ ಸಹಿತ)
ವರ್ಷಕ್ಕೆ ರೂ. ೬—೦—೦
೬ ತಿಂಗಳಿಗೆ ,, ೩—೦—೦
೩ ತಿಂಗಳಿಗೆ ,, ೧—೧೨—೦
ಬಿಡಿ ಪ್ರತಿ
ತಿಂಗಳಿಗೊಂದಕ್ಕೆ ೬ ಆಣೆ
ಮುಂಗಡ ಕೊಡಬೇಕು.

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor H. R. Purohit, M. A.

ಸಂಪುಟ ೧೮] ೩೩೦೦ ಹುಬ್ಬಳ್ಳಿ ಸೋಮವಾರ ತಾರೀಖು ೨೪ — ೩ — ೧೯೪೭ [ಸಂಚಿಕೆ ೪೭

ಜಗತ್ತಿನ ದಿಗಂತದಲ್ಲಿ ಮತ್ತೆ ಯುದ್ಧದ ಕಾರ್ಮೋಡ

ರಶಿಯಾದ ವಿರುದ್ಧ ಅಮೇರಿಕೆಯ ಸಡ್ಡು—ಬಾಲ್ಕನ್ ಭೂಮಿಯಲ್ಲಿ ಮೊದಲ ತಿಕ್ಕಾಟ—ಪೂರ್ವ ರಾಷ್ಟ್ರಗಳ ವಿಪನ್ನ ಪರಿಸ್ಥಿತಿ

ಆರು ವರ್ಷಗಳ ಭೀಷಣ ಸಂಗ್ರಾಮ ಮುಗಿದು ಇನ್ನೂ ಬಹಳ ದಿನ ಕಳೆದಿಲ್ಲ, ಸಂಗ್ರಾಮಾಸಕ್ತ ರಾಷ್ಟ್ರಗಳು ಇನ್ನೂ "ಸಂಧಿ" ಸ್ಥಿತಿಯಿಂದ "ಶಾಂತಿ" ಸ್ಥಿತಿಗೆ ಮುಟ್ಟಿಲ್ಲ. ಆದರೂ ಈಗಾಗಲೆ ಜಗತ್ತಿನಲ್ಲಿ ಯುದ್ಧದ ಕಾರ್ಮೋಡಗಳು ದಟ್ಟವಾಗಿ ಆವರಿಸಿವೆ. ಅಮೇರಿಕನ್ ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷ ಟ್ರೂಮನ್ನರು ಕಳೆದ ವಾರ ಮಾಡಿದ ರಶಿಯಾವಿರೋಧಿ ಭಾಷಣದಿಂದ ಈ ಕಾರ್ಮೋಡಗಳು ತಿಳಿಯಾಗುವ ಬದಲು ಇನ್ನಷ್ಟು ಕರಾಳವಾಗಿವೆಯೆಂದು ನಿಸ್ಸಂಶಯವಾಗಿ ಹೇಳಬಹುದು.

ಕಳೆದ ವಾರ ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು, ಅಮೇರಿಕನ್ ಕಾಂಗ್ರೆಸ್ಸಿನ (ಶಾಸನಸಭೆಗಳ) ವಿರಳವಾದ ಜಂಟಿ ಅಧಿವೇಶನದಲ್ಲಿ, ಜಗತ್ತಿನ ಭವಿಷ್ಯದ ದೃಷ್ಟಿಯಿಂದ ನೋಡಿದರೆ, ಅತ್ಯಂತ ಮಹತ್ವದ ಸಂದೇಶವನ್ನಿತ್ತರು. ಅದು ರಶಿಯಾಕ್ಕೂ ಅದು ಹಬ್ಬಿಸಬಯಸುತ್ತಿರುವ ಕಮ್ಯುನಿಸ್ಟ್ ತತ್ವಜ್ಞಾನಕ್ಕೂ ಗಂಭೀರವಾದ ಎಚ್ಚರಿಕೆಯಾಗಿತ್ತೆಂದು ಹೇಳಬಹುದು. ರೂಜವೆಲ್ಟರು ಕಳೆದ ಯುದ್ಧಾರಂಭದಲ್ಲಿ ಹಿಟ್ಲರನಿಗಿತ್ತ ಎಚ್ಚರಿಕೆಯನ್ನೆ ಈ ಸಂದೇಶ ಹೋಲುತ್ತದೆ. ಮಾತ್ರವಲ್ಲ, ಅದಕ್ಕಿಂತಲೂ ಗಂಭೀರವಾಗಿದೆ. ಏಕೆಂದರೆ ರೂಜವೆಲ್ಟರ ಭಾಷಣ ಬರಿ ಬಾಯ್ಮಾತಿನ ಎಚ್ಚರಿಕೆಯಾಗಿದ್ದರೆ, ಟ್ರೂಮನ್ನರು ಅದರ ಸಂಗಡ ಕ್ರಿಯೆಯನ್ನೂ ಕಗೊಂಡಿತ್ತು.

ಗ್ರೀಸ, ತುರ್ಕಿಗಳಿಗೆ ಸಹಾಯ

ಅಧ್ಯಕ್ಷ ಟ್ರೂಮನ್ನರು ಶಾಸನ ಸಭೆಯಿಂದ ೪೦ ಕೋಟಿ ಡಾಲರುಗಳನ್ನು ಬೇಡ ಹೊಂಟಿದ್ದರು. ಉದ್ದೇಶ, ಸಂಕಟಗ್ರಸ್ತ ಗ್ರೀಸ, ತುರ್ಕಿಗಳಿಗೆ ಆರ್ಥಿಕ ಮತ್ತು ಇತರ ಸಹಾಯ ನೀಡುವದು. ಒಳ್ಳೆ ಅನುಕಂಪೆಯ ಕೆಲಸ, ಉಪಕಾರ ಬುದ್ಧಿ. ಆದರೆ ಟ್ರೂಮನ್ ಸಾಹೇಬರು ಪರೋಪಕಾರವೇ ಈ ದಾನದ ಧ್ಯೇಯವಲ್ಲ, ಅದಕ್ಕಿಂತಲೂ ದೂರತರವಾದ ಸ್ವಾರ್ಥಪೂರ್ಣ ಉದ್ದೇಶ ಅದರಲ್ಲಿದೆಯೆಂಬುದನ್ನು ಸ್ಪಷ್ಟಗೊಳಿಸಿದರು "ಅಮೇರಿಕೆಯ ಧೋರಣೆಯೂ ಸುರಕ್ಷಿತತೆಯೂ ಇದರಲ್ಲಿ ಸಿಗಿಬಿದ್ದಿವೆ"ಯಾದುದರಿಂದಲೇ ಈ ಔದಾರ್ಯ ತೋರಿಸಬೇಕಾಗಿದೆಯೆಂದು ಅವರು ಹೇಳಿದರು. ಈ ಸುರಕ್ಷಿತತೆ ಯಾರಿಂದ ಗಂಡಾಂತರಕ್ಕೊಳಗಾಗಿದೆಯೆಂಬದನ್ನೂ ಅವರು ಮರೆಮಾಚಲಿಲ್ಲ. ಕಮ್ಯುನಿಸ್ಟರ ನೇತೃತ್ವದಲ್ಲಿ ಗ್ರೀಸಿನಲ್ಲಿ ಸಶಸ್ತ್ರ ಗುಂಪುಗಳು ನ್ಯಾಯವಾಗಿ ಪ್ರತಿಷ್ಠಿತವಾದ ಸರಕಾರವನ್ನು ಬುಡಮೇಲು ಮಾಡಹೆಣಗುತ್ತಿವೆ. ನಮ್ಮ ಸಹಾಯವಿಲ್ಲದೆ ಗ್ರೀಕ ಸರಕಾರ ಯುದ್ಧದಿಂದೊದಗಿದ ಅಪಾರ ಕ್ಲೇಶಗಳನ್ನು ಸುಧಾರಿಸಿ ರಾಷ್ಟ್ರವನ್ನು ಚೇತರಿಸುವಂತೆ ಮಾಡಲಾರದು. ಈ ಸಶಸ್ತ್ರ "ಅಲ್ಪಸಂಖ್ಯಾಕರು" ಈ ದುಃಸ್ಥಿತಿಯ ಪ್ರಯೋಜನವನ್ನು ಪಡೆದು ಅಲ್ಲಿ ಮಾನವಸ್ವಾತಂತ್ರ್ಯ ಕಸಿದುಕೊಂಡು ಜನರನ್ನು ಗುಲಾಮರನ್ನಾಗಿ ಮಾಡುವ ಸರ್ವಾಧಿಕಾರಿ ಪ್ರಭುತ್ವವನ್ನು ಹೇರಲು ಪ್ರಯತ್ನಿಸುತ್ತಿದ್ದಾರೆ. ಇಷ್ಟು ಹೇಳಿ ಅವರು ಹೀಗಿಸಿದ್ದರೆ ಮಾಸ್ಕೋದ ಭಾಗ್ಯವಿಧಾತರು ಅವರಿಗೆ ಹೆಚ್ಚುಕೊಳ್ಳಬೇಕಾಗುತ್ತಿದ್ದಿಲ್ಲ. ಆದರೆ ಟ್ರೂಮನ್ನರು ಅದಕ್ಕಿಂತಲೂ ಮುಂದೆ ಹೋಗಿ, ಈಗಾಗಲೆ ಯುರೋಪಿಯನ ಅನೇಕ ರಾಷ್ಟ್ರಗಳಲ್ಲಿ, ಜನತೆಯ ಇಚ್ಛೆಗೆ ವಿರುದ್ಧವಾಗಿ, ಇಂಥ ಸ್ವಾತಂತ್ರ್ಯಸಹಾರಕ ಸರ್ವಾಧಿಕಾರಿ ಪ್ರಭುತ್ವ ಹದ್ದಿಸಲ್ಪಟ್ಟದೆಯೆಂದರು. ಅವುಗಳನ್ನು ಹೆಸರಿಸಿಯೂ ಹೇಳಿಸಿದರು. ಪೋಲಂಡ, ರುಮಾನಿಯಾ, ಬಲ್ಗೇರಿಯಾಗಳನ್ನು ಅವರು ಉದಾಹರಿಸಿದರು. ಈ ರಾಜ್ಯಗಳಲ್ಲಿ ಮಾಸ್ಕೋದ ಆಶ್ರಯದಲ್ಲಿ ಸ್ಥಾಪಿಸಲ್ಪಟ್ಟ ರಾಜ್ಯಗಳು ಈಚೆಗೆ ನಡೆಸಿದ ಚುನಾವಣೆಗಳು ಅನ್ಯಾಯವಾಗಿದ್ದವೆಂದು ಅವರು ಹೇಳಿದರು. ಆದುದರಿಂದ ಈ "ಸರ್ವಾಧಿಕಾರಿತ್ವ"ದ ಹಬ್ಬುಗೆ ಇನ್ನಷ್ಟು ಆಗುವ ಮೊದಲೇ ಅಮೇರಿಕೆ ಕೈಹಾಕಬೇಕೆಂದೂ ಅಮೇರಿಕೆಯೊಂದೇ ಸಹಾಯಮಾಡಲು ಸಮರ್ಥವಾಗಿದೆಯೆಂದೂ ಈ ಭಾಗದಲ್ಲಿ ಈ ವರೆಗೆ ಸಹಾಯ ಮಾಡುತ್ತಿದ್ದ ಬ್ರಿಟನ್ನು ಇನ್ನು ತಾ ೩೧—೩—೪೭ರ ನಂತರ ಸಹಾಯ ಮಾಡುವ ಸ್ಥಿತಿಯಲ್ಲಿಲ್ಲವೆಂದೂ ಅವರು ತಿಳಿಸಿದರು.

ತುರ್ಕಿಯ ಸಂಬಂಧದಲ್ಲಿ ಅವರಾಡಿದುದಂತೂ ಇನ್ನಷ್ಟು ಉದ್ರೇಕಗೊಳಿಸುವಂತಿತ್ತು. ತುರ್ಕಿಯ ಪರಿಸ್ಥಿತಿಯೂ ಗ್ರೀಸಿನಂತೆಯೆ ಇದ್ದು ಅಮೇರಿಕೆಯ ಸಹಾಯವಿಲ್ಲದಿದ್ದರೆ ಅದೂ ಸರ್ವಾಧಿಕಾರಿತ್ವದ ಒತ್ತಂಕೆಗೆ ತಲೆವಾಗಬೇಕಾದೀತೆಂದು ಅವರು ಹೇಳಿದರು. ಡಾರ್ಡನೆಲ್ಸ ಸಂಬಂಧದಲ್ಲಿ ತುರ್ಕಿಯೊಡನೆ ಹೊಸ ಒಪ್ಪಂದ ಮಾಡಿಕೊಳ್ಳಬೇಕೆಂದು ಹೊರಟ ರಶಿಯಾಕ್ಕೆ ಇದು ತೀವ್ರವಾದ ಅಡ್ಡಿಯೇ ಸರಿ.

ಟ್ರೂಮನ್ನರು ಈ ರಾಷ್ಟ್ರಗಳಿಗೆ ಬರಿ ಹಣಕಾಸಿನ ಸಹಾಯವನ್ನಷ್ಟೇ ಅಲ್ಲ, ಸೈನ್ಯ ಸಹಾಯವನ್ನು ಕೂಡ ಕೊಡಲು ಅಧಿಕಾರ ಕೊಡಬೇಕೆಂದು ಕಾಂಗ್ರೆಸ್ಸನ್ನು ಕೇಳಿದ್ದಾರೆ.

ಯುದ್ಧ ಸಾರಿದಂತೆಯೆ

ಟ್ರೂಮನ್ನರ ಈ ಬೇಡಿಕೆಯಿಂದ ರಶಿಯಾದ ಅಥವಾ ಕಮ್ಯುನಿಸ್ಟ್ ತತ್ವಜ್ಞಾನದ ಮೇಲೆ ಯುದ್ಧ ಸಾರಿದಂಯೆ ಆಗಿದೆಯೆಂಬುದು ನಿಸ್ಸಂಶಯ. ಅಮೇರಿಕನ್ ಕಾಂಗ್ರೆಸ್ಸು ಅವರ ಬೇಡಿಕೆಯನ್ನು ಮಾನ್ಯಮಾಡದಿರುವ ಸಂಭವವಿಲ್ಲ. ಯುದ್ಧ ಇನ್ನೂ ನಡೆದಿದ್ದಾಗಲೆ ಅಮೇರಿಕೆಯಲ್ಲಿ ರಶಿಯಾ ವಿರೋಧಿ ಪ್ರಚಾರ ನಡೆದೇ ಇತ್ತು. ಯುದ್ಧಾನಂತರ ಈ ಪ್ರಚಾರ ಇನ್ನಷ್ಟು ಉಗ್ರವಾಯಿತು. ಜಗತ್ತಿನಲ್ಲಿ ಮೊನ್ನಿನ ಯುದ್ಧಾನಂತರ ಉಳಿದು ಬಂದ—ಅಷ್ಟೇ ಏಕೆ ಹೆಚ್ಚು ಬಲಿಷ್ಠವಾಗಿ ಉಳಿದ—ಅಮೇರಿಕೆಯ ಬಂಡವಲುವಾದವೊಂದೇ ಕಮ್ಯೂನಿಝಂ ತತ್ವಜ್ಞಾನಕ್ಕೆ



ಅಧ್ಯಕ್ಷ ಟ್ರೂಮನ್ನರು

ನಿಜವಾದ ಶತ್ರುವಾಗಿ ಪರಿಣಮಿಸಿದುದು ಸ್ವಾಭಾವಿಕವೆ. ಕಮ್ಯೂನಿಝಂನಿಂದ ನಿಜವಾದ ಗಂಡಾಂತರವಿದ್ದುದೂ ಅದಕ್ಕೇ. ಅಮೇರಿಕೆಯನ್ನು ಬೆಕ್ಕಿನ ಬಿಡಾರ ಬೇರೆ ಪ್ರವೃತ್ತಿಯಿಂದ ಹೊರಗೆಳೆದು ಜಾಗತಿಕ ಘಟನೆಗಳಲ್ಲಿ ಆಸ್ಥೆ ವಹಿಸುವಂತೆ ಮಾಡಿದ ಅಧ್ಯಕ್ಷ ರೂಜವೆಲ್ಟರಂಥ ಪ್ರಭಾವಶಾಲಿ ರಾಜಕಾರಣಿಯೂ ಈ ಸಂಧಿಕಾಲದಲ್ಲಿಯೇ ಕಣ್ಮರೆಯಾದರು. ಪ್ರಗತಿಪರರಾಷ್ಟ್ರಗಳಲ್ಲಿ ಪರಸ್ಪರ ತಿಕ್ಕಾಟವುಂಟಾಗದಂತೆ ತಮ್ಮ ವ್ಯಕ್ತಿತ್ವವನ್ನು ಬೀರಿದ ರೂಜವೆಲ್ಟರ ನಿಧನದಿಂದ ಶಾಂತಿಪ್ರಿಯ ಜಗತ್ತಿಗೆ ಬಹಳ ಹಾನಿಯಾಯಿತೆಂದು ಭಾವೀ ಇತಿಹಾಸಕಾರನು ಬರೆಯದಿರನು. ರೂಜವೆಲ್ಟರ ಪಕ್ಷಕ್ಕೇ ಸೇರಿದವರಾದರೂ ಟ್ರೂಮನ್ನರು ತಮ್ಮ ದೇಶದ ಪ್ರತಿಗಾಮಿ ಪ್ರಭಾವಗಳ ಒತ್ತಾಯಕ್ಕೆ ತಲೆವಾಗಲೆಬೇಕಾಯಿತು. ಟ್ರೂಮನ್ನರು ವಿದೇಶಖಾತೆಯಲ್ಲಿದ್ದ ಹಲವು ರೂಜವೆಲ್ಟವಾದಿಗಳನ್ನು ತಳ್ಳಿಹಾಕಿ ಹೊಸಬರನ್ನು ನೇಮಿಸಿದರು. ಈ ಧೋರಣೆಯ ಕೊನೆಯ ಫಲಿತಾಂಶವಾಗಿ ಅಮೇರಿಕನ್ ಇತಿಹಾಸದಲ್ಲಿಯೆ ಅಭೂತಪೂರ್ವವಾಗಿ ಸೇನಾಪತಿಯೊರ್ವನನ್ನು — ಜನರಲ್ ಜಾರ್ಜ ಮಾರ್ಶಲ್ಲರನ್ನು—ವಿದೇಶ ಮಂತ್ರಿಪದಕ್ಕೇರಿಸಲಾಗಿದೆ. ರಶಿಯಾದೊಡನೆ ಜಗಳಬೇಡವೆಂದು ಉಪದೇಶಿಸುತ್ತ ಹೋದ ಹೆನ್ರಿ ವಾಲೇಸರಂಥವರು ಮಂತ್ರಿಮಂಡಲದಿಂದ ಹೊರಬೀಳಬೇಕಾಯಿತು. ಅವರೂ ಅವರಂಥ ಕೆಲವರೂ ಅಮೇರಿಕೆಯ ರಶಿಯನ್ ಧೋರಣೆಯನ್ನು ಸಡಿಲಿಸಬೇಕೆಂದು ಪ್ರಚಾರ ಮಾಡುತ್ತಿದ್ದರೂ ಅದರ ಪರಿಣಾಮ ಅಷ್ಟಾಗಿಲ್ಲ. ಮೇಲಾಗಿ ರೂಜವೆಲ್ಟರು ಕಣ್ಮರೆಯಾದ ನಂತರ ಅವರ ಡೆಮೊಕ್ರೆಟಿಕ ಪಕ್ಷ ದುರ್ಬಲವಾಗಿ ಅವರ ಶತ್ರುಗಳಾಗಿದ್ದ ಬಂಡವಳಗಾರ ರಿಪಬ್ಲಿಕನ್ನರು ಹನ್ನೆರಡು ವರ್ಷಗಳ ವನವಾಸದಿಂದ ಹೊರಗೆ ಬಂದು ಮೊನ್ನೆಯ ದ್ವಿವಾರ್ಷಿಕ ಚುನಾವಣೆಗಳಲ್ಲಿ ಯಶಸ್ವಿಯಾದರು. ಹೀಗೆ ವಿರೋಧಿ ಪಕ್ಷದ ಪ್ರಾಬಲ್ಯವುಳ್ಳ ಶಾಸನ ಸಭೆಗಳೊಡನೆ ತೊಡಕಿಲ್ಲದೆ ರಾಜ್ಯಭಾರ ಮಾಡಬೇಕಾದರೆ ಟ್ರೂಮನ್ನರು ರಶಿಯಾ ವಿರೋಧಿಗಳ ಮಾತಿಗೆ ಕಿವಿಗೊಡಲೇಬೇಕಾಯಿತು. "ರಶಿಯಾದೊಡನೆ ಬಿಗಿಯಾಗಿ ವರ್ತಿಸಿರಿ" ಎಂದು ಹಗಲೆಲ್ಲ ಶಂಖ ಹೊಯ್ಯುವದಾಯಿತು. ರಶಿಯಾದೊಡನೆ ನಿಕಟ ಭವಿಷ್ಯದಲ್ಲಿ ಯುದ್ಧದ ಪ್ರಸಂಗವನ್ನು ಬೇಕು ಬೇಕಾದಂತೆ ಪತ್ರಿಕೆಗಳಲ್ಲಿಯೂ ಆಕಾಶವಾಣಿಯಲ್ಲೂ ಚರ್ಚಿಸಲಾಯಿತು. ಈಗ ಟ್ರೂಮನ್ನರ ಭಾಷಣದ ನಂತರವಂತೂ ಅಮೇರಿಕೆ ರಶಿಯಾದ ಗೂಡ ಯುದ್ಧ ಹೂಡಿದಂತೆಯೆ ಆಗಿದೆಯೆಂದು ಮಾತಾಡಲ್ಪಡುತಿದೆ. ಟ್ರೂಮನ್ನರು ರಶಿಯಾವನ್ನು ಯುದ್ಧಪೂರ್ವ ಜರ್ಮನಿಯ ಸಾಲಿನಲ್ಲೆ ನಿಲ್ಲಿಸಲು ಹಿಂಜರಿಯಲಿಲ್ಲ.

ಔದಾರ್ಯದ ಮುಸುಕಿನಲ್ಲಿ

ಅಧ್ಯಕ್ಷ ಟ್ರೂಮನ್ನರು ಅಮೇರಿಕೆಯ ಹಿತವೂ ಇದರಲ್ಲಿ ಸಿಕ್ಕಿಕೊಂಡಿದೆಯೆಂದು ಹೇಳಿದರೂ ಔದಾರ್ಯದ ಸೋಗು ಹಾಕಿಕೊಂಡು ಜಗತ್ತಿನಲ್ಲಿ ವಾಕ್, ಪತ್ರಿಕಾ, ಆಕಾಶವಾಣಿ, ವ್ಯಕ್ತಿ ಸ್ವಾತಂತ್ರ್ಯಗಳನ್ನುಳಿಸುವ ಸಲುವಾಗಿ ಅಮೇರಿಕೆ ಸಹಾಯ ಮಾಡಬೇಕೆಂದು ಸುರಿದರು. ಪೋಲಂಡ್, ಬಲ್ಗೇರಿಯಾ, ರುಮೇನಿಯಾಗಳಲ್ಲಿ ಈ ಸ್ವಾತಂತ್ರ್ಯವನ್ನು ಅಪಹಾರ ಮಾಡಿದ "ಅಲ್ಪಸಂಖ್ಯಾಕರ" ಒತ್ತಾಯದ ಆಳಿಕೆ ಸ್ಥಾಪಿತವಾಗಿದೆಯೆಂದೂ ಆರೋಪಿಸಿದರು. ಈ ದೇಶಗಳಲ್ಲಿ ನಡೆದ ಚುನಾವಣೆಗಳು ನ್ಯಾಯ ಮತ್ತು ಅನಿರ್ಬಂಧವಾಗಿದ್ದಿಲ್ಲವೆಂದು ಬ್ರಿಟನ್ ಅಮೇರಿಕೆಗಳು ಆಗಾಗ್ಗೆ ಪ್ರತಿಭಟಿಸಿದ್ದು ನಿಜ. ಆದರೆ ಗ್ರೀಸಿನಲ್ಲಿ ಸದ್ಯ ಬ್ರಿಟಿಶ ಪಡೆಗಳ ಬಲದಿಂದ ಸ್ಥಾಪಿಸಲ್ಪಟ್ಟ ಸರಕಾರ ಈ ಮೇಲಿನ ಸ್ವಾತಂತ್ರ್ಯಗಳನ್ನೆಷ್ಟು ಕೊಟ್ಟದೆ? ಯಾವ ಸರಕಾರವೂ ದೋಷರಹಿತವಾಗಿಲ್ಲೆಂದು ಪ್ರಸ್ತುತ ಗ್ರೀಕ ಸರಕಾರದ ದೋಷಗಳನ್ನು ಮರೆಮಾಚಿದರು ಅಧ್ಯಕ್ಷ ಮಹಾಶಯರು. ಆದರೆ ಗ್ರೀಕ ಸರಕಾರದಲ್ಲಿ ಈಗ ಅಧಿಕಾರ ವಹಿಸಿರುವವರು ಸಾಮಾನ್ಯ ದೋಷಿಗಳೆ? ಆ ಸರಕಾರಕ್ಕೆ ವಿರೋಧ ತೋರಿಸುತಿರುವವರೆಲ್ಲ ವಿದೇಶಿ ಲಂಚ ತಿನ್ನುವ ಕಮ್ಯುನಿಸ್ಟರೆ? ಗ್ರೀಕ ಸರಕಾರದಲ್ಲಿ ದುಷ್ಕೀರ್ತಿ ಸಂಪನ್ನರಾಗಿರುವ ರಾಜಪಕ್ಷಪಾತಿಗಳೂ ಹಿಂದೆ ನಾಝಿಗಳೊಡನೆ ಸಹಕರಿಸಿದವರೂ ಇರುವರೆಂದು ನಿಷ್ಪಕ್ಷಪಾತಿಗಳಾದ ಸಂದರ್ಶಕರು ಒಪ್ಪಿದ್ದಾರೆ. ಬ್ರಿಟಿಶ ಪಡೆಗಳು ಗ್ರೀಸಿನಲ್ಲಿದ್ದಿಲ್ಲವಾದರೆ ಅವರು ಒಂದು ದಿನವೂ ಅಧಿಕಾರದಲ್ಲಿರುತಿದ್ದಿಲ್ಲವೆಂಬದು ಸರ್ವವಿದಿತ. ನಾಝಿಗಳು ಗ್ರೀಸನ್ನು ಮುತ್ತುವ ಮೊದಲು ಟ್ರೂಮನ್ನರಿಗೆ ಇಷ್ಟು ಅಪ್ರಿಯವಾದ ಸರ್ವಾಧಿಕಾರವೇ ಗ್ರೀಸಿನಲ್ಲಿ ನಡೆದಿತ್ತೆಂಬದನ್ನೂ ಈಗ ಅಧಿಕಾರಕ್ಕೆ ಬಂದವರಲ್ಲಿ ಆ ಸರ್ವಾಧಿಕಾರದ ನೇತೃಗಳೆ ಇರುವರೆಂಬದನ್ನೂ ಆ ಸರ್ವಾಧಿಕಾರ ರಶಿಯನ್ ಸರ್ವಾಧಿಕಾರದಂತೆ ಪ್ರಗತಿಶೀಲವಿರದೆ ಪ್ರತಿಗಾಮಿಯಾಗಿತ್ತೆಂಬದನ್ನೂ ಮರೆಯುಕೂಡದು. ಈಗ ಸರಕಾರದ ವಿರುದ್ಧ ಹೋರಾಡುವವರಲ್ಲಿ ಅನೇಕರು ಕಮ್ಯುನಿಷ್ಟರಲ್ಲ. ತುರ್ಕಿಯಲ್ಲಿ ಆಳುತ್ತಿದ್ದವರನ್ನೂ ಪ್ರಜಾತಂತ್ರವಾದಿ

—ಹಿಂದೆ ಪುಟಕ್ಕೆ

Reg. No. B. 3148 LICENCE No. 3 Licence to Post without Prepayment Karmaveer 17-3-47



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಥಡೆ, ಭವಿಷ್ಯಕಥನ ಕಾರ್ಯಾಲಯ, ಖಡ್ಡೇಬಜಾರ ಬೆಳಗಾವಿ

ಮಾರ್ಚ ೧೭ ರಿಂದ ೨೩ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ ಆದರೆ ಮಕ್ಕಳಿಂದ ಆಗುವ ಅಪ್ರಿಯ ವರ್ತನದಿಂದ ಪ್ರಾಪಂಚಿಕ ತೊಂದರೆ ಹೆಚ್ಚು. ಉದ್ಯೋಗದಲ್ಲಿ ಪ್ರಗತಿ ಸ್ವಲ್ಪೇ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ ಆಗುವದಲ್ಲದೆ ಅವಚಿತ ಲಾಭದ ಸಂಭವವೂ ಇದೆ ಮಿತ್ರ ಸುಖ ಉತ್ತಮ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ಆದರೆ ಅಧಿಕಾರಿಗಳು ನಿಮ್ಮ ಮೇಲೆ ಹಲ್ಲು ಕೆರೆಯುವರು. ಪ್ರವಾಸಕ್ಕಿಂತ ಪತ್ರವ್ಯವಹಾರ ಮತ್ತು ಅದಕ್ಕಿಂತ ಭೆಟ್ಟಿಯ ಕೆಲಸಗಳು ಹೆಚ್ಚು ಅನುಕೂಲ. ಅಶ್ವಿನಿಯ ೧, ೩ ಮತ್ತುಭರಣಿಯ ೧, ೩ ಚರಣಗಳಿಗೆ ತೊಂದರೆ ಕಡಮೆ, ತಾ. ೧೭, ೧೮, ೧೯, ೨೦ ಅನು

ವೃಷಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ ಆದರೆ ಹೆಂಡತಿಯ ಮರ್ಜಿ ಬಹಳ ಕಡಮೆ ಉದ್ಯೋಗ ದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಮತ್ತು ನಷ್ಟವಾದ ಒಂದು ವಸ್ತುವಿನ ಪ್ರಾಪ್ತಿ ಆದರೂ ಕೆಲವೊಂದು ವಿವಕ್ಷಿತ ಮಾತಿನ ಬಗ್ಗೆ ಗುಪ್ತ ಚಿಂತೆ ಹತ್ತಿ ಮನಸ್ಸು ಅತ್ಯಂತ ಬೇಜಾರಗೊಳ್ಳುವದು, ಮಕ್ಕಳಲ್ಲಿ ಪ್ರಶಂಸನೀಯ ಉನ್ನತಿ. ಪ್ರತಿಯೊಂದು ಕೆಲಸ ದಲ್ಲಿ ಮೊದಲು ತೊಂದರೆ ಅನಂತರ ಅದು ಬಹಳ ಯಶಸ್ವಿ—ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ವಿಜಯ. ಮಿತ್ರಸುಖ ಉತ್ತಮ. ಪ್ರವಾಸಾದಿ ಕೆಲಸ ಹಿತದ್ದು. ರೋಹಿಣಿಗೆ ಹೆಚ್ಚು ಅನುಕೂಲ. ತಾ. ೧೮, ೧೯, ೨೨, ೨೩ ಅನುಕೂಲ.

ಮಿಥುನ

ಪ್ರಕೃತಿ ನಿಮ್ಮದು ಉತ್ತಮ ಆದರೆ ಪತಿ ಪತ್ನಿಯದು ಬಹಳ ಕೆಡುವದು. ಎಲ್ಲವಿಷಯಗಳಲ್ಲಿ ಪ್ರಾಪಂಚಿಕ ಸುಖ ತೊಂದರೆಯದೆ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಮನಸಿನಂತೆ ಆದರೆ ವೆಚ್ಚವೂ ಅಮರ್ಯಾದಿತ. ವಿದ್ಯೆ ಇಲ್ಲವೆ ಬುದ್ಧಿಯಲ್ಲಿ ಹಿಮ್ಮೆಡುವದು, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯೂ ಹಿಮ್ಮೆಡುವದು ಆದರೆ ಶತ್ರುಗಳಿಗೂ ಬಹಳ ತೊಂದರೆ ಪ್ರವಾಸ ಕಿಂಚಿತ್ ಆದರೆ ಭೆಟ್ಟಿ ಬಹಳ ತೊಂದರೆಯದು. ಆದರೆ ಪತ್ರವ್ಯವಹಾರ ಉತ್ತಮ. ಆರ್ದ್ರೆಗೆ ತೊಂದರೆ ಕಡಮೆ. ತಾ. ೨೦, ೨೧, ೨೨ ಅನುಕೂಲ.

ಕರ್ಕ

ಪ್ರಕೃತಿ ಸಾಧಾರಣವೆ ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖವೂ ಬಹಳ ಉತ್ತಮ. ಪ್ರಿಯಜನರ ಸಹವಾಸ. ಉತ್ತಮೋತ್ತಮ ವಾಹನ ಯೋಗ, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಆದರೆ ನಿಂದ್ಯ ಕೆಲಸ ಮಾಡಿದ ಇಲ್ಲವೆ ಲಂಚ ಗುಳಿತನದ ಲೋಕಾಪವಾದ ಬರುವ ಅಂಜಿಕೆ. ವಾದ ದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸ ಮತ್ತು ಭೆಟ್ಟಿಯು ಪತ್ರವ್ಯವಹಾರಕ್ಕಿಂತ ಅನುಕೂಲ. ಪುಷ್ಯಕ್ಕೆ ತೊಂದರೆ ಕಡಮೆ. ತಾ. ೧೮, ೧೯, ೨೩ ಅನುಕೂಲ.

ಸಿಂಹ

ಪ್ರಕೃತಿ ಅಲ್ಪ ಸ್ವಲ್ಪ ಕೆಡುವದು ಹೆಂಡತಿಯದೂ ಹಾಗೆಯೇ ಅಲ್ಲದೆ ರತಿ ಸುಖದಲ್ಲಿ ಉಳಿದ ಕಾರಣಗಳಿಂದಲೂ ಬಹಳ ನಿರಸ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅಷ್ಟಕ್ಕಷ್ಟೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭವೂ ಪ್ರತಿಷ್ಠೆಗಿಂತ ಹೆಚ್ಚು ಅನುಕೂಲ ವಿದ್ಯೆ ಇಲ್ಲವೆ ಬಾದ್ಧಿಕ ಕೆಲಸದಲ್ಲಿ ಅಪಯಶಸ್ಸು. ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹಿಮ್ಮೆಡುವದು. ಸ್ತ್ರೀಯರು ಶತ್ರುತ್ವ ವಹಿಸುವರು. ಪ್ರವಾಸ ಮತ್ತು ಪತ್ರವ್ಯವಹಾರವೂ ಭೆಟ್ಟಿಗಿಂತ ಹೆಚ್ಚು ಅನುಕೂಲ. ಮಘಾದ ೨ ಮತ್ತು ೪ ಮತ್ತು ಪೂರ್ವಾದ ೨ ಮತ್ತು ೪ ಚರಣಗಳಿಗೆ ತೊಂದರೆ ಕಡಮೆ. ತಾ. ೧೭, ೨೦, ೨೧ ಅನುಕೂಲ.

ಕನ್ಯಾ

ಪ್ರಕೃತಿ ಸ್ವಲ್ಪ ಕೆಡುವದು, ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ ಆದರೆ ಆಸ್ತಿಯಲ್ಲಿ ಕೆಲ ಹಳ ಹೊಸ ಸಂಗತಿಗಳ ಪುನರ್ಜೀವನ, ಉದ್ಯೋಗದಲ್ಲಿ ಪ್ರಗತಿ ಹೆಚ್ಚನದು ಆದರೆ ಪ್ರತಿಷ್ಠೆ ಮತ್ತು ಲಾಭ ಆ ಮಾನದಿಂದ ಬಹಳ ಕಡಮೆ, ವಾದ ದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಾಮಾನ್ಯವೆ ಆದರೆ ಅನುಕೂಲತೆಯ ಗಾಳಿ ಬೀಸುವದು. ಪ್ರವಾಸ ಮತ್ತು ಭೆಟ್ಟಿಯು ಪತ್ರವ್ಯವಹಾರಕ್ಕಿಂತ ಹೆಚ್ಚು ಅನುಕೂಲ ಹಸ್ತಾಕ್ಕೆ ತೊಂದರೆ ಕಡಮೆ. ತಾ, ೧೮, ೧೯, ೨೩ ಅನುಕೂಲ.

ತುಲಾ

ಪ್ರಕೃತಿ ಅನುಕೂಲ, ಸ್ತ್ರೀ ಸುಖ ಮನಸಿನಂತೆ. ಆದರೆ ಮಿತ್ರರಲ್ಲಿಯ ವಿರೋಧದಿಂದ ಮನಸ್ಸು ಯಾವಾಗಲೂ ಬೇಜಾರಗೊಳ್ಳುವದು ಉದ್ಯೋಗದಲ್ಲಿ ಪ್ರಗತಿ ಹೆಚ್ಚು ಆದರೆ ಪ್ರತಿಷ್ಠೆ ಕಡಮೆ ಮತ್ತು ಲಾಭ ವಂತೂ ಬಹಳ ಕಡಮೆ. ಹೊಸ ಹೊಸ ಯೋಜನೆಗಳಲ್ಲಿ ಮಾತ್ರ ಬಹಳ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಅನುಕೂಲ ಆದರೆ ಪ್ರತ್ಯಕ್ಷ ಲಾಭ ಕಡಮೆ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರ ವ್ಯವಹಾರ ಹೆಚ್ಚು ಅನುಕೂಲ. ಸ್ವಾತಿಗೆ ತೊಂದರೆ ಕಡಮೆ. ತಾ, ೧೭, ೨೦, ೨೧ ಅನುಕೂಲ.

ವೃಶ್ಚಿಕ

ಪ್ರಕೃತಿ ಸಾಧಾರಣವೆ. ಹೆಂಡತಿಗೂಡ ಮೇಲಿಂದ ಮೇಲೆ ಮತಭೇದ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಮಾಧಾನಕರ. ಮಕ್ಕಳಲ್ಲಿ ಒಬ್ಬರ ಮನನೀಯ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಆದರೆ ಆಯಾ ಕೆಲಸ ಸಂಭವಿಸುವವರೆಗೆ ಜೀವದ ಮೇಲೆ ಬರುವಷ್ಟು ಶ್ರಮ ಮತ್ತು ನಾಚಿಕೆ ಹುಟ್ಟುವಂತೆ ಎರಡನೆಯವರಿಗೆ ಹಾಜೀ ಹಾಜೀ ಮಾಡುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಆದ ಶತ್ರುಗಳು ಏನೂ ಕಾಳಜಿ ಮಾಡದೆ ನಗ್ನನೃತ್ಯ ಮಾಡುವರು, ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ಪ್ರವಾಸ, ಭೆಟ್ಟಿ ಮತ್ತು ಪತ್ರವ್ಯವಹಾರ ಸ್ವಲ್ಪ ತೊಂದರೆಯದೇ ಅನುರಾಧೆಗೆ ತೊಂದರೆ ಕಡಿಮೆ. ತಾ. ೧೭, ೧೮, ೧೯, ೨೩ ಅನುಕೂಲ.

ಧನು

ಪ್ರಕೃತಿಯಲ್ಲಿ ಸ್ವಲ್ಪ ಕುರುಕುರಿ. ಆದರೆ ಸ್ತ್ರೀ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ತುಂಬ. ಆದರೆ ಕಿರಕಳ ವೆಚ್ಚವೂ ಬಹಳ. ಆಪ್ತರು ಮತ್ತು ಆಶ್ರಿತರು ವಿಪರೀತ ಪೇಚಿನ ಪ್ರಸಂಗವುಂಟು ಮಾಡಿ ಗೊಂದಲದಲ್ಲಿ ಹಾಕುವ ಸಾಹಸ ಮಾಡುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಆದರೆ ಅಧಿಕಾರಿಗಳ ಲಹರಿಯಿಂದ ಬಹಳ ತೊಂದರೆ. ಮಿತ್ರ ಸುಖ ಅನುಕೂಲ, ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಮೂಲಾದ ೨ ಮತ್ತು ೪ ಮತ್ತು ಪೂರ್ವಾಷಾಢಾದ ೨, ೪ ಚರಣಗಳಿಗೆ ತೊಂದರೆ ಕಡಮೆ. ತಾ. ೧೮, ೧೯, ೨೦, ೨೧ ಅನುಕೂಲ.

ಮಕರ

ನಿಮ್ಮ ಪ್ರಕೃತಿ ಅನುಕೂಲ, ಆದರೆ ಹೆಂಡತಿಗೆ ಸ್ವಲ್ಪ ಕ್ಲೇಶ ಮಕ್ಕಳಲ್ಲಿ ಉನ್ನತಿ. ಆದರೆ ನಿಮ್ಮ ಗೂಡ ಅವರ ವರ್ತನ ಬಹಳ ಕೆಟ್ಟ ರೀತಿಯಿಂದ, ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ತೋರಿಕೆಯಲ್ಲಿದ್ದ ಟಿಂಕಿಯಂತೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮವೆ. ಆದರೆ ಆ ಬಗ್ಗೆ ಜನರಲ್ಲಿ ಬಹಳ ಕುಕಲ್ಪನೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹಿಮ್ಮೆಡುವದು. ಪ್ರತಿಯೊಂದು ಮಾತಿನಲ್ಲಿ ಮನಸಿನ ವಿರುದ್ಧ ವರ್ತಿಸುವ ಕಟು ಪ್ರಸಂಗ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಸ್ವಲ್ಪ ಅನುಕೂಲ. ಶ್ರವಣಾಕ್ಕೆ ತೊಂದರೆ ಕಡಮೆ. ತಾ. ೨೦, ೨೧, ೨೨, ೨೩ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೆ, ಹೆಂಡತಿಗೂಡ ಮೇಲಿಂದ ಮೇಲೆ ವಿರೋಧ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ, ಮಕ್ಕಳಲ್ಲಿ ಉನ್ನತಿ. ಉದ್ಯೋಗ ದಲ್ಲಿ ಪ್ರಗತಿ ಮತ್ತು ಲಾಭದ ಮಾನದಿಂದ ಪ್ರತಿಷ್ಠೆಯ ಉತ್ತಮ. ಮಿತ್ರತ್ವದಲ್ಲಿ ಕಿಂಚಿತ್ ವಿರೋಧ. ಪರಸ್ತ್ರೀ ಬಗ್ಗೆ ಕುಬುದ್ಧಿಯಿಂದ ಸ್ವಲ್ಪ ಅತ್ಯಲ್ಪ ಕಾಲ ಲ್ಲಾಡಿಸುವ ಮೋಹ, ಅಲ್ಲದೆ ಅನೇಕ ಬಗೆಯ ಧ್ವನಿಯ ಕಡೆಗೆ ಮನಸಿನ ಒಲವು. ಪ್ರವಾಸ ತೊಂದರೆಯದು. ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ ಮತ್ತು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಶತತಾರಿಕೆಗೆ ತೊಂದರೆ ಕಡಮೆ. ತಾ. ೨೦, ೨೧, ೨೨, ೨೩ ಅನುಕೂಲ.

ಮೀನ

ಪ್ರಕೃತಿ ಉತ್ತಮ ಆದರೆ ಹೆಂಡತಿ ಮತ್ತು ಮಕ್ಕಳೊಡನೆ ಮೇಲಿಂದ ಮೇಲೆ ಮತಭೇದವಾಗುವದರಿಂದ ಪ್ರಾಪಂಚಿಕ ಸುಖ ಮಾತ್ರ ಬಹಳ ಕಡಮೆ ಉದ್ಯೋಗ ದಲ್ಲಿ ಪ್ರಗತಿ ಬಹಳ ಕಡಮೆ ಪ್ರತಿಷ್ಠೆಯೂ ಕಡಮೆಯಾಗುತ್ತ ನಡೆವುದು. ಆದರೆ ಆ ಮಾನದಿಂದ ದ್ರವ್ಯ ಲಾಭ ಅನುಕೂಲ. ಕಿರುಕಳ ವೆಚ್ಚವೂ ಬಹಳ. ಆದರೆ ಮಾತಿನಲ್ಲಿ ಆಪಶಬ್ದ ಮತ್ತು ಹರಕು ಮುರುಕು ಹೆಚ್ಚು ವಧರಿಂದ ನಿಮ್ಮ ಮೂಗಿನಲ್ಲಿ ಸು ಕೂದಲು ತೆಗೆವ ಅಂಜಿಕೆಯಲ್ಲಿ. ಜಾಡಿ ಹೇಳದ ಆರೋಪ ವಾದ ದಲ್ಲಿ ಸ್ಪರ್ಧೆಯಲ್ಲಿ ಹಿಮ್ಮೆಡುವದು. ಪ್ರವಾಸ ಪತ್ರವ್ಯವಹಾರಕ್ಕಿಂತ ಭೆಟ್ಟಿ ಸ್ವಲ್ಪ ಅನುಕೂಲ ಆದರೆ ಉತ್ತರಾ ಭಾದ್ರಪದಕ್ಕೆ ತೊಂದರೆ ಕಡಮೆ, ತಾ. ೧೭, ೧೮, ೨೩ ಅನುಕೂಲ.

ಪುಷ್ಯಮಾಸದ ಕಥೆಗಳು

೧೫ ನೇ ಪುಟದಿಂದ ಮುಂದರಿದುದು

ಪುಷ್ಯ ಮಾಸದ ಪಟ್ಟಿ

ಎ. ವೆಂ. ಪುತ್ರಾಯರ ನರಮೇಧ, ವಸಂತರ ಜೋಡಿ ಕುಸ್ತಿ (ಅಂತರಂಗ) ಟಿ. ಬಿ. ಸ್ವಾಮಿಯವರ ಹೆತ್ತೊಡಲು, ಶಿವಾನಂದ ಜೋಶಿಯವರ ಬೆಳ್ಳಿಯ ಬಟ್ಟಲು (ಸಂಜಯ) ಶ್ರೀನಿವಾಸರ ಚಂದ್ರವದನಾ (ಜೀವನ) ವರದರಾಜ ಹುಯಿಲಗೋಳರ ಉದಯ ಉತ್ತಮವಾದ ಕತೆಗಳು. ಹೆತ್ತೊಡಲು ಕತೆಯು ಮೊಪಾಸಾಂತರ ಕತೆಯನ್ನು ಹೋಲುವದು. ಅಂತರಂಗದ ಎಪ್ರಿಲ ಸಂಚಿಕೆಯಲ್ಲಿ ಕೇ. ಶ್ರೀಕಂಠರು ನಿಷ್ಫಲ ನಿರೀಕ್ಷೆ ಎಂಬ ಹೆಸರಿನಿಂದ ಅನುವಾದಿಸಿರುವರು ಸಮ್ರಾಟನಾದ ಮೊಪಾಸಾಂತನ ಬರೆವ ರೀತಿ ಪ್ರತಿಪಾದಿಸುವ ಕತೆ ಇಲ್ಲಿ ಇಲ್ಲ—ಕತೆಯ ವಸ್ತುವನ್ನು ಅನುಕೂಲತೆಯಲ್ಲಿ ಇಲ್ಲಿ ರೂಪಾಂತರಿಸಿಕೊಂಡು ಸ್ವತಂತ್ರವೆಂಬ ಮುಸುಕಿನಲ್ಲಿ ನಿಲ್ಲಿಸಲಾಗಿದೆ. ಜೀವ ಒಂದೆ. ಆದರಿಂದ ಮೇಲಿನ ಎಲ್ಲ ಕತೆಗಳಲ್ಲಿ ಉದಯ ಸರ್ವಶ್ರೇಷ್ಠವೆಂದು ಹೇಳಬೇಕು. ಕತೆಯು—ಲಕ್ಷ್ಮಿ ಬಸಪ್ಪನ ಹೆಂಡತಿ. ಯುದ್ಧದಲ್ಲಿ ಬಸಪ್ಪನು ಸತ್ತನೆಂದು ವಾರ್ತೆ ಬರುವದು ಆದರೆ ಅವನು ಸುಭಾಸ ಸೈನ್ಯವನ್ನು ಸೇರಿ ಬದುಕಿದ ವೀರ. ಯುದ್ಧದಲ್ಲಿ ಇದು ತಿಳಿಯದು. ಮೇಲಧಿಕಾರಿಗಳು ಅವನ ಹೆಂಡತಿಗೆ ಸತ್ತನೆಂದು ತಿಳಿಸುವರು. ಅಳುವಳು, ಉಳಿದ ಪಗಾರ ಲಕ್ಷ್ಮಿಯ ಕೈಗೆ ಕೊಡುವರು, ಅವಳಿಗೆ ಅದು ಬೇಕಿರಲಿಲ್ಲ. ಮನೆಗೆ ಬರುವಳು ಮನೆಯಲ್ಲಿ ಬಂದು ಬಂದು ಗಂಡನ ನೂರು ನೆನಪು ಕಣ್ಣಿಗೆ ಕಟ್ಟುವವು. ದುಃಖವನ್ನು ಚಿಮ್ಮಿ ತರುವವು. ಊರಲ್ಲಿ ಒಬ್ಬ ಯಜಮಾನ-ಹಿರಿಯ ಮಾತುನಂಬಿಗಸ್ತನೆಂದ. ಜನರ ತಿಳಿವಳಿಕೆ ಆದರೆ ಲಕ್ಷ್ಮಿಯ ರೂಪಕ್ಕೆ ಮರುಳಾಗುವ. ಬುಟ್ಟಿಗೆ ಹಾಕಬೇಕೆಂದ. ವಿಧಿಯು ಅವನಿಗೆ ಕೆಲದಿನದ ಸಮಯ ಒದಗಿಸಿದ್ದರೆ ಏನಾಗುತ್ತಿತ್ತೋ! ಆದರೆ ಸುಭಾಸ ಸೈನಿಕರ ಬಿಡುಗಡೆಯಾಯಿತು. ಬಸಪ್ಪ ಮನೆಗೆ ಬಂದ. ದೈವ ಲೀಲೆಯೋ ಸರಿ. ದಂಪತಿಗಳು ಒಂದಾದರು ಇಷ್ಟೇ!

ಕತೆಯಲ್ಲಿ ಆಕಸ್ಮಿಕಗಳೇ ಬಹಳ. ಪ್ರಸಂಗವೇ ಅಂಥದಿದೆ. ಕಡಲಿನ ರಾಣಿಯಾದ ಬ್ರಿಟಿಷ ಪಡೆಯು ಆಕಸ್ಮಿಕ ಪ್ರೇರಣೆಯಿಂದ ಆಕಸ್ಮಿಕವಾಗಿ ಕಣ್ಣಿಗೆ ಮಣ್ಣೆರಚಿ ಓಡಿದ ಸುಭಾಸಚಂದ್ರರನ್ನು ಕೂಡುವವು. ರಾಜದ್ರೋಹದ ಮಹಾಪರಾಧದ ದವಡೆಯಲ್ಲಿ ಸಿಕ್ಕ ಸೈನಿಕರು ಅಯ್ಯನ್ನೆ ನ್ಯಾಯಾಲಯದಿಂದ ಆಕಸ್ಮಿಕವಾಗಿ ಬಿಡುಗಡೆ ಹೊಂದುವರು. ಬದುಕಿದ ಗಂಡನು ಸತ್ತಿರುವ ನೆಂಬ ವಾರ್ತೆಯಿಂದ ಕೆಲದಿನ ತಳಮಳಿಸುವಳು. ಯಜಮಾನನ ಆಕಸ್ಮಿಕ ದಾರುಣ ಕಾಮುಕತೆಯ ಬಾಯಿಗೆ ಬೀಳಬೇಕು. ಕೊನೆಗೆ ಆಕಸ್ಮಿಕವೇ ಅವಳನ್ನು ಬದುಕಿಸುವದು ಹಳ್ಳಿಯ ಹೆಂಗಸಿನಲ್ಲಿ ಗಂಡನ ಮೇಲಿನ ಭಕ್ತಿಯನ್ನು ಯಾವ ಕೋಲಿನಿಂದ ಅಳೆದರೂ ಸುಶಿಕ್ಷಿತರ ಆಳತೆಗೆ ಅಳವಡಿಸುವದು. ದುಃಖದಶಿಖರವನ್ನೇರಬಯಸಿದ ಕತೆಯು ಒಂದು ಉಸುರಿನಲ್ಲಿ ಆನಂದಮಯವಾಗುವದು. ಇದಕ್ಕೇ ಪಟ್ಟಗಟ್ಟಬೇಕು.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿಸಿ ಪ್ರಕಟವಾಯಿತು

ಸಣ್ಣ ಕಥೆ

ವಧು

ಎಸ್. ಎಸ್. ಗವಣಿಕರ ಬಿ. ಎ.

(ಆಂಗ್ಲ ಕತೆಯೊಂದರಿಂದ ಸೂಚಿತವಾದುದು)

ಅವರೆಲ್ಲರೂ ನಾನು ಸತ್ತಿರುವೆನೆಂದು ತಿಳಿದಿರುವರು. ನೀವು ಸಿ. ಆಯ್. ಡಿ. ಅಧಿಕಾರಿಯಾಗಿರದಿದ್ದರೆ ಮಾತ್ರ ನಾನು ಓಡಿಬಂದವನೆಂದೂ ವೇಷ ಬದಲಿಸಿದವನೆಂದೂ ಹೇಳುವೆ.

ಆರು ವರುಷಗಳಾದ ಮೇಲೆ ನಾನು ಹಳ್ಳಿಗೆ ಮರಳಿ ಬಂದೆ. ಆಗ ನನ್ನ ಮನೆಯು ಸುಟ್ಟು ಹರಿದಾರವು ತೊಟ್ಟಿಯ ಹಾದಿಗಾಗಿ ದೂರಿನ ಪಟ್ಟಣಕ್ಕೆ ಹೋಗಿರುವದೆಂದು ತಿಳಿಯಿತು.

ಆಗ ನಾನೊಬ್ಬ ಅಟಿಗೆ ಸಾಮಾನು ಮಾರುವೆ. ಪ್ರತಿಯೊಂದು ಓಣಿಯ ಮನೆಯ ಮುಂದೆ ಅಟಿಗೆಯ ಬುಟ್ಟಿಯನ್ನು ಹೊತ್ತುಕೊಂಡು ತಿರುಗುತ್ತಿರುವೆ. “ಅಕ್ಕತಂಗಿಯರ ಆಟ್ಯಾಡ ಅಟಿಗೆ ಕೊಳ್ಳಿರಿ ಕೊಳ್ಳಿರಿ” ಎಂದು ಒದರುವದೇ ನನ್ನ ನಿರಂತರ ಪಲ್ಲವಿ.

ಹೀಗೊಂದು ದಿನ ನಾನು ಹಾದಿಗುಂಟ ನಡೆದಾಗ ಒಂದು ಮಗುವು ‘ ಅವ್ವಾ ಗೊಂಬಿ ’ ಎಂದು ಧ್ವನಿ ಕೇಳಿಸಿತು. ಆ ಮಗುವಿನ ಬಳಿ ನನ್ನ ಮನಸ್ಸು ಹರಿಯಿತು. ಎಂಥ ಅಂದವಾದ ಮಗುವದು! ಅದರ ಬಳಲಿಸುವ ಗುಂಗುರಕೂದಲು, ಮೋಹಕ ಮುಖಮುದ್ರೆ, ಗುಲಾಬಿಗಲ್ಲ, ಹೊಳೆವ ಕಣ್ಣು, ಬೆಳ್ಳಿಬಣ್ಣದ ಹಲ್ಲು,—ಮೊದಲಾದವು— ಏನೋ ದೂರದ ಸೌಂದರ್ಯದ ಸಾಮ್ರಾಜ್ಯಕ್ಕೆ ನನ್ನನ್ನು ಎಳೆದೊಯ್ಯುವಂತೆ ಭಾಸವಾಯಿತು. ಆದರೆ ಅದು ಹುಡುಗನೇ ಹೊರತು ಹುಡುಗಿಯಲ್ಲವೆಂದು ಮನವರಿಕೆಯಾದಾಗ ನಿರಾಶೆ ಆವರಿಸಿತು.

ಏನೇ ಆಗಲಿ ಆ ಮಗುವನ್ನು ಕಂಡಾಗಿನಿಂದ ನಾನು ಅದಕ್ಕೆ ಮನಸೋತದ್ದು ನಿಜ. ಅರೆಮುಚ್ಚಿದ ಬಾಗಿಲ ಹಿಂದೆ ಆ ಹೆಂಗಸು ಮೂರ್ತಿಯಂತೆ ಮಿಕಿಮಿಕಿ ನೋಡುತ್ತ ನಿಂತಾಗ ನನ್ನ ಹೆಜ್ಜೆ ತಡವರಿಸುತ್ತಿದ್ದವು. ಕೂಡಲೇ ಆ ಮಗುವು ಬರುತ್ತಿತ್ತು. ಅಟಿಗೆ ಬೇಕೆಂದು ತಾಯಿಗೆ ದುಂಬಾಲು ಬೀಳುತ್ತಿತ್ತು. ಇನ್ನೆ ಅರಿಯದೋ ಎಂದು ನಾನು ಎಲ್ಲ ಅಟಿಗೆ ಸುರುವಿದೆ ನೆಲದ ಮೇಲೆ. ಅದರ ಮುಂದೆ ಎರಡು ಗೊಂಬೆ ತೆಗೆದುಕೊಂಡಿತದು. ಬಹುತರವಾಗಿ ಆ ತಾಗೆ ಗಿಳಿಗಳ ಬಣ್ಣವೇ ಅಷ್ಟು ಚಂದ ತೋರಿರಬಹುದು ಅದಕ್ಕೆ. ಅವರ ತಾಯಿ ನನಗೆ ರೂಪಾಯಿ ಕೊಟ್ಟಳು. ‘ನನ್ನ ಕಡೆಗೆ ಚಿಲ್ಲರ ಇಲ್ಲ; ಮತ್ತೊಂದು ದಿನ ಕೊಡಿರಿ’ ಎಂದು ಅಂದೆ.

ಸ್ವಲ್ಪ ತಡೆ ಎಂದು ಹೇಳಿ ಆಕೆ ಒಳ ಹೋದಳು. ಅಷ್ಟರಲ್ಲಿ ನಾನು ಬುಟ್ಟಿಯನ್ನು ಹೊತ್ತುಕೊಂಡು, ತಲೆಯಲ್ಲಿ ನೂರಾರು ಪ್ರಶ್ನೋತ್ತರಗಳ ಮಾಲಿಕೆ ತುಂಬಿಕೊಂಡು ಅವಸರದಿಂದ ನಡೆದೆ.

ಮರುದಿನ ನಾನು ಅಲ್ಲಿಗೆ ಬಂದಾಗ ಆ ಮಗು ಕೈಯಲ್ಲಿ ತಾಗಿ ಗಿಳಿ ಹಿಡಿದುಕೊಂಡು ಬಿಕ್ಕಿಬಿಕ್ಕಿ ಅಳುತ್ತಿತ್ತು. ತಾಯಿ ಪರದೆಯ ಹಿಂದೆ ನಿಂತಿದ್ದಳು. ‘ಅಟಿಗೆಯ ರೊಕ್ಕ ತೆಗೆದುಕೊಳ್ಳದೆ ಏಕೆ ಹೋದಿ’ ಎಂದು ಆಕೆಯ ಸವಾಲು. ಅದಕ್ಕೆ ಪ್ರತ್ಯುತ್ತರ ಕೊಡದೆ ಆ ಮಗುವಿನ ಹೆಸರೇನು ಎಂದು ಕೇಳಿದೆ ನಾನು.

ಆಕೆ ಸಿಟ್ಟಿನಿಂದ—‘ತಂದೆಯನ್ನು ಕಳೆದುಕೊಂಡು ಪರದೇಶಿಯಾದ ಮಗುವಿನ ಬಗ್ಗೆ ನಿನಗೆ ಕೇಳುವದೇನು ಬಂತು?’ ಎಂದು ಅಂದಳು. ಅವನ ಹೆಸರು ಮುರಲಿ ಎಂದು ನುಡಿಯುತ್ತ ಒಳಗೆ ಹೋದಳು. ಮಗುವು ಇನ್ನೂ ಅಲ್ಲಿಯೇ ಇದ್ದಿತು. ನಾನು ಹೋಗಲೆ ಎಂದು ಕೇಳಿದಾಗ ದಿನಾಲು ನೀನು ಇಲ್ಲಿ ಬರಲೇಬೇಕು ಎಂದು ಹೇಳಿತು. ನನಗಾದರೂ ಅದರ ವಿಷಯಕ್ಕೆ ಆಕರ್ಷಣೆಯ ವ್ಯಾಮೋಹ ಹುಟ್ಟಿದ್ದು ಸುಳ್ಳಲ್ಲ.

ಆ ಮಗುವಿನ ಬಳಿಗೆ ಹೋಗುವದು ನನ್ನ ನಿತ್ಯದ ಪರಿಪಾಠವಾಯಿತು. ಅಟಿಗೆಯ ಗೊಂಬೆ ಮುರಿದಾಗ ಮತ್ತೊಂದು ಹೊಸದನ್ನು ಕೊಡುತ್ತಿದ್ದೆ. ಹಾಗೇನಾದರೂ ತಾಸೆರಡುತಾಸು ತಡ

ವಿಮರ್ಶಾತ್ಮಕ

ಜ್ಯೇಷ್ಠಮಾಸದ ಕತೆಗಳು

ಕಲಾ ಮಂಟಪ ಬೆಳಗಾಂವಿ

ನಮ್ಮ ಕತೆಗಾರರ ವಿಚಾರ ವೈವಿಧ್ಯಕ್ಕೂ ಪ್ರಸಂಗಚಾತುರ್ಯಕ್ಕೂ ಅವರ ಸತ್ಯಕ್ಕೆಗೂ ಹೃದಯಮನಗಳನ್ನು ತಟ್ಟಿ ಮುಟ್ಟುವಂಥ ಭಾವಪೋಷಕಗಳೂ ಮುಖ್ಯ ಮಾಸದ ಒಟ್ಟು ಗಾಳಿಯು ಸೋಕಿದೆ ಎನ್ನಬೇಕು. ಇಂಥ ಕತೆಗಳಲ್ಲಿ ಉತ್ತಮವಾದವು ಬೆರಳಿನಿಂದ ಎಣಿಸುವಷ್ಟು! ಅವು ಸಹ ಸಂಕೋಚದಿಂದ. ಇರಲಿ. ಅವು—

ಅನುವಾದ	...	...	...	೬
ಪ್ರೇಮು ಕಾಮ	...	...	...	೧೧
ಧ್ಯೇಯವಾದಿ	...	...	...	೧೯
ಉಳಿದವು	...	...	...	೧೬
ಉತ್ತಮ	...	...	...	೬

ಅನುವಾದ ಕತೆಗಳಲ್ಲಿ ಎರಡು ತೆಲುಗಿನವು. ಒಂದು ಹಿಂದಿಯದು, ಒಂದು ಗುಜರಾತಿಯದು, ಉಳಿದೆರಡು ಆಧಾರದಿಂದ ಬರೆದವುಗಳು. ಇವುಗಳಲ್ಲಿ ಮಿಠಾಯಿಗಾರ ಕತೆಯ ಮುಖ್ಯ ಪಾತ್ರ ಮಿಠಾಯಿಗಾರನಾದರೂ ಲೋಕೈಕ ಆದರ್ಶಮಯವಾಗಿದೆ. ಸಂದೇಹ ವಿಷಮ ಗಂಡ-ಹೆಂಡರ ನಡುವಿನ ಅಭಾಸ ಸಂಶಯವು ವಿಷಪ್ರಾಯವಾಗಿ ಇಬ್ಬರನ್ನು ನಿರಾಶೆಯ ಭಸ್ಮಭೂತಕ್ಕೆ ತಳ್ಳುವದು. ಸತ್ಯದ ಫಲ, ಅಣ್ಣತಮ್ಮಕ್ಕೆ, ಪಾಕಿಸ್ತಾನ ಮತ್ತು ಮಾಮುವರೆಗಳು ಉತ್ತಮವಾದ ಅನುವಾದಗಳು. ಒಂದೊಂದು ಕತೆಯು ಒಂದೊಂದು ಕೇಡೋವೇಘ ಮಂಡಲದಂತೆ ತನ್ನ ವಸ್ತು, ಪಾತ್ರ, ಭಾವನೆಗಳನ್ನು ಬಳೆಸಿಕೊಂಡು, ಅಳವಡಿಸಿಕೊಂಡು ಪೂರ್ಣವಾಗಿದೆ.

ಪ್ರೇಮುಕಾಮದ ಕತೆಗಳಲ್ಲಿಯ ವಾಚಿಯಲ್ಲಿಯ ಕೇಷರ ಸೆಂಟಿಮೆಂಟ್ಸು, ಅಂತರಂಗದಲ್ಲಿಯ ಸುಬ್ರಾಯ ಅಡಿಗರ ಬಲಿದಾನ ಓದಲರ್ಹವಾದವುಗಳು. ಆದರೆ ಕೇಷರ ಕತೆಯಲ್ಲಿ ಒಂದು ಹೊಸ ವಿಚಾರ ಉದ್ಭವಿಸುವದು. ಕತೆಯು— ಮಾಧು ತನ್ನ ಗೆಳೆಯರ ಸಂಗಡ ಒಂದು ಊರಿಗೆ ತಿರುಗಾಡಲು ಹೋಗುವನು. ಎಲ್ಲರು ತರುಣರು. ದಾರಿಯಲ್ಲಿ ಕಂಡ ಸುಂದರಿಯರನ್ನು ಹಾಗೂ ಹೀಗೂ ಹರಯದ ಮಂಗಾಟಕ್ಕೆ ಅನುಗುಣವಾಗಿ ಟೀಕೆ ಮಾಡುತ್ತ, ನಗೆಯಾಡುತ್ತ ಸಾಗುವರು. ಕೊನೆಗೆ ರಾತ್ರಿ ಸಮಯದಲ್ಲಿ ಸೂಳೆಯ ಮನೆಗೆ ಒಬ್ಬನ ನೆರವಿನಿಂದ ಸೇರುವರು. ಸೂಳೆಯಿದ್ದ ಮನೆಯು ಮಾಧುನ ತಂದೆಯವರು ವಾಸ ಮಾಡಿದುದು. ತಾವಿದ್ದ ಪಾವಿತ್ರ್ಯಪೂರ್ಣ ಗೃಹದಲ್ಲಿ ಇಂದು ಸೂಳೆಯ ವಾಸ. ಜಿಗುಪ್ಸೆ ಹಾಗು ಅಸಹ್ಯವೆನಿಸುವದು. ಇದು ಕತೆ. ಮಾಧುವು ಪೂರ್ವ ಸ್ಮರಣೆಯ ಪಾವಿತ್ರ್ಯದ್ಯೋತಕಕ್ಕೆ ಪರಾಙ್ಮುಖನಾದನೆನ್ನುವ. ಆದರೆ ಅವನು ಮನದ ಇನ್ನೊಂದು ಮೂಲೆಯಲ್ಲಿ ತಾರುಣ್ಯದ ಸ್ವೇಚ್ಛೆಯ ವಿಕಾರ ತೃಷೆಯ ವೃತ್ತಿಗೆ ಸೂಳೆಯ ಬಳಿಗೆ ಎಳೆದುಕೊಂಡು ಹೋಗಬಯಸುವ ಒಂದು ವಿಷವೃಕ್ಷ ಮೂಡಿ ನಿಂತುದನ್ನು ಅರಿಯದೆ ಹೋದನು, ಇದು ಮನೆಯ ಜಿಗುಪ್ಸೆಯೋ, ಮನದ ಜಿಗುಪ್ಸೆಯೋ ತಿಳಿಯದು. ಏನೇ ಆಗಲಿ. ಸೆಂಟಿಮೆಂಟ್ಸು ಗೆದ್ದು ಅವನನ್ನೂ ಮನೆಯನ್ನೂ ಉಳಿಸಿತು. ಆದರೆ ಆ ವೇಶ್ಯೆಯು ಅಲ್ಲಿಯೇ ತನ್ನ ದೇಹ ವಿಕ್ರಯಿಸಿ ಬದುಕುತ್ತಿರುವಳು! ಸುಬ್ರಾಯರ ಬಲಿದಾನವನ್ನು ಉತ್ತರ ಕರ್ನಾಟಕದವರು “ಕಣ್ಣಿಮುಟ್ಟು” ಸ್ಟೇಶನ ಮಾಸ್ತರನ ದುರಂತ ಕಾಮುಕತೆಯ ಲಾವಣಿಯಿಂದ ಕೇಳಬಲ್ಲರು. ಆ ಲಾವಣಿಯೇ ಇಲ್ಲಿ ಕತೆಯಾಗಿ ರೂಪಾಂತರಿಸಿ ನಿಂತಿದೆ ಎನ್ನಬೇಕು. ಅದೇ ಎಸ್. ಎಮ್. ಕವಲಿಯವರ ಸುಂದರ ಡಿ. ಎನ್. ಪಾಳ್ಯಗಾರರ ಶಾಂತ ಕತೆಗಳು ಎಲ್ಲ ರೀತಿಯಿಂದ ಅಪೂರ್ಣವಾದವುಗಳು.

ಧ್ಯೇಯವಾದಿ ಕತೆಗಳಲ್ಲಿ ಸುಬ್ರಾಯ ಅಡಿಗರ ಕರುಳಿನ ಕೈತವ (ವಾಹಿನಿ) ಎಂ. ಎಸ್ ರಾಮರಾವರ ಅಗ್ಗದ ಹಾಡು (ಧುರೀಣ) ಶ್ರೀಮತಿ ದೇವಾಂಗನಾ ಶಾಸ್ತ್ರಿಯವರ ಪುಣ್ಯದ ಫಲ (ಜಯಂತಿ) ಕಾಮಣ್ಣರ ಕವಿ (ಪಿ) (ಅಂತರಂಗ) ಮತ್ತು ವಿಶ್ವಾಮಿತ್ರ ಧ್ಯೇಯಸಾಧನೆ, ಬಾಬುಜಿಯವರ ನಾಲ್ಯಾಣೆಯಷ್ಟು ನರಕ (ಪ್ರಭಾತ) ಒಳ್ಳೆಯವು. ಕರುಳಿನ ಕೈತವದಲ್ಲಿ ಮಾಧವರಾಯರು ಹಣದ ಆಸೆಗೆ ಮಗಳನ್ನು ರಹಿಮನಿಗೆ ಮಾರಿದುದು ದುಃಖದ ಸಂಗತಿಯು. ಇದು ಸತ್ಯವಿದ್ದರೆ (ಸತ್ಯ ಕಥೆಯಂತೆ) ಹೆಣ್ಣಾಗಿ ಹುಟ್ಟುವದು ಅನಂತ ಜನ್ಮ ಕಾಲಕ್ಕೂ ಬೇಡೆಂದು ನಮ್ಮ ಹೆಣ್ಣುಮಕ್ಕಳು ಅಳಬಹುದು. ಇಂಥ ತಂದೆಯವರು ಕಲಿಯುಗಕ್ಕೂ ಹುಟ್ಟಿ ಬರುವದು ಮಹಾ ಅನರ್ಥಕ ಸಂಗತಿಯು. ಅಂಥವರನ್ನು ಎಷ್ಟು ಶಪಿಸಿದರೂ ಕಡಿಮೆ. ಆದರೆ ತೆರೆದ ಕಣ್ಣಿನ ದೈವವು ಆಕೆಯನು ಬದುಕಿಸಿ ತಂದೆಯನ್ನು ಅಪರಾಧದ ಬಾಯಿಗೆ ಒಡ್ಡುವದು “ಪುಣ್ಯದ ಫಲಕ್ಕೆ” ಕತೆಯನ್ನದೆ ಒಂದು ಸುಂದರ ಚಿತ್ರಣ—ಸ್ಮರಣೆ ಎಂದರೆ ಹೆಚ್ಚು ವಾಸ್ತವ. ಬಾಬುಜಿಯವರ ನಾಲ್ಯಾಣೆಯಷ್ಟು ನರಕ ಇವೆಲ್ಲಕ್ಕೂ ಒಳ್ಳೆಯದು. ಕತೆ—ಬಾಬುಜಿಯವರು ಬೆಂಗಳೂರಿಗೆ ಹೊರಟರು. ಪ ಊಟಿ, ಮೂಟೆ ಹೊತ್ತುಕೊಂಡು ಗಾಡಿಗೆ ಹಾಕಿದ ಕೂಲಿಯವನಿಗೆ ಎರೆಡಾಣೆ ಒಗೆದರು. ಅವನು ಸ್ವೀಕರಿಸಲಿಲ್ಲ. ಆದರೆ ರಾಯರ ಜೇಬಿನಲ್ಲಿಯ ಒಂದು ನಾಲ್ಯಾಣೆ ನುಸುಳಿ ಉರುಳಿಬಿಟ್ಟಿತು. ಹುಡುಕಿದರು. ಆದರೆ ಕಿಕ್ಕಿರಿ ತುಂಬಿದ ಡಬ್ಬಿಯಲ್ಲಿ ರಾಯರ ಹುಡುಕಾಟ ಗದಲಕ್ಕಿಟ್ಟು ಪಥಿಕರು ಹೋಗುಬಿಡಿ ಎಂದು ಉಪದೇಶದ ಹಾಳೆ ಕಾಳೆಯನ್ನು ಊದಿಸಿತು. ಕೇಳರು. ಹೊತಿಸಹ ಹುಡುಕಹತ್ತಿದರು. ಮೇಲಿನ ಪೆಟ್ಟಿಗೆ ಬಿದ್ದಿತು. ಮುಸಲ್ಮಾನರ ಹುಡುಗ ಸಿಕ್ಕನು: ರಕ್ತ. ರಕ್ತ, ನಾಲ್ಯಾಣೆಯ ರಕ್ತದ ಸೂರಾಟ! ಕೊನೆಗೆ ಸ್ಟೇಶನು ಬಂದಿತು. ರಾಯರು ಪೋಲೀಸರ ಕೈಗೆ ಸಿಕ್ಕರು. ಉರಿಗಣ್ಣು ಬಿಟ್ಟುಕೊಂಡು ಪೆಟ್ಟುಗೆಯಸಂದಿಯಿಂದ ನಾಲ್ಯಾಣೆ ರಾಯರನ್ನು ನೋಡಿ ವಿಕಟ ಹಾಸ್ಯಗೈಯಿತು. ಕೊಲೆಯ ಅಪಾದನೆಯ ಶೂಲಕ್ಕೆ ರಾಯರು ಸಿಕ್ಕು ತಳಮಳಿಸಿದರು. ಆತೀ ಜೀವರಿಗೆ ಹೀಗಾಗುವದು ಆಶ್ಚರ್ಯವಲ್ಲ. ಇದೇ ನಾಲ್ಯಾಣೆಯ ನರಕ, ಅದೇ ನಾಲ್ಯಾಣೆಯ ಔದಾರ್ಯವನ್ನು ತೋರಿಸಿದ್ದರೆ ಅಷ್ಟೇ ಸುಖದ ಸ್ವರ್ಗ ಸಿಕ್ಕದಿದ್ದರೂ ನರಕದ ದರ್ಶನ ನಿಜವಾಗಿ ಇರಲಿಲ್ಲ. ಕತೆಯು ಆರಂಭದ ಜಿಪುಣತನದಿಂದ ನರಕಕ್ಕೆ ಹಾಯಾಗಿ ಹೂವಾಗಿ ಹಣ್ಣಾಗಿ ಬೆಳೆದಿದೆ.

—ಪುಟ ೧೮ಕ್ಕೆ

ಟುತ್ತ ಕೊಡುತ್ತಿದ್ದೆವು. ನವಿಲ್ಬರ ತಲೆಹರಟೆ ಆ ಹುಡುಗನ ತಾಯಿ ಕೇಳಲಿಕ್ಕೆ ಸಾಕು. ಅದು ಬಹು ಪಾತಾಳಿ. ಎಂದೂ ಆಕೆ ನಮ್ಮ ಗೊಡವೆಗೆ ಬರುತ್ತಿರಲಿಲ್ಲ. ಆಕೆಗೆ ಏನೋ ಹೇಳಬೇಕೆಂದಿರುವದೇನೋ ಎಂದು ನನಗೆ ಅನೇಕ ಸಲ ಸಂಶಯ ಬರುತ್ತಿತ್ತು ನನಗೂ ಮಾತಾಡುವ ಆಶೆ ಇದ್ದಿತು. ಆದರೆ ಇಬ್ಬರಿಗೂ ಆತಂಕ.

ತನ್ನ ತಾಯಿಗೆ ಆರು ಬೆರಳುಗಳೇಕೆ ಇವೆ ಎಂದು ಒಂದು ದಿನ ಮುರಲಿ ನನಗೆ ಕೇಳಿದ. ಕ್ಷಣ ಕಾಲ ಥೆ ನಿಸಿ, ನಿನ್ನ ತಾಯಿಯ ಹೆಸರೇನು? ಎಂದು ಕೇಳಿದೆ. ಪಾರ್ವತಿ ಎಂದು ಮರುನುಡಿ ಹೊರಹೊಮ್ಮಿತು.

‘ ನನ್ನ ತಾಯಿ ನನಗೆ ಚಿಕ್ಕ ವಧುವೊಂದನ್ನು ತರುವವರಿದ್ದಾರೆ ’ ಎಂದು ಒಂದು ದಿನ ಹುಡುಗನೆಂದನು. ನಿನ್ನ ಮದುವೆ ಯಾಗಿದೆಯೇ ಎಂದು ನನಗೆ ಕೇಳಿದ. ‘ ನೀನು ಹುಮ್ಮನಿರುವಿ ಎಂದ ಮೇಲೆ ಆಗಿರಲಿಕ್ಕಿಲ್ಲ ’ ಎಂದು ಥಟ್ಟನೆ ಅವನು ನುಡಿದ. ‘ನಾಳೆ ನಮ್ಮಿಬ್ಬರ ಲಗ್ನ ’ ಎಂದು ಕೊನೆಯ ನಿರ್ಣಯವಾಯಿತು. ‘ ನನ್ನ ಲಗ್ನ ಈ ಗಿಳಿಯೊಡನೆ ನಿನ್ನದು ಆ ಕಾಗಿಯೊಡನೆ ತಿಳಿಯಿತೆ ?’

ಮರುದಿನ ನಾನು ಅವರ ಮನೆಗೆ ಹೋಗುವಾಗ, ಯುದ್ಧಕ್ಕೆ ಹೊರಡುವಾಗ ನನಗಿದ್ದ ಮುಗಳ ಪ್ರತಿಮ ಮಾಡಿಕೊಂಡು ಒಯ್ದು ‘ ಇದೋ ನಿನ್ನ ವಧು ’ ಎಂದೆನ್ನುತ್ತ ಆ ಪ್ರತಿಮೆ ಮುಂದೆ ಚಾಚಿದೆ.

ಅದೇ ಕ್ಷಣ ಅಕಸ್ಮಾತ ಆ ಮಗುವಿನ ತಾಯಿ ಅಲ್ಲಿಂದ ಹಾಯ್ದು ಹೋದಳು. ‘ ಕಶಿ ನನ್ನ ಮುದ್ದುಗುವರಿ, ಇಲ್ಲಿಯವರೆಗೆ ಎಲ್ಲಿದ್ದೆ? ’ ಎಂದನ್ನುತ್ತ ಆ ಮೂರ್ತಿಯನ್ನು ಕೈಯಲ್ಲಿ ತೆಗೆದುಕೊಂಡು ಪ್ರೇಮಭರದಲ್ಲಿ ಆಕೆ ಮುದ್ದಿನ ಮಳೆಗರೆದಳು.

ಈ ನಾಟಕೀಯ ದೃಶ್ಯ ಕಣ್ಣಾರೆ ನೋಡುವಾಗ ನಾನು ಒಂದು ಕ್ಷಣ ಹೌಹಾರಿ ಹೋದೆ. ನಾನು ಯುದ್ಧಕ್ಕೆ ಹೋದಾಗ ಹುಟ್ಟಿದ ಆ ಮಗುವು—ತನ್ನ ತಾಯಿಯೂ ನಾನೂ ಏಕೆ ಬೇರೊಬ್ಬರ ಹೆಸರಿನ ನಿಮಿತ್ತ ಕಣ್ಣೀರಿಡುತ್ತೇವೆಂದು ತಿಳಿಯದೆ— ಪರಿಹಾಸವಾಗಿ ನಿಂತಿತ್ತು !

ಮೈಸೂರ ಹೋರಾಟಕ್ಕೆ ಜವಾಹರಲಾಲರ ಆಶೀರ್ವಾದ?

ದಿವಾಣರು ಅವಸರದಿಂದ ಹಿಂದೀಗುವರು?

ಮೈಸೂರು ಕಾಂಗ್ರೆಸ್ಸು ಜವಾಬ್ದಾರ ಸರಕಾರವನ್ನು ದೊರಕಿಸಿಕೊಳ್ಳುವಗೋಸ್ಕರ ಹೂಡಬೇಕೆಂದಿರುವ ಹೋರಾಟಕ್ಕೆ ಕಾಂಗ್ರೆಸ್ ವರಿಷ್ಠರ ಮುಖ್ಯವಾಗಿ ಪಂ. ಜವಾಹರಲಾಲರ ಬೆಂಬಲ ದೊರಕಿದೆಂದು ತಿಳಿದು ಬಂದಿದೆ. "ಶಕ್ತಿ ಸಾಕಷ್ಟು" ಇದ್ದರೆ ಹೋರಾಟ ಹೂಡಬಹುದೆಂದು ಅವರು ಅನುಜ್ಞೆ ಕೊಟ್ಟರು ತೆರಂತೆ. ಈ ರೀತಿ ಹೋರಾಟ ಹೂಡುವದು ಅನಿವಾರ್ಯವಾಗಬಹುದೋ ಏನೊ. ಏಕೆಂದರೆ ಅತ್ತ ಸುಧಾರಣೆಗಳಿಗಾಗಿ ಮಾತುಕತೆ ನಡೆಸುವ ಹೋಗಿನಲ್ಲಿ ಕಾಲವಿಳಂಬ ಮಾಡುತ್ತ ಅತ್ತ ಘಟನಾಸಮಿತಿಯನ್ನು ಸಡೆಬಡೆಯಲು ಮೈಸೂರ ದಿವಾಣರು ಪ್ರಯತ್ನಿಸುತಿರುವರೆಂಬ ಸಂಶಯಕ್ಕೆ ಎಡೆಯುಂಟಾಗಿದೆ. ಘಟನಾ ಸಮಿತಿಯಿಂದ ಪ್ರಮುಖ ಸಂಸ್ಥಾನಗಳನ್ನು ಹೊರಗಿರಿಸಿ, ಸ್ವತಂತ್ರ ಹಿಂದುಸ್ತಾನದಲ್ಲಿ ಆ ಸಂಸ್ಥಾನಗಳನ್ನು ಸಾರ್ವಭೌಮ ರಾಜ್ಯಗಳಾಗಿ ಮಾಡಿ ಪ್ರತಿಗಾಮಿ ರಾಜಕಾರಣದ ಒಳಸಂಚಿನ ಗೂಡುಗಳನ್ನಾಗಿ ಪರಿವರ್ತಿಸಬೇಕೆಂಬ ಕೂಟದಲ್ಲಿ ಭೋಪಾಲ ನವಾಬ ಮತ್ತು ಸರ್ ಸಿ. ಪಿ. ರಾಮಸ್ವಾಮಿಯವರ ಹೆಸರುಗಳೊಡನೆ ಮೈಸೂರು ದಿವಾಣರದೂ ಕೇಳಬರುತಿದೆ. ಈ ಸ್ಥಿತಿಯಲ್ಲಿ ಘಟನಾಸಮಿತಿಯಲ್ಲಿ ಸಂಸ್ಥಾನಗಳು ಭಾಗವಹಿಸುವಂತೆ ಮಾಡಲು ಸಂಸ್ಥಾನದೊಳಗಿನ ಜನಶಕ್ತಿಯ ಪ್ರದರ್ಶನದಿಂದ ಬಹಳ ಪ್ರಯೋಜನವಾದೀತು. ತಾ ೮-೯ ರಲ್ಲಿ ನಡೆದ ಮೈಸೂರು ಕಾಂಗ್ರೆಸ್ ಕಾರ್ಯಸಮಿತಿಯ ಸಭೆಯಲ್ಲಿ ಪಾಸಾದ ಗೊತ್ತುವಳಿಗಳಾದರೂ ಈ ಭಾಗದಲ್ಲಿ ಒತ್ತಾಯದ ಮಾತುಗಳನ್ನಾಡಿವೆ. ಒಂದು ಗೊತ್ತುವಳಿಯ ಮೂಲಕ ಕಾರ್ಯಸಮಿತಿ ಮುಖ್ಯಮಂತ್ರಿ ಅಟ್ಲಿಯವರ "ನಾವು ಹೊರಡುವೆವು" ಘೋಷಣೆಯನ್ನು ಸ್ವಾಗತಿಸಿದ್ದಲ್ಲದೆ ವರಿಷ್ಠಾಧಿಕಾರ ಇಲ್ಲದಂತಾದೊಡನೆ ಸಂಸ್ಥಾನಗಳಲ್ಲಿ ಜವಾಬ್ದಾರ ಸರಕಾರಗಳನ್ನು ಸ್ಥಾಪಿಸುವದು ಅವಶ್ಯವೆಂದು ಸಾರಿದೆ. ಇದಲ್ಲದೆ ಸಂಸ್ಥಾನಗಳು ಅ. ಭಾ. ಒಕ್ಕೂಟದಲ್ಲಿ ಸೇರಲೇಬೇಕೆಂದೂ ಕೆಲ ಸಂಸ್ಥಾನಗಳು ಘಟನಾಸಮಿತಿಯಿಂದ ಹೊರಗುಳಿಯಲು ಇಚ್ಛಿಸುತಿವೆಯೆಂಬ ಸುದ್ದಿ ಇರುವದರಿಂದ, ಮೈಸೂರು ಸರಕಾರ ಒಡನೆ ಮೈಸೂರು ಘಟನಾ ಸಮಿತಿಯನ್ನು ಸೇರುವದೆಂದು ಘೋಷಿಸಬೇಕೆಂದೂ ಅದಕ್ಕೆ ಕಳಿಸಲ್ಪಡುವ ಪ್ರತಿನಿಧಿಗಳೆಲ್ಲರೂ ಲೋಕನಿಯುಕ್ತರೇ ಇರಬೇಕೆಂದೂ ಒತ್ತಾಯಗೊಳಿಸಿದೆ. ಪ್ರಜೆಗಳು ಈಗ ಬಿಗಿಯಾದ ಧೋರಣೆವಹಿಸದಿದ್ದರೆ ಸಂಸ್ಥಾಧೀಶರು ಕೆಲವರು ಬ್ರಿಟಿಶರ ವರಿಷ್ಠಾಧಿಕಾರ ಹೋದೊಡನೆ ಸ್ವತಂತ್ರರಾಗಿ ಪ್ರಜೆಗಳ ಆಶೆ ಆಕಾಂಕ್ಷೆಗಳನ್ನು ಲೆಕ್ಕಿಸದ ಮಧ್ಯಯುಗದ ಏಕಸತ್ತೆಗೆ ಮರಳ ಬಹುದೆಂಬ ಗಂಡಾಂತರವನ್ನು ಮೈಸೂರು ಕಾಂಗ್ರೆಸ್ಸು ಮನಗಂಡಿದೆ.

ಘಟನಾ ಸಮಿತಿ ಬೇಕು

ಮಹಾರಾಜರ ಈಚೆಗಿನ ಘೋಷಣೆಯನ್ವಯ ಮೈಸೂರಲ್ಲಿ ರಾಜಕೀಯ ಸುಧಾರಣೆಗಳನು ಸಿದ್ಧಗೊಳಿಸುವದಕ್ಕೆ ಮೈಸೂರು ಕಾಂಗ್ರೆಸ್ಸು ತೀವ್ರ ವಿರೋಧವನ್ನು ವ್ಯಕ್ತಗೊಳಿಸಿದೆ. ಕೆಲ ಪಕ್ಷಪಂಗಡಗಳ ಮುಂದಾಳುಗಳನ್ನೂ ವ್ಯಕ್ತಿಗಳನ್ನೂ ಬೇರೆಬೇರೆಯಾಗಿ ಕರೆಸಿಕೊಂಡು ವಿಚಾರ ವಿನಿಮಯದಿಂದ ಸುಧಾರಣೆಗಳ ರೂಪರೇಷೆಗಳನ್ನು ಸಿದ್ಧಪಡಿಸುವದು ಗತಕಾಲದ ಪ್ರಜಾತಂತ್ರ ವಿರುದ್ಧ ಪದ್ಧತಿಯೆಂದು ಅದು ಹೇಳಿದೆ. ಇದಕ್ಕೋಸ್ಕರ ಮೈಸೂರಿನ ರಾಜ್ಯ ಘಟನೆಯನ್ನು ಸಿದ್ಧಗೊಳಿಸಲು ಒಂದು ಘಟನಾ ಸಮಿತಿಯನ್ನೆ ಕರೆಯುವದು ಅವಶ್ಯವಿದೆಯೆಂದು ಕಾರ್ಯ ಸಮಿತಿ ಒತ್ತಾಯ ಪಡಿಸಿದೆ. ಮೈಸೂರು ಕಾಂಗ್ರೆಸ್ಸು ಈಗ ತನಗಾಗಿ ಅಧಿಕಾರವನ್ನು ಬೇಡುತಿಲ್ಲದೆ ಇಡಿ ಪ್ರಜಾ ವರ್ಗಕ್ಕಾಗಿ ಬೇಡುತಿದೆಯೆಂಬುದು ಇದರಿಂದ ಸ್ಪಷ್ಟವಾಗಿದೆ.

ಮುಂದಿನ ಹೋರಾಟ ಇದೇ ಪ್ರಶ್ನೆಯ ಮೇಲೆ ಪ್ರಾರಂಭವಾಗಬಹುದು. ಅನವಶ್ಯಕವಾಗಿ ಅಥವಾ ಅವಸರದಿಂದ ಕ್ರಮ ತೆಗೆದುಕೊಳ್ಳಲು ಕಾಂಗ್ರೆಸ್ಸಿಗೆ ಮನಸಿಲ್ಲ. ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಸಭೆ ಇನ್ನೊಮ್ಮೆ ಮುಂದೆ ಬಿದ್ದು ಚೌರಂಗ ಪೇಟೆಯಲ್ಲಿ ತಾ. ೨೯-೩೦ ಕ್ಕೆ ಸೇರುವದು. ಅಗಲೆ ಕೊನೆಯ ನಿರ್ಣಯವಾಗುವದು.

ಸಂಸ್ಥಾನದ ರಾಜಕಾರಣದಲ್ಲಿ ಏರುತ್ತಿರುವ ಬಿಸಿ ಮತ್ತು ಅಟ್ಲಿ ಘೋಷಣೆಯಿಂದ ಉದ್ಭೂತವಾದ ಹೊಸ ಪರಿಸ್ಥಿತಿ ಇವುಗಳನ್ನನುಲಕ್ಷಿಸಿ ಯುಕ್ತರಾಷ್ಟ್ರ ಸಭೆಗೆ ಹೋಗಿರುವ ದಿವಾಣ ಸರ್ ಆರ್ಕಾಟ ರಾಮಸ್ವಾಮಿ ಮುದಲಿಯಾರರು ಬೇಗನೆ ಮರಳಿ ಬರುವರೆಂದು ಸುದ್ದಿ ಹಬ್ಬಿದೆ.



ಮುಂಬಯಿ ಶೇರ ಪೇಟೆ

ತಾ. ೧೨

ಕೇಂದ್ರ ಸರಕಾರದ ಮುಂಗಡಪತ್ರದಿಂದ ಶೇರ ಪೇಟೆಯ ಮೇಲೆ ವಜ್ರಾಘಾತವೇ ಆದಂತಾಯಿತು. ಲಾಭದ ಮೇಲಿನ ತೆರಿಗೆ, ಬಂಡವಳ ಲಾಭದ ಮೇಲಿನ ತೆರಿಗೆ ಮೊದಲಾದ ಭಾರವಾದ ಕರಗಳ ಸೂಚನೆ ಮುಂಗಡ ಪತ್ರಿಕೆಯಲ್ಲಿದ್ದುದರಿಂದ ಔದ್ಯೋಗಿಕ ಕಂಪನಿಗಳ ಪಾಲುಗಳು ಒಮ್ಮಿಂದೊಮ್ಮೆ ಭರನೆ ಇಳಿದು ಹೋದವು. ಒಂದೇ ದಿನದಲ್ಲಿ ಟಾಟಾ ಡೆಫರ್ಡ ಪಾಲುಗಳು ೨೬೦೫—೦—೦ ರಿಂದ ೨೪೦೦-೦-೦ ಕ್ಕೆ ಇಳಿದು ಹೋದವು. ಮುಂಬಯಿ ಡಾಯಿಂಗ್ಸ ೨೩೭೦-೦-೦ ಕ್ಕೆ ಇಳಿದುಬಿಟ್ಟಿತು. ಕೊನೆಗೆ ತುಸು ಸುಧಾರಿಸಿ ಕೆಲ ರೂಪಾಯಿಗಳ ವರೆಗೆ ಮೇಲೆರಿದರೂ ಕಳೆದು ಕೊಂಡದ್ದರಲ್ಲಿ ಸ್ವಲ್ಪಾಂಶ ಕೂಡ ಸಂಪಾದಿಸಿಕೊಂಡಂತಾಗಲಿಲ್ಲ. ಎಲ್ಲ ಪಾಲುಗಳೂ ಅಪಾರವಾಗಿ ಇಳಿದು ಹೋಗಲಾಗಿ ಶೇರ ಪೇಟೆಯ ಆಡಳಿತ ಮಂಡಲದವರು ಸಭೆ ಸೇರಿ ಒಂದು ವಾರದ ವರೆಗೆ ಸ್ಟಾಕ ಎಕ್ಸ್ಚೇಂಜ ಇನ್ನೆ ಮುಚ್ಚಿಬಿಡಲು ನಿರ್ಧರಿಸಿದರು. ಅನೇಕ ವ್ಯಾಪಾರಿಗಳಿಗೆ ಲಕ್ಷಾಂತರ ರೂಪಾಯಿ ಹಾನಿಯಾಗಿದ್ದು ಬ್ಯಾಂಕುಗಳ ಮೇಲೂ ಇದರ ದುಷ್ಪರಿಣಾಮ ವಾಗಬಹುದೆಂದು ನಂಬಲಾಗಿತ್ತು. ಆದುದರಿಂದ ಪರಿಸ್ಥಿತಿ ಹಿಡಿತಕ್ಕೆ ಬರುವ ವರೆಗೆ ಪೇಟೆ ಮುಚ್ಚಿದ್ದು ಒಳಿತಾಯಿತು. ಈಗ ಕೆಲ ಮಂಶ ಸವಲತ್ತುಗಳನ್ನು ಹಣಕಾಸಿನ ಮಂತ್ರಿಗಳು ಕೊಡಬಹುದೆಂದು ಆಶೆಯುಂಟಾಗಿದ್ದರೂ ಪೇಟೆ ಇನ್ನೂ ತೆರೆದಿಲ್ಲ.

ಚಿನ್ನ ಬೆಳ್ಳಿ

ಶೇರು ಪೇಟೆಯಲ್ಲಿ ಆದ ಅಧಃಪಾತದಿಂದ ಸ್ವಾಭಾವಿಕವಾಗಿಯೆ ಚಿನ್ನ ಬೆಳ್ಳಿ ಪೇಟೆಯ ಪ್ರಸ್ಥ ಬೆಳೆಯಿತು. ಜನರು ಔದ್ಯೋಗಿಕ ಕಂಪನಿಗಳಲ್ಲಿ ಹಣವನ್ನು ತೊಡಗಿಸಲು ಹೆದರಿ ಚಿನ್ನ ಬೆಳ್ಳಿಗಳಲ್ಲಿ ತೊಡಗಿಸಬಹುದೆಂದು ನಂಬಲಾಗಿದೆ. ಬೆಳ್ಳಿಯನ್ನು ಹಿಂದುಸ್ತಾನದಲ್ಲಿ ಮಾರಿ ವಿದೇಶಗಳು ಅಪಾರ ಲಾಭಗಳಿಸುತ್ತಿವೆ. ಇದರಿಂದ ಬೆಳ್ಳಿಯನ್ನು ತರಿಸುವ ಗುತ್ತಿಗೆಯನ್ನು ಸರಕಾರವೇ ಇಟ್ಟುಕೊಂಡು ಲಾಭ ಪಡೆಯಬೇಕೆಂದು ಸೂಚಿಸಲಾಗಿದೆ. ಆಯಾತದ ಪರವಾನಗಿಗಳನ್ನು ತಡೆ ಹಿಡಿಯಲಾಗಿದೆಯೆಂದೂ ಹೊಸ ಸುಂಕವನ್ನು ಹೇರಲಾಗುವದೆಂದೂ ಸುದ್ದಿ ಹಬ್ಬಿ ವಿಪರೀತಕ್ಕೇರಿದ್ದ ಬೆಲೆಗಳು ತುಸು ಕೆಳಗಿಳಿದವು. ಹೀಗೆ ೧೦೭-೮-೦ ರ ವರೆಗೂ ಏರಿದ್ದ ತಯಾರಿ ಚಿನ್ನ ೧೦೪-೦-೦ ಕ್ಕೆ ಬಂದಿದೆ. ಒಂದನೆ ವಾಯದಾ ೧೦೩-೧೨-೦ ರಿಂದ ೯೯-೬-೦ ಕ್ಕಿಳಿಯಿತು. ೧೬೭-೦-೦ ರೂಪಾಯಿಗೇರಿದ್ದ ತಯಾರಿ ಬೆಳ್ಳಿ ೧೬೪-೦-೦ ಕ್ಕಿಳಿದಿದೆ ವಾಯದಾ ೧೬೬-೨-೦

ಅರಳೆಪೇಟೆ

ಮುಂಗಡ ಪತ್ರಿಕೆಯಿಂದ ಅರಳೆ ಪೇಟೆಯ ಮೇಲೆ ಏನೂ ಪರಿಣಾಮವಾಗಲಿಲ್ಲ. ಮಾರ್ಚ ವಾಯಿದಾ ಅರಳೆ ಕನಿಷ್ಠ ಮಟ್ಟಕ್ಕೆ (ರೂ. ೪೩೦) ಕ್ಕಿಳಿದು ಈಗ ೪೩೨-೨-೦ ರಲ್ಲಿದೆ. ಮೇ ವಾಯದಾ ೪೪೬-೨-೦ ಜುಲೈ ೪೫೯-೧೦-೦ ಸೆಪ್ಟೆಂಬರ ೪೬೯-೬-೦-

ಎಣ್ಣೆಕಾಳು

ಶೇಂಗಾ	೧೬೩-೦-೦
ಅಗಸಿ	೨೬-೬-೦
ಅಗಸಿ ಎಣ್ಣೆ	೨೧-೪-೦

ಶಿವಮೊಗ್ಗೆ

ಅಡಿಕೆ ದೇಶಾವರ ನಂ ೧ ಮಣ ೧ಕ್ಕೆ	೫೧-೫೩
,, ,, ೨	೪೮-೫೦
ಕೊಪ್ಪ ಶೃಂಗೇರಿ	೪೬-೫೧
ಅನ್ನಾವರಂ	೪೨-೪೬
ತೊಂಸಾಲು	೪೫-೪೮
ದೇಶಾವರ ರಾಶಿ ಆಲವು	೪೬-೪೯
ದೇಶಾವರ ಪಟಾನ	೫೦-೫೨
ಸುಲಿ	೪೭-೪೯
ಬೆಟ್ಟೆ ವಂತಿ	೩೬-೩೭
ಬೆಟ್ಟೆ	೩೩-೩೪

ಸಾಂಗಲಿ ಪೇಟೆ

ತಾ. ೨೫

ಅರಿಷಣ ಹೇರು	೮೪-೯೪
ಮೆಣಸಿನಕಾಯಿ ಹೇರು ,,	೧೪೦-೧೯೦
ಶೇಂಗಾ ಖಂಡಿ	೧೧೫

ಹುಬ್ಬಳ್ಳಿ ಪೇಟೆ

ಜಯವಂತ ಹತ್ತಿ	ನಂ. ೧	೨೬೫-೨೭೦
,,	ನಂ. ೨	೨೫೫-೨೬೦
,,	ನಂ. ೩	೨೪೦-೨೫೦
ಅಪ್ಲಂಡ ಹತ್ತಿ		೨೨೦-೩೩೦
ಜಿನ		೧೮೫-೧೯೦
ಸಾಜಿನ		೧೭೫-೧೭೦
ಡಬಲರೋಲ		೧೭೦-೧೭೫

ಬೆಂಗಳೂರು-ಮೈಸೂರು

ಮೈಸೂರ ಜಿಲ್ಲಾ ಬೋರ್ಡಿನ ಚುನಾವಣೆಗಳು ಬೇಗನೆ ಜರಗಲಿದ್ದು ೨೨ ಸ್ಥಾನಗಳಲ್ಲಿ ೯ ಕ್ಕೆ ಕಾಂಗ್ರೆಸ ಪರವಾಗಿ ಹುರಿಯಾಳುಗಳು ನಿಲ್ಲಿಸಲ್ಪಟ್ಟಿದ್ದಾರೆ. ಸ್ವತಂತ್ರ ಹುರಿಯಾಳುಗಳು ೨೨ ಜನರಿದ್ದಾರೆ.

"ಮೈಸೂರು ಸಂಸ್ಥಾನದ ಖನಿಜ ಪಸ್ತುಗಳು" ಎಂಬ ಪ್ರಬಂಧ ಬರೆದುದಕ್ಕೆ ಬೆಂಗಳೂರು ಇಂಟರಮೀಡಿಯೆಟ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಿ. ಎಸ್. ಪಿಚ್ಚಮುತ್ತು ಅವರಿಗೆ ಗ್ಲಾಸ್ಗೋ ವಿಶ್ವವಿದ್ಯಾಲಯದವರು ಡಾಕ್ಟರ ಬಿರುದನ್ನು ಕೊಟ್ಟಿದ್ದಾರೆ.

ಶ್ರೀ ಬಿ. ಎನ್. ಗೋಪಾಲರಾಯರ ವ್ಯವಹಾರದ ವಿಷಯಕ್ಕೆ ವಿಚಾರಣೆ ನಡೆಸಲು ಸಾರ್ವಜನಿಕ ವಿಚಾರಣಾಮಂಡಲವನ್ನು ನೇಮಿಸಬೇಕೆಂದು ಮೈ. ಕಾಂಗ್ರೆಸ ಕಾರ್ಯಸಮಿತಿ ನಿರ್ಣಯಿಸಿದೆ. ಅರಮನೆಗೆ ಸಂಬಂಧಿಸಿದ ಮತ್ತು ಉಚ್ಚ ಅಧಿಕಾರಿವರ್ಗಕ್ಕೆ ಸೇರಿದ ಅನೇಕರ ಹೆಸರುಗಳು ಗೋಪಾಲರಾಯರ ವ್ಯವಹಾರದ ಸಂಬಂಧಿಸಿದಲ್ಲಿ ಹೊರಬಿದ್ದುದರಿಂದ ಕಾರ್ಯಸಮಿತಿ ಈ ನಿರ್ಣಯ ಮಾಡಿರಬೇಕು.

ಚನ್ನಪಟ್ಟಣ ಗಲಭೆಯ ಕಾಲದಲ್ಲಿ ಹಾಯಸ್ಕೂಲ ಅಧ್ಯಾಪಕರಾದ ಶ್ರೀ ಎಂಬಾರ ಶ್ರೀನಿವಾಸಾಚಾರ್ಯರ ಕೊಲೆಯಾದ ಬಗ್ಗೆ ಮೊಗದುಮ ಮತ್ತು ಇನ್ನೈವರ ಮೇಲೆ ಆರೋಪ ಹೊರಿಸಿ ಬೆಂಗಳೂರು ವಿಶೇಷ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಪಡಿಸಲಾಗಿದೆ.

ಮೈಸೂರು ಸೆಂಟ ಫಿಲೋಮಿನಾ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷಸ್ಥಾನದಿಂದ ಶಿಕ್ಷಣ ಮಂತ್ರಿ ಡಾ. ರಾಯನ್ನರು "ಮೈಸೂರಿಗಾಗಿ ಬದುಕಿರಿ, ಮೈಸೂರಿಗಾಗಿ ಸಾಯಿರಿ" ಎಂದು ವಿದ್ಯಾರ್ಥಿಗಳಿಗೆ ಉಪದೇಶಿತ್ತರು.

ಕಾರ್ಯ ಬಾಹುಲ್ಯದಿಂದ ಮೈಸೂರು ಮತ್ತು ಕರ್ನಾಟಕ ಪ್ರವಾಸವನ್ನು ರದ್ದುಗೊಳಿಸಿದ ರಾಷ್ಟ್ರಪತಿ ಕೃಪಲಾನಿಯವರು ಕ. ಪ್ರಾಂ. ಕಾಂಗ್ರೆಸ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರ ಒತ್ತಾಯದ ಮೇರೆಗೆ ಮೈಸೂರಿಗೆ ಭೆಟ್ಟಿಕೊಡಲೊಪ್ಪಿದ್ದಾರೆಂದೂ ಕರ್ನಾಟಕಕ್ಕೂ ಭೆಟ್ಟಿಕೊಡಬಹುದೆಂದೂ ತಿಳಿಯುತ್ತದೆ.

ಮದ್ರಾಸ ಮಂತ್ರಿಮಂಡಳದ ರಾಜೀನಾಮೆ

ಕಾಂಗ್ರೆಸ ಅಧ್ಯಕ್ಷರ ಕಡೆಗೊಪ್ಪಿಸಿದರು

ಮದ್ರಾಸ ಶಾಸನ ಸಭೆಯ ಕಾಂಗ್ರೆಸ ಪಕ್ಷದಲ್ಲಿ ಮತಭೇದವಾಗಿ ಮುಖ್ಯ ಮಂತ್ರಿ ಶ್ರೀ ಟಿ. ಪ್ರಕಾಶಂರ ವಿರುದ್ಧ ಅವಿಶ್ವಾಸದ ಗೊತ್ತುವಳಿ ಪಕ್ಷದಸಭೆಯಲ್ಲಿ ಚರ್ಚೆಗೆ ಬಂದಿತು. ಆದರೆ ಈ ಬಗೆಯ ಗೊತ್ತುವಳಿ ತರಲು ಪಕ್ಷದ ನಿಯಮ ನಿರ್ಬಂಧನೆಗಳನ್ವಯ ಬರುವದಿಲ್ಲೆಂದು ಹೇಳಿ ಮುಖ್ಯ ಮಂತ್ರಿಗಳು ಅದಕ್ಕೆ ಅವಕಾಶ ಕೊಡಲಿಲ್ಲ. ಆದರೆ ವಿರೋಧಕ ಸದಸ್ಯರು ಬೇರೆ ಸಭೆಸೇರಿ ಅವಿಶ್ವಾಸ ಗೊತ್ತುವಳಿಯನ್ನು ಪಾಸುಮಾಡಿಕೊಂಡರು. ಮುಖ್ಯ ಮಂತ್ರಿಗಳು ಇದೆಲ್ಲ ವಿಷಯವನ್ನು ಕಾಂಗ್ರೆಸ್ ಅಧ್ಯಕ್ಷರಿಗೆ ತಿಳಿಸಿದರು. ಆಚಾರ್ಯ ಕೃಪಲಾನಿಯವರು ಮದ್ರಾಸಿಗೆ ಬಂದು ಎಲ್ಲವನ್ನು ತಿಳಿದುಕೊಂಡರು. ಮುಖ್ಯ ಮಂತ್ರಿಗಳು ಮಂತ್ರಿಮಂಡಳದ ರಾಜೀನಾಮೆಯನ್ನು ಅಧ್ಯಕ್ಷರಿಗೆ ಒಪ್ಪಿಸಿದ್ದಾರೆ. ಪಕ್ಷದ ಹೊಸಧುರೀಣರನ್ನಾರಿಸಿಕೊಳ್ಳಲು ೨೧ನೇ ತಾರೀಕಿಗೆ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಸಭೆ ಮತ್ತೆ ಸೇರುವದಿದೆ. ಅಷ್ಟರೊಳಗಾಗಿ ಒಡಂಬಡಿಕೆ ಮಾಡಿಕೊಳ್ಳಲು ಆಚಾರ್ಯ ಕೃಪಲಾನಿಯವರು ಆಯಾ ಪಕ್ಷದ ಪ್ರಮುಖರಿಗೆ ತಿಳಿಸಿರುವರು. ಅಧ್ಯಕ್ಷರೂ ಈಗ ತ್ರಿವೇಂದ್ರಮ್ಮು ಮೊದಲಾದ ಕಡೆ ಸಂಚಾರಕ್ಕೆ ಹೋಗಿದ್ದು ೨೧ ಕ್ಕೆ ಮರಳಿ ಬರುವರು. ಅನಂತರ ಪಕ್ಷದ ಸಭೆ ಸೇರುವದು. ಶಾಸನ ಸಭೆಯ ಅಧಿವೇಶನವನ್ನು ೧೫ ನೇ ತಾರೀಖಿಗೆ ಮುಂದರಿಸಲಾಗಿದೆ.

ಅಬಕಾರಿ ಕಾಯದೆಯಲ್ಲಿ ಮಹತ್ವದ ಬದಲಾವಣೆ

ಬಾಡಿಗೆ ನಿಯಂತ್ರಣದ ಅವಧಿ ಬೆಳೆಯಿತು

ಮುಂಬಯಿ ಶಾಸನ ಸಭೆಯ ಕಾರ್ಯಕಲಾಪ

ಪಾನನಿರೋಧ

ಮುಂಬಯಿ ಶಾಸನ ಸಭೆಯಲ್ಲಿ ಪಾನನಿರೋಧಕ್ಕೆ ಸಂಬಂಧಿಸಿದ ಮೂರು ತಿದ್ದುಪಡಿ ಮಸೂದೆಗಳು ೧೦ನೇ ತಾರೀಕು ಸ್ವೀಕೃತವಾದವು. ೧) ಮುಂಬಯಿ ಪ್ರಾಂತದಲ್ಲಿ ನಾಲ್ಕು ವರ್ಷಗಳಲ್ಲಿ ಪಾನನಿರೋಧವನ್ನು ಕ್ರಮಶಃ ಕಾರ್ಯರೂಪಕ್ಕೆ ತರುವ ಕ್ರಮ ಮತ್ತು ಈ ಕಾಯದೆಯನ್ನು ಮುರಿದವರಿಗೆ ಶಿಕ್ಷೆ ವಿಧಿಸುವ ವಿವರಗಳು ಮುಂಬಯಿ ಅಬಕಾರಿ ಕಾಯದೆ ತಿದ್ದುಪಡಿ ಮಸೂದೆಯಲ್ಲಿ ಹೇಳಲಾಗಿವೆ. ೨) ೧೮೭೮ ನೇ ಅಫು ಕಾಯದೆಯಲ್ಲಿ ಒಂದು ತಿದ್ದುಪಡಿ ಮಾಡಲಾಗಿದೆ. ಅದರನ್ವಯ ಅಫು ಮಾರಾಟವನ್ನು ಕ್ರಮಶಃ ದಿಗಿಗೊಳಿಸಿದ್ದು ಅದನ್ನು ಮುರಿದವರಿಗೆ ಕಠೋರ ಶಿಕ್ಷೆ ವಿಧಿಸಲಾಗಿದೆ. ೩) ಮುಂಬಯಿ ಅಬಕಾರಿ ಕಾಯದೆಯಲ್ಲಿ ತಿದ್ದುಪಡಿಮಾಡಲಾಗಿದ್ದು ಈ ಕಾಯದೆ ವಿರುದ್ಧವಾಗಿ ಸರಾಯಿ ಭಟ್ಟಿ ಇಳಿಸಲು ಕಾಕಂಬಿಯನ್ನು ಪಯೋಗಿಸದಂತೆ ಪ್ರತಿಬಂಧಿಸಲಾಗಿದೆ.

ಮುಂಬಯಿ ಋಣ ವಿಮೋಚನೆ ಮಸೂದೆಯನ್ನು ಅರ್ಥಸಚಿವರು ಮಂಡಿಸಿದರು. ಅದರ ಮೊದಲನೆ ವಾಚನ ಸ್ವೀಕೃತವಾಗಿ ಪರಿಶೀಲಕ ಸಮಿತಿಗೆ ಒಪ್ಪಿಸಲಾಯಿತು. ಈ ತಿದ್ದುಪಡಿಯನ್ವಯ ಈಗಿರುವ ಸಾಲಸರಿಪಡಿಸುವ ಮಂಡಲಗಳು ರದ್ದಾಗಿ ಆ ಕೆಲಸವನ್ನು ಸಿವಿಲ್ ಕೋರ್ಟುಗಳಿಗೊಪ್ಪಿಸಲಾಗುವದು. ಸಾಲಸರಿಪಡಿಸುವ ಕ್ರಮವನ್ನೂ ಇದರಲ್ಲಿ ವಿವರಿಸಲಾಗಿದೆ.

ಇದಕ್ಕೂ ಮೊದಲು ಡಾ. ಗಿಲ್ಡರರು ಉತ್ತರ ಕೊಡುತ್ತ ಸರಕಾರದವರು ಇದುವರೆಗೆ ೩೪೦೦ ಹೊಸಬಾವಿಗಳನ್ನು ಕಡಿಸಲು ಮತ್ತು ೩೦೦೦ ಹಳೆಬಾವಿಗಳನ್ನು ದುರಸ್ತಿಮಾಡಲು ಸಹಾಯ ದ್ರವ್ಯವನ್ನು ಕೊಟ್ಟಿರುತ್ತಾರೆಂದು ಹೇಳಿದರು. ಮಹಾರಾಷ್ಟ್ರದ ಏಳು ಮತ್ತು ಗುಜರಾಥದ ಎರಡು ಜಿಲ್ಲೆಗಳಲ್ಲಿ ಹದಿನಾರು ಬೋರಿಂಗ್ ಯಂತ್ರಗಳು ಕೆಲಸ ಮಾಡುತಿವೆ.

ಈ ಪ್ರಾಂತದಲ್ಲಿ ನೂರಕ್ಕೆ ಕೇವಲ ನಾಲ್ಕರಷ್ಟು ಭೂಮಿ ನೀರಾವರಿ ಇದ್ದುದು ನಿಜ. ಈಗ ೧೭ ಹೊಸ ನೀರಾವರಿ ಕೆಲಸಗಳು ಏಳು ದುರಸ್ತಿಗಳನ್ನು ಕೈಕೊಳ್ಳಲಾಗಿದೆಂದು ಡಾ. ಗಿಲ್ಡರರು ಮತ್ತೊಂದು ಪ್ರಶ್ನೆಗೆ ಉತ್ತರಕೊಟ್ಟರು.

ಬಾಡಿಗೆ ನಿಯಂತ್ರಣ

ಮುಂಬಯಿ ಬಾಡಿಗೆ ನಿಯಂತ್ರಣ ಕಾಯದೆಯ (೧೯೪೪) ಅವಧಿಯನ್ನು ಒಂದು ವರ್ಷ ಬೆಳೆಸುವ ಮಸೂದೆ ೧೦ ನೇ ತಾರೀಕು ಸ್ವೀಕೃತವಾಯಿತು. ಸರಕಾರದವರು ಬಾಡಿಗೆ ನಿಯಂತ್ರಣ ಸಂಬಂಧದಲ್ಲಿ ಹೊಸ ಮಸೂದೆ ಮಾಡಬೇಕಾಗಿದ್ದು ಅದಕ್ಕೆ ಅವಧಿ ಹತ್ತುವದಾದ್ದರಿಂದ ಈ ಮಧ್ಯಂತರ ಅವಧಿಗಾಗಿ ಹಿಂದಿನ ಕಾಯದೆಯ ಅವಧಿಯನ್ನು ಒಂದು ವರ್ಷ ಬೆಳೆಸಲಾಗಿದೆ.

ಮುಂಬಯಿ ಮೆಡಿಕಲ್ ಪ್ರಾಕ್ಟೀಶನರ್ಸ ಕಾಯದೆ ಹಾಗು ನಿಯಮಗಳಲ್ಲಿ ಅವಶ್ಯವಿದ್ದ ಬದಲಾವಣೆಗಳನ್ನು ಆಯುರ್ವೇದ ಮತ್ತು ಯುನಾನಿ ಪದ್ಧತಿಯ ಸ್ಟೇಟ ಫ್ಯಾಕಲ್ಟೀಜ ಕಾರ್ಯದಲ್ಲಿ ಆಗಬೇಕಾದ ಸುಧಾರಣೆಗಳ ಉಪಾಯಗಳನ್ನು ಅವುಗಳಿಗೆ ಹಣ ಸಹಾಯ ಮಾಡುವ ವಿಧಾನವನ್ನು ಸೂಚಿಸಲು ಒಂದು ಪರಿಶೀಲಕ ಮಂಡಲ ಸ್ಥಾಪಿತವಾಗಿದೆ.

ಮುಂಗಡ ಪತ್ರಿಕೆಯ ಚರ್ಚೆ

ಮುಂಗಡ ಪತ್ರಿಕೆಯ ಮೇಲಿನ ಚರ್ಚೆ ೩ನೇ ತಾರೀಕು ವಿರೋಧ ಪಕ್ಷದ ಮುಖಂಡರಾದ ಎ. ಎ. ಖಾನ ಸಾಹೇಬರಿಂದ ಪ್ರಾರಂಭವಾಯಿತು. ೧೯೩೭ ನೇ ಇಸ್ವಿಯ ಕಾಂಗ್ರೆಸ ಮಂತ್ರಿಮಂಡಳವು ಪಾನನಿರೋಧ ಮಂತ್ರಿಮಂಡಳವಾಗಿದ್ದರೆ ಈಗ ಈ ಮಂತ್ರಿಮಂಡಳ ಕರ್ಫ್ಯೂದ ಮಂತ್ರಿಮಂಡಳವಾಗಿದೆಂದು ಅವರು ಟೀಕಿಸಿದರು. ಈ ಮುಂಗಡ ಪತ್ರಿಕೆಗೂ ಸಲಹೆಗಾರರ ಮುಂಗಡ ಪತ್ರಿಕೆಗೂ ಭೇದವಿಲ್ಲ. ಸರಕಾರದ ಯೋಜನೆಗಳೇನೋ ಬಹಳ ಇವೆ. ಅದರೆ ಕಟ್ಟಕಡೆಗೆ ಪ್ರಾಂತದ ಆದಾಯ ಕಡಮೆಯಾಗಿ ವೆಚ್ಚ ಹೆಚ್ಚಾಗುತ್ತ ನಡೆಯುವದೆಂದು ಅವರು ಹೇಳಿದರು.

೪ ನೇ ತಾರೀಕು ಈ ಚರ್ಚೆ ಮುಂದೆ ಸಾಗಿದಾಗ ಲೀಗಿನ ಎಚ್. ನೂರಮಹಮ್ಮದರು ಸಾಮಾನ್ಯ ಆಡಳಿತೆಯನ್ನು ಟೀಕಿಸುತ್ತ ಬೆಲ್ಲ ಚಿಮಣಿ ಎಣ್ಣೆ ಒಳ್ಳೆಣ್ಣೆ ಮೊದಲಾದ ಅವಶ್ಯಕ ಪದಾರ್ಥಗಳು ಸಿಕ್ಕದಂತಾದುದರ ಕಡೆಗೆ ಸರಕಾರದ ಲಕ್ಷವನ್ನೆಳೆದರು ಜಿ. ಎಚ್. ದೇಶಪಾಂಡೆಯವರು ಸರಕಾರದ ಧೋರಣವನ್ನು ಸಮರ್ಥಿಸಿ ಆವೇಶಯುಕ್ತ ಭಾಷಣ ಮಾಡಿ ವಿರೋಧಿಗಳ ಟೀಕೆಗಳನ್ನು ಖಂಡಿಸಿದರು. ಎಂ. ಎಂ. ಭಾಯಿಜಿಯವರು ದುಂದುಗಾರಿಕೆಯ ಮುಂಗಡ ಪತ್ರವೆಂದು ಅದನ್ನು ಟೀಕಿಸಿದರು. ಹಿಂದೀ ವಣಿಕ ಸಂಘದ ಪಟೀಲರು ಒಕ್ಕಲತನ ಸಂಶೋಧನೆಯ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಪರಿಸ್ಥಿತಿ ಬದಲಾಗುತ್ತ ನಡೆದಂತೆ ನಿಯಂತ್ರಣವನ್ನು ಸಡಲಿಸಬೇಕೆಂದು ಹೇಳಿದರು.

ಕಂದಾಯ ಮಂತ್ರಿಗಳ ಉತ್ತರ

ಕಂದಾಯ ಮಂತ್ರಿಗಳಾದ ಶ್ರೀ ಮುರಾರಜಿ ದೇಸಾಯರು ಶಮಸುದ್ದೀನರ ಆರೋಪಗಳನ್ನು ಖಂಡಿಸಿದರು. ಮೂರು ವರ್ಷಗಳಲ್ಲಿ ಪೂರ್ಣ ಮದ್ಯಪ್ರತಿಬಂಧ ಪ್ರಾಂತದಲ್ಲಿ ಆಗುವದೆಂದು ಹೇಳಿದರು. ಭೂಕಂದಾಯದ ಭಾರದಿಂದ ರೈತರು ನರಳುತಿರುವರೆಂದು ಹೇಳುವ ಡಾಂಗೆಯವರು ರಶಿಯದಲ್ಲಿಕೂಡ ಹುಟ್ಟುವಳಿಯಲ್ಲಿ ಸ್ವಲ್ಪ ಭಾಗವನ್ನು ಸರಕಾರ ತೆಗೆದುಕೊಳ್ಳುವದೆಂಬದನ್ನು ಗಮನಿಸಬೇಕೆಂದರವರು.

ಕೂಲಿಕಾರ ಮಂತ್ರಿಗಳು

ಕೂಲಿಕಾರ ಮಂತ್ರಿಗಳಾದ ಶ್ರೀ ಗುಲಜಾರಲಾಲ ನಂದಾರವರು ಮಾತಾಡುತ್ತ ನಮ್ಮ ಯೋಜನೆ ಫಲಿಸಲು ಕಾಲಾವಧಿ ಬೇಕು. ಅವುಗಳ ಯೋಗ್ಯಾಯೋಗ್ಯತೆಗಳನ್ನು ನಿರ್ಣಯಿಸುವವರು ಮತದಾರರೇ ಎಂದು ಮುಂತಾಗಿ ಹೇಳಿದರು.

ಆರೋಗ್ಯ ಮಂತ್ರಿಗಳು

ಡಾ. ಗಿಲ್ಡರರು ತಮ್ಮ ಖಾತೆಯ ಮೇಲಾದ ಟೀಕೆಗೆ ಉತ್ತರ ಕೊಡುತ್ತ ಪ್ರಾಂತದಲ್ಲಿ ಚಳಿಜ್ವರದ ಬಾಧೆ ಕಡಮೆಯಾಗಿದೆಂಬುದನ್ನು ಅಂಕೆ ಸಂಖ್ಯೆಗಳಿಂದ ತೋರಿಸಿದರು. ಪ್ಲೇಗ ದೂಷಿತ ಪ್ರದೇಶದಲ್ಲಿ ಪ್ಲೇಗಿನ ಕಾರಣ ವಿಚಾರಿಸುವ ಸಮಿತಿಯನ್ನು ಏರ್ಪಡಿಸಲಾಗಿದೆಂದು ಮುಂತಾಗಿ ಹೇಳಿದರು.

ಚರ್ಚೆಯ ಮುಕ್ತಾಯ

೫ ನೇ ತಾರೀಕಿನ ದಿನ ಮತ್ತೆ ಚರ್ಚೆ ಮುಂದೆ ಸಾಗಿ ಹಸನ, ಛೀವಾಲಾ, ರಜಬ್ ಮತ್ತು ಅಬ್ದುಲ್ ಸತ್ತಾರರು ಮಾತಾಡಿದ ನಂತರ ಶಿಕ್ಷಣ ಮಂತ್ರಿ ಶ್ರೀ ಬಿ. ಜಿ. ಖೇರರು ತಮ್ಮ ಖಾತೆಯ ಮೇಲೆ ಮಾಡಲ್ಪಟ್ಟ ಟೀಕೆಗೆ ಉತ್ತರ ಕೊಟ್ಟರು. ಮುಸಲ್ಮಾನರಿಗೆ ಯೋಗ್ಯ ಶಿಕ್ಷಣ ಸವಲತ್ತು ಕೊಡಲಾಗಿದೆಂದು ಅಂಕಿ ಸಂಖ್ಯೆಗಳಿಂದ ಸಿದ್ಧ ಮಾಡಿದರು. ಕೈಗಾರಿಕೆ ಶಿಕ್ಷಣ, ಶಿಕ್ಷಣದ ಒಂದು ಮುಖ್ಯ ಅಂಗವಾಗಿದ್ದು ಅತ್ತ ಸರಕಾರ ಗಮನಿಸುವದವಶ್ಯವೆಂದು ಡಾಂಗೆಯವರ ಟೀಕೆಗೆ ಉತ್ತರರೂಪವಾಗಿ ಹೇಳಿದರು.

ಒಕ್ಕಲತನ ಮಂತ್ರಿಗಳಾದ ಶ್ರೀ ಪಾಟೀಲ ಮಲ್ಲನಗೌಡರು ತಮ್ಮ ಖಾತೆಯ ಮೇಲೆ ಮಾಡಲ್ಪಟ್ಟ ಟೀಕೆಗೆ ಉತ್ತರ ಕೊಟ್ಟರು. ಆನಂತರ ಅರ್ಥಸಚಿವರು ಉತ್ತರ ಕೊಡುತ್ತ ಈಗಾಗಲೆ ಭಾರವಾದ ಕರಗಳನ್ನು ಹೊತ್ತಿರುವ ಜನರ ಮೇಲೆ ಹೆಚ್ಚಿನ ಭಾರ ಹಾಕದೆ ನಮ್ಮ ಕಾರ್ಯ ಸಾಗುವದೆಂದು ಆಶಿಸುತ್ತೇನೆಂದು ಹೇಳಿದರು. ಸರಕಾರಿ ನೌಕರರಿಗೆ ತುಟ್ಟಿ ಭತ್ತೆ ಮೊದಲಾದ್ದಕ್ಕಾಗಿ ೫ ಕೋಟಿ ರೂ. ವೆಚ್ಚ ಮಾಡಿದೆ. ಪ್ರಾಥಮಿಕ ಶಿಕ್ಷಕರಿಗೆ ೯೮ ಲಕ್ಷ ರೂ. ಕೊಟ್ಟಿದೆ. ಆಡಳಿತೆಯಲ್ಲಿ ಮಿತವ್ಯಯ ಸೂಚಿಸಲು ಡಾ. ಜೀವರಾಜ ಮೇಥಾರ ಅಧ್ಯಕ್ಷತೆಯಲ್ಲಿ ಒಂದು ಮಂಡಲ ನೇಮಿಸಿದೆ ೧೯೪೫-೪೬ ರಲ್ಲಿ ಶಿಕ್ಷಣಕ್ಕೆ ೨ ಕೋಟಿ ೭೯ ಲಕ್ಷ ವೆಚ್ಚ ಮಾಡಲಾಗಿದೆ. ಹೊಸ ವರ್ಷದಲ್ಲಿ ೫ ಕೋಟಿ ೨೦ ಲಕ್ಷ ರೂ. ತೆಗೆದಿಡಲಾಗಿದೆ. ಹೊಸ ಕರಗಳಿಲ್ಲದೆ ವೆಚ್ಚ ಬಾಯಿಗೂಡಿಸಿದ ಶ್ರೇಯಸ್ಸು ಮುಂಬಯಿಗೆ ಮಾತ್ರ ಇದೆಂದು ಹೇಳಿದರು. ಈ ರೀತಿ ಮುಂಗಡ ಪತ್ರಿಕೆಯ ಸಾಮಾನ್ಯ ಚರ್ಚೆ ಮುಗಿದು ಬೇಡಿಕೆಗಳ ಚರ್ಚೆ ಪ್ರಾರಂಭವಾಗಿದೆ.


ಮುಂಬಯಿ ಸಾರ್ವಜನಿಕ ಸುರಕ್ಷಿತತೆ ಮಸೂದೆ ಪರಿಶೀಲಕ ಸಮಿತಿಗೆ ಒಪ್ಪಿಸಲ್ಪಟ್ಟಿತು.

ಕೇಂದ್ರ ಶಾಸನ ಸಭೆ

ಕೇಂದ್ರ ಶಾಸನಸಭೆಯಲ್ಲಿ ಮುಂಗಡ ಪತ್ರಿಕೆಯ ಚರ್ಚೆ ನಡೆದಿದೆ. ಅರ್ಥಸಚಿವರಾದ ಲಿಯಾಕತ ಅಲ್ಲೀಖಾನರು ಹೊಸ ಕರಗಳನ್ನು ಬಲವಾಗಿ ಸಮರ್ಥಿಸಿ ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ಸಹಾಯ ... ಎಚ್ಚರಿಕೆ ಕೊಟ್ಟರು. ರಾಷ್ಟ್ರದ ದಾರರಿಗೆ ಎಚ್ಚರಿಕೆ ಕೊಟ್ಟರು. ರಾಷ್ಟ್ರದ ಔದ್ಯೋಗೀಕರಣಕ್ಕೆ ಅತಿ ಮಾಡಬೇಕೆಂಬಾ ಇಚ್ಛೆ ತಮಗಾಗಲಿ ಸರಕಾರಕ್ಕಾಗಲಿ ಇರುವದಿಲ್ಲೆಂದು ತದ್ವಿರುದ್ಧ ಅದು ಹೆಚ್ಚಾಗಬೇಕೆಂದು ತಮ್ಮ ಪ್ರಬಲ ಇಚ್ಛೆ ಇದೆಂದು ಅವರು ಸ್ಪಷ್ಟಪಡಿಸಿದರು.

ಬೇಡಿಕೆಗಳ ಮೇಲಿನ ಚರ್ಚೆ ೧೦ನೇ ತಾರೀಕು ಪ್ರಾರಂಭವಾಗಿದ್ದು ೫ ದಿನ ನಡೆಯುವದು.

ಸಹ್ಯದ ಬಟ್ಟೆ ಕೊರತೆಯನ್ನು ನೀಗಿಸುವದಕ್ಕಾಗಿ ಹೆಚ್ಚು ಬಟ್ಟೆಯನ್ನುತ್ಪಾದಿಸಲು ಅನುಕೂಲವಾಗುವಂತೆ ನೇಕಾರರಿಗೆ ಹೆಚ್ಚು ನೂಲು ಪೂರಯಿಸಬೇಕಾದರೆ ಎಲ್ಲರೂ ಕೈಯಿಂದ ನೂಲು ತೆಗೆಯಲು ಪ್ರಾರಂಭಿಸುವದೊಂದೆ ಅತ್ಯಂತ ಪರಿಣಾಮಕಾರಿಯಾದ ಉಪಾಯವೆಂದು ಔದ್ಯೋಗಿಕ ಮಂತ್ರಿ ರಾಜಾಜಿಯವರು ಸಯ್ಯದ ಗುಲಾಮ ಭಿಕನಾರಂಗರ ಕಡಿತದ ಸೂಚನೆಯ ಬಗ್ಗೆ ಮಾತಾಡುತ್ತ ತಿಳಿಸಿದರು. ನೇಕಾರರಿಗೆ ಮತ್ತು ಗಿರಣಿಗಾರಿಕೆಗೆ ನೂಲಿನ ಹಂಚುವಿಕೆಯಲ್ಲಿ ನಡೆದ ಚರ್ಚೆಗಾಗಿ ಬೇಕಾಗಿ ಸಯ್ಯದ ಗುಲಾಮ ಭಿಕನಾರಂಗರು ಕಡಿತದ ಸೂಚನೆ ತಂದಿದ್ದರು.



ಮುಂಬಯಿ

ಧಾನ್ಯ ಸಂಪಾದನೆ ಧೋರಣದಲ್ಲಿ ಬದಲು ಮಾಡುವದು ಸರಕಾರದ ಇಚ್ಛೆ ಇಲ್ಲೆಂದೂ ತನಗೆ ಸಾಕಾಗುವದಕ್ಕಿಂತ ಹೆಚ್ಚು ಧಾನ್ಯ ಇದ್ದ ಪ್ರತಿಯೊಬ್ಬನು ಹೆಚ್ಚಿನ ಧಾನ್ಯವನ್ನು ಸಂಗ್ರಹಕ್ಕೆ ಒಪ್ಪಿಸಬೇಕೆಂದೂ ಮುಂಬಯಿ ಸರಕಾರ ಪ್ರಕಟನೆ ಹೊರಡಿಸಿದೆ.

ಕಲ್ಲಿದ್ದಲಿಯ ಬೂದಿಯಿಂದ ಕಣ್ಣು ಕೋರೆಯುವಂಥ ಬೆಳಕು ಇತರ ನಿತ್ಯೋಪಯೋಗಿ ವಸ್ತುಗಳನ್ನು ಪಡೆಯಬಹುದಲ್ಲದೆ ಸ್ವಲ್ಪ ವೆಚ್ಚದಲ್ಲಿಯೆ ಮನೆಗಳನ್ನು ಕಟ್ಟಬಹುದು ಎಂದು ಕಲಕತ್ತೆಯ ವೈದ್ಯನಾಥ ರೇ ಎಂಬವರು ಕಂಡುಹಿಡಿದಿದ್ದಾರೆ.

ಸೊಲ್ಲಾಪೂರ, ಜುನಿ ಗಿರಣಿಯ ಸ್ತ್ರೀ ಕೂಲಿಕಾರರ ಹಾಜರಿಯನ್ನು ದಿನಾಲು ಕಾಲು ದಿನದಂತೆ ಕಡಮೆ ಹಚ್ಚಿ ಅವರಿಗೆ ಕಡಿಮೆ ಸಂಬಳ ಕೊಡಲಾಗಿದೆಂದು ಆ ಗಿರಣಿ ಕಾಮಗಾರರು ಕಳೆದವಾರ ಸಂಪು ಹೂಡಿದ್ದರು. ಆದರೆ ಕಲೆಕ್ಟರರು ಈ ಬಗ್ಗೆ ವಿಚಾರಮಾಡುವದಾಗಿ ತಿಳಿಸಿದ್ದರಿಂದ ಜನರು ಕೆಲಸಕ್ಕೆ ಬಂದಿರುವರು.

ಚಿನ್ನದ ಆಯಾತದ ಮೇಲೆ ನಿರ್ಬಂಧವಿರದಿದ್ದರೂ ಸರಕಾರದವರು ಆಯಾತಕ್ಕೆ ಅಪ್ಪಣೆ ಕೊಡುತಿರುವದಿಲ್ಲೆಂದು ಮುಂಬಯಿಯ ಪ್ರಮುಖ ಚಿನ್ನದ ವ್ಯಾಪಾರಿಗಳಾದ ಅಲ್ಲಿ ಮಹಮ್ಮದ ಮೆಕಲಾಯರವರು ಸಂದರ್ಶನದಲ್ಲಿ ಹೇಳಿದರು. ಈ ವರ್ಷದ ಚಿನ್ನದ ಬೆಲೆ ಏರಬಹುದೆಂದು ಅವರು ಅಭಿಪ್ರಾಯ ವ್ಯಕ್ತಮಾಡಿದರು.

ಎಣ್ಣೆ ಕಾಳುಗಳು ಮತ್ತು ಅದರಿಂದ ಉತ್ಪನ್ನವಾಗುವ ಒಳ್ಳೆಣ್ಣೆ (ಖಾದ್ಯ ಎಣ್ಣೆಗಳು) ಗಳ ವಿಷಯದಲ್ಲಿ ಮುಂಬಯಿ ಸರಕಾರದವರು ಅವರ ಅಧಿಕಾರಿಗಳು ಇದುವರೆಗೆ ಹೊರಡಿಸಿದ ನಿಯಂತ್ರಣಾಜ್ಞೆಗಳು ೫ ನೇ ತಾರೀಖಿನಿಂದ ರದ್ದುಗೊಳಿಸಲ್ಪಟ್ಟಿವೆ.

ಮದ್ರಾಸ

ಮದ್ರಾಸ ಮೇಲ್ಮನೆಯಲ್ಲಿ ಭಾಷಣಮಾಡುತ್ತ ಸರ್. ಎ. ಲಕ್ಷ್ಮಣಸ್ವಾಮಿ ಮುದ್ಲಿಯಾರರು ಸಮ್ಮಿಶ್ರ ಮಂತ್ರಿಮಂಡಳಗಳಿಂದಲೆ ಹಿಂದುಸ್ಥಾನದ ಧ್ಯೇಯ ಸಾಧ್ಯವಾಗುವದರಿಂದ ಕಾಂಗ್ರೆಸ್ ನೇತೃಗಳು ಎಲ್ಲ ಪ್ರಾಂತಗಳಲ್ಲಿ ಅಂಥ ಮಂತ್ರಿಮಂಡಳಗಳನ್ನ ಸ್ಥಾಪಿಸಬೇಕೆಂದು ಸೂಚಿಸಿದರು.

ಕಾಮರೇಡ ಜಯಪ್ರಕಾಶ ನಾರಾಯಣರ ಸ್ಥಳದಲ್ಲಿ ಕಾಂಗ್ರೆಸ ಕಾರ್ಯಸಮಿತಿಗೆ ಸದಸ್ಯನಾಗಬೇಕೆಂದು ಶ್ರೀ ಜೆ ಕುಮಾರಪ್ಪ ಇವರಿಗೆ ಪಂಡಿತಜೀ ಹಾಗೂ ಮಹಾತ್ಮರು ಅಪ್ಪಣೆ ಕೊಟ್ಟರೆ ತಾವು ಒಪ್ಪುವದಾಗಿ ಕುಮಾರಪ್ಪನವರು ತಿಳಿಸಿರುವರೆಂದು ತಿಳಿಯುತ್ತದೆ.

ಅ. ಭಾರತ ಸಂಪಾದಕರ ಪರಿಷತ್ತಿಗೆ ಶ್ರೀ ತ. ಪ್ರಾಂಕಾಂತಿ ಘೋಷರೇ ಅಧ್ಯಕ್ಷರಾಗಿ ಆರಿಸ್ಪಟ್ಟಿದ್ದಾರೆ. ಕಳೆದ ವರ್ಷವೂ ಅವರೆ ಅಧ್ಯಕ್ಷರಾಗಿದ್ದರು.

ಕಂಚಿಯಲ್ಲಿಯ ಪ್ರಸಿದ್ಧ ಪುರಾತನ ವರದರಾಜ ಸ್ವಾಮಿ ದೇವಾಲಯ ೮ ನೇ ತಾರೀಖು ಹರಿಜನರಿಗೆ ಮುಕ್ತದ್ವಾರವಾಯಿತು

ಮದ್ರಾಸ ಶಾಸನ ಸಭೆಯ ಅಧ್ಯಕ್ಷರನ್ನು ಮತ್ತು ಶಾಸನ ಸಭೆಯ ಕಾರ್ಯದರ್ಶಿಗಳನ್ನು ಪಾರ್ಲಮೆಂಟರಿ ವಿಧಾನಗಳ ಅಭ್ಯಾಸಮಾಡಿಕೊಂಡು ಬರಲು ಬ್ರಿಟನ್ನಕ್ಕೆ ಕಳಿಸಬೇಕೆಂದು ಮದ್ರಾಸ ಶಾಸನ ಸಭೆಯಲ್ಲಿಯ ಸ್ವತಂತ್ರ ಗುಂಪಿನ ಧುರೀಣರಾದ ಅಯ್ಯಂಗಾರ ಚಟ್ಟಿಯಾರರು ಒಂದು ಸೂಚನೆ ಕಳಿಸಿದ್ದಾರೆ.

ಹೊಸದಿಲ್ಲಿ

ಅಖಿಲ ಭಾರತ ಸಂಸ್ಥಾನ ಪ್ರಜಾಪರಿಷತ್ತಿನ ಅಧ್ಯಕ್ಷ ಪದಕ್ಕೆ ಸೂಚಿತವಾದ ಹೆಸರಿನವರಲ್ಲಿ ಶೇಖ ಅಬ್ದುಲ್ಲಾರನ್ನು ಬಿಟ್ಟು ಉಳಿದವರೆಲ್ಲರೂ ತಮ್ಮ ಹೆಸರುಗಳನ್ನು ಹಿಂತೆಗೆದುಕೊಂಡದ್ದರಿಂದ ಶೇಖ ಅಬ್ದುಲ್ಲಾರವರು ಅವಿರೋಧ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ವಿದೇಶದ ಬೆಳ್ಳಿ ಬಂಗಾರವನ್ನು ಹಿಂದುಸ್ಥಾನದಲ್ಲಿ ಮಾರುವದರಿಂದಾಗುವ ಲಾಭ ವಿದೇಶಿಯರ ಅಥವಾ ಬೇರೆಯವರ ಕಿಸೆಯಲ್ಲಿ ಬೀಳದೆ ಸರಕಾರಕ್ಕೆ ಸಿಕ್ಕರೆ ಹಣಕಾಸಿನ ಮಂತ್ರಿಗಳಿಗೆ ಕೊರತೆಯನ್ನು ಪೂರಯಿಸಲು ಅನುಕೂಲವಾಗುವದು ಎಂದು ಮುಂತಾಗಿ ಮನು ಸುಭೇದಾರರು ಪ್ರಕಟನೆಯೊಂದರ ಮೂಲಕ ಅಭಿಪ್ರಾಯ ಪಟ್ಟಿದ್ದಾರೆ.

ವಿ ಧಾ ಯ ಕ ಕಾ ರ್ಯ ಕ್ರ ಮ ದ ಬಗ್ಗೆ ಕಾಂಗ್ರೆಸ ಸಮಿತಿಗಳಿಗೆ ಮಾರ್ಗದರ್ಶನ ನೀಡಲು ಮತ್ತು ಸಲಹೆ ಕೊಡಲು ಕಾಂಗ್ರೆಸ್ ಕಾರ್ಯ ಸಮಿತಿಯು ಶ್ರೀ ರಂಗನಾಥ ದಿವಾಕರ ಶಂಕರರಾವ ದೇವ ಪಿ. ಸಿ. ಘೋಷ ಜುಗಲಕಿಶೋರ, ಜಯರಾಮದಾಸ ದೌಲತರಾಮ ಶ್ರೀಮತಿ ಸುಚೇತಾ ಕೃಪಲಾನಿ ಮೊದಲಾದವರನ್ನೊಳಗೊಂಡ ಸಮಿತಿಯೊಂದನ್ನು ನೇಮಿಸಿದ್ದಾರೆ.

ಸಂಯುಕ್ತ ಪ್ರಾಂತ--ಬಿಹಾರ

ಅಖಿಲ ಭಾರತ ಶಿಯಾ ರಾಜಕೀಯ ಪರಿಷತ್ತಿನ ಕಾರ್ಯಸಮಿತಿಯವರು ಲಖನೌದಲ್ಲಿ ೨ನೇ ತಾರೀಖು ಸಭೆ ಸೇರಿ ದಿಲ್ಲಿಯಲ್ಲಿ ಕೂಡಲಿರುವ ರಾಷ್ಟ್ರೀಯ ಮುಸಲ್ಮಾನ ಪರಿಷತ್ತಿಗೆ ಮೂರು ಪ್ರತಿನಿಧಿಗಳನ್ನಾರಿಸಿದರು. ಬ್ರಿಟಿಶ ಸರಕಾರದ ಇತ್ತೀಚಿನ ಘೋಷಣೆ ಬಗ್ಗೆ ಸಂತೋಷ ಪ್ರದರ್ಶಿಸಿ ಮುಸ್ಲಿಂ ಲೀಗಿಗೆ ಘಟನಾ ಸಮಿತಿಯಲ್ಲಿ ಸೇರಲಿಕ್ಕೂ ವಿಧಾಯಕ ರೀತಿಯಲ್ಲಿ ಮುಂದಡಿಯಿಡಲಿಕ್ಕೂ ಬಿನ್ನವಿಸಿಕೊಂಡರು.

ಬಿಹಾರ ಮಂತ್ರಿಮಂಡಳದವರು ಜಮೀನದಾರಿ ಪದ್ಧತಿಯನ್ನು ರದ್ದು ಪಡಿಸುವ ಮಸೂದೆಯನ್ನು ತಯಾರಿಸಿದ್ದು ಮೊದಲು ಅದನ್ನು ಪ್ರಸಿದ್ಧ ವಕೀಲರ ಅಭಿಪ್ರಾಯಕ್ಕೆ ಕಳಿಸಲಿದ್ದಾರೆ.

ಅಗ್ರಾದಲ್ಲಿ ೮ನೇ ತಾರೀಖು ಸಾಯಂಕಾಲ ಜಾತೀಯ ಹೊಡೆದಾಟ ಸಂಭವಿಸಿ ೪ ಜನರಿಗೆ ಗಾಯವಾಗಿದೆ. ಸರಾಫ ಪೇಟಿ ಹಾಗು ಪೇಟೆಯ ಕೆಲ ಅಂಗಡಿಗಳು ಮುಚ್ಚಿರುವವು. ಅಧಿಕಾರಿಗಳು ಅವಶ್ಯಕ ಮುಂಜಾಗ್ರತೆ ಕೈಕೊಂಡಿದ್ದಾರೆ.

ಸಿಂಧ

ಸಿಂಧದ ಕೆಳಗಿನ ಅಣೆಕಟ್ಟಿನ ಕೆಲಸ ಈ ವರ್ಷ ಪ್ರಾರಂಭವಾಗಿ ೧೯೫೩ ಕ್ಕಿಂತ ಮುಂಚಿತವಾಗಿ ಮುಗಿಯುವ ಲಕ್ಷಣವಿಲ್ಲ ಅದ್ದರಿಂದ ಸದ್ಯಕ್ಕೆ ಬಂದು ನೆಲಸಿದವರಿಗಾದರೂ ೬೦೦೦೦ ಎಕರೆ ಭೂಮಿಯು ೧೯೪೯ ರಲ್ಲಿ ಮುಂದೆ ದೊರೆಯುವದೂ ಹೇಗೆಂಬದನ್ನು ಈಗಲೆ ಹೇಳಲಿಕ್ಕೆ ಬರುವಂತಿಲ್ಲ. ಆದುದರಿಂದ ಇಲ್ಲಿಯ ಭೂಮಿಗಳನ್ನು ನೆಚ್ಚಿ ಆ ಬಗ್ಗೆ ಸಿಂಧ ಸರಕಾರದಿಂದ ಸ್ಪಷ್ಟ ಪ್ರಕಟಣೆ ಹೊರಡುವ ಮೊದಲೆ ಇಲ್ಲಿಗೆ ಬಂದು ನೆಲಸುವದು ಗಂಡಾಂತರದ್ದಾಗುವದು ಎಂದು ಮುಂತಾಗಿ ಸಿಂಧ ಸರಕಾರ ಪ್ರಕಟನೆ ಹೊರಡಿಸಿದೆ.

ಭಾರತದ ಕ್ರಾಂತಿವೀರ ಸರದಾರ ಅಜಿತಸಿಂಗರು ೩೯ ವರ್ಷಗಳ ಪರದೇಶವಾಸದ ನಂತರ ೮ ನೇ ತಾರೀಕು ಭಾರತಕ್ಕೆ ಹಿಂದಿರುಗಿದ್ದಾರೆ ಆವರಿಗೀಗ ೬೬ ವರುಷಗಳು ಅವರು ಕರಾಚಿಗೆ ಬಂದಿದ್ದಾರೆ. ನಾನು ಮೊದಲು ಪಂ. ಜವಾಹರಲಾಲರನ್ನು ಭೆಟ್ಟಿಯಾಗಿ ಭಾರತದ ರಾಜಕೀಯ ಪರಿಸ್ಥಿತಿಯನ್ನು ಅರಿತು ಕೊಳ್ಳುವೆ. ಹಿಂದು ಮುಸ್ಲಿಂ ಐಕ್ಯಕ್ಕಾಗಿ ನನ್ನ ದೇಹ ಸವೆಸಬೇಕೆಂದಿದ್ದೇನೆ ಎಂದು ಮುಂತಾಗಿ ಸುದ್ದಿಗಾರರಿಗೆ ಹೇಳಿದರು.

ಬಂಗಾಲ

ತೇಭಾಗಾ ಆಂದೋಲನಕ್ಕೆ ಸಂಬಂಧ ಪಟ್ಟ ಮಹತ್ವದ ಗುಪ್ತ ಕಾಗದ ಪತ್ರವು ಹೇಗೆ ಬಿದ್ದು ಕೈಸೇರಿತೆಂಬದನ್ನು ತಿಳಿಸಬೇಕೆಂದು ಬಂಗಾಲ ಸರಕಾರ ವಿಶೇಷ ಆರ್ಡಿನನ್ಸಿನನ್ವಯ ಕಲಕತ್ತೆಯ ಕಮ್ಯುನಿಷ್ಟ ಸಾಧಿನಾಥ ಎಂಬ ದಿನಪತ್ರಿಕೆಗೆ ಆಜ್ಞೆ ಕೊಟ್ಟಿದ್ದಾರೆ. ಆ ಗುಪ್ತ ಕಾಗದದಲ್ಲಿ ತೇಭಾಗಾ ಆಂದೋಲನವನ್ನು ಹತ್ತಿಕ್ಕಲು ಸ್ಪೇಶಲ್ ಪಾವರ ಆರ್ಡಿನನ್ಸನ್ನು ಹೇಗೆ ಉಪಯೋಗಿಸಬೇಕೆಂಬ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಮಾಡಿದ್ದಿತು.

ಮಾರ್ಚ ೩೧ರೊಳಗಾಗಿ ತಮಗೆ ಸಾರ್ಜಂಟ ಸಮಿತಿಯ ಸೂಚನೆಯನ್ವಯ ಸಂಬಂಧ ಪಟ್ಟ ಭತ್ತೆ ದೊರೆಯದಿದ್ದರೆ ತಾವು ಎಪ್ರಿಲ ೧೧-೧೨ನೇ ದಿನಗಳಲ್ಲಿ ಸಾಂಕೇತಿಕ ಸಂಪು ಹೂಡುವದಾಗಿ ಬಂಗಾಲದ ೨೫೦೦೦ ಶಿಕ್ಷಕರು ತಮ್ಮ ಪ್ರಾಂತಿಕ ಸರಕಾರಕ್ಕೆ ತಿಳಿಸಿದ್ದಾರೆ.

ಕಲಕತ್ತೆಯ ಸ್ಟೇಟ್ಸಮನ್ ಎಂಬ ಆಂಗ್ಲ ದಿನಪತ್ರಿಕೆಯ ಮುದ್ರಕರು ಹಾಗು ಪ್ರಕಾಶಕರಾದ ಶ್ರೀ ಅಮೂಲ್ಯ ಘೋಷರಿಗೆ ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ೨೦೦ರೂ ದಂಡ ಇಲ್ಲವೆ ೩ ತಿಂಗಳು ಸಾದಾ ಶಿಕ್ಷೆ ವಿಧಿಸಿದರು. ಕಲಕತ್ತೆಯ ಹತ್ಯಾಕಾಂಡದ ಸಂಬಂಧದಲ್ಲಿ ಸುದ್ದಿ ಪ್ರಕಟಿಸುವ ಆರ್ಡಿನನ್ಸ ಮುರಿದರೆಂದು ಅವರ ಮೇಲೆ ಆರೋಪವಿತ್ತು. ಸಂಪಾದಕರು ಆಸ್ಟ್ರೇಲಿಯಾಕ್ಕೆ ಹೋಗಿದ್ದರಿಂದ ಅವರ ಮೇಲಿನ ಖಟ್ಲೆ ಹಿಂತೆಗೆದುಕೊಂಡಿದ್ದು ಅವರು ಬಂದ ಬಳಿಕ ಮತ್ತೆ ಖಟ್ಲೆ ಹಾಕಲು ಅಪ್ಪಣೆ ಕೊಟ್ಟಿದ್ದಾರೆ.

ಘಟನಾ ಸಮಿತಿಯ ಕಮ್ಯುನಿಷ್ಟ ಸದಸ್ಯರಾದ ಶ್ರೀ ಸೋಮನಾಥ ಲಾಹಿರಿಯವರನ್ನು ಕಲಕತ್ತೆಯ ಖಾಸಾ ಪೋಲೀಸರು ಬಂಧಿಸಿದ್ದಾರೆ. ಟ್ರಾಮ್ವೆ ಕೆಲಸಗಾರರ ಸಂಪಿನ ಸಂಬಂಧದಲ್ಲಿ ಅವರನ್ನು ಸೆರೆಹಿಡಿಯಲಾಗಿದೆಯಂತೆ.

ರಾಯಚೂರಿನಲ್ಲಿ ಹರಿಜನಕೇರಿಯ ಆಚೆಗಿರುವ ಒಡ್ಡರ ಕೇರಿಯಲ್ಲಿ ೭ ನೇ ತಾರೀಖು ಹೆಂಡದಂಗಡಿ ಹತ್ತಿರ ಬಡಿದಾಟವಾಗಿಒಬ್ಬನಿಗೆ ತೀವ್ರ ಗಾಯಗಳಾಗಿವೆ. ಹರಿಜನರು ಮುಸಲ್ಮಾನರು ಕೂಡಿ ಕುಡಿದು ಅಮಲೇರಿ ಬರುತಿರುವಾಗ ಮಾತುಗಳು ಬೆಳೆದು ಬಡಿದಾಟವಾಯಿತೆಂದೂ ಮುಸಲ್ಮಾನರಲ್ಲಿ ಕೆಲವು ಪೋಲೀಸರಿದ್ದರೆಂದೂ ತಿಳಿಯುತ್ತದೆ.

ಕರ್ನಾಟಕ

ಧಾರವಾಡ

ಗಜೇಂದ್ರಗಡದಲ್ಲಿ ದಾದಾ ದಾಜೇಸಾಹೇಬ ಮುಲ್ಲಾ ಎಂಬವನು ೧೯೩೫ ರಲ್ಲಿ ಕೊಲೆಮಾಡಿ ಫರಾರಿಯಾಗಿದ್ದನು. ಸಬ್ ಇನ್ಸಪೆಕ್ಟರ ಶ್ರೀ ಬೆಂಡಿಗೇರಿಯವರು ಪೋಲೀಸರೊಂದಿಗೆ ಹೋಗಿ ಹುನಗುಂದ ತಾಲೂಕಿನ ಕಂದಗಲ್ಲಿನಲ್ಲಿ ಪತ್ತೆ ಹಚ್ಚಿ ಸೆರೆಹಿಡಿದಿದ್ದಾರೆ.

ಮೂಸೂರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮೈಲಿಬೇನೆ ಮತ್ತು ಮೈಸೂರ ಗಡಿಯಲ್ಲಿ ಪ್ಲೇಗು ಇರುವದನ್ನು ಲಕ್ಷಿಸಿ ಮೂಸೂರಲ್ಲಿಯ ದುರ್ಗಾದೇವಿ ಜಾತ್ರೆಯನ್ನು ೧ ತಿಂಗಳ ನಿಲ್ಲಿಸಿದ್ದಾರೆ.

ಹೊಸರಿತ್ತಿಯಲ್ಲಿ ಪ್ರತಿವರ್ಷದಂತೆ ಶ್ರೀ ಧೀರೇಂದ್ರಸ್ವಾಮಿಗಳ ಆರಾಧನಾ ಮಹೋತ್ಸವ ಮೂರು ದಿನ ವಿಜೃಂಭಣೆಯಿಂದ ಸಾಂಗವಾಯಿತು. ಪ್ರತಿದಿನ ಪಂಚಾಮೃತಾಭಿಷೇಕ, ಅಷ್ಟೋತ್ತರ ಹಸ್ತೋದಕ ಮೊದಲಾದ ಕಾರ್ಯಕ್ರಮ ನಡೆಯುತಿದ್ದವು.

ಗದುಗಿನಲ್ಲಿ ೧೧ನೇ ತಾರೀಕು ಶ್ರೀ ವೀರನಾರಾಯಣ ಮಂದಿರದಲ್ಲಿ ಶ್ರೀ ಸತ್ಯಬೋಧ, ಸುಧೀಂದ್ರ, ವಾದಿರಾಜ, ವ್ಯಾಸರಾಯ ಸ್ವಾಮಿಗಳ ಪುಣ್ಯತಿಥಿ ನಿಮಿತ್ತ ಉಪನ್ಯಾಸಗಳಾದವು. ಹೊಸಪೇಟೆಯ ಶ್ರೀನಿವಾಸರಾವ ದೇಸಾಯರು ಆಧುನಿಕ ರಾಷ್ಟ್ರೀಯ ರೀತ್ಯಾ ಬ್ರಹ್ಮಾಂಡ ಜೀವಾಂಡಗಳ ತುಲನಾತ್ಮಕವಾಗಿಯೂ ಸಂಧ್ಯಾ ಬ್ರಹ್ಮಕರ್ಮಾದಿಗಳನ್ನು ಆಚರಿಸಲು ಶಾಸ್ತ್ರೀಯ ಕಾರಣಗಳೇನೆಂಬದನ್ನೂ ನಿರೂಪಿಸಿದರು. ಹುನಗುಂದ ಶ್ರೀನಿವಾಸಾಚಾರ್ಯರು ಕಥಾನಾಯಕರ ಜೀವನ ವೈಶಿಷ್ಟ್ಯ ಮೊದಲಾದ್ದನ್ನು ವಿವರಿಸಿದರು. ಶ್ರೀ ಕೃಷ್ಣಾಚಾರ್ಯ ಪೂಜಾರರ ಭಾರತ ವಾಚನವಾಯಿತು.

ಧಾರವಾಡ ಜಿಲ್ಲಾ ಕಲೆಕ್ಟರರಾದ ಶ್ರೀ ಶೀಲ್ಡ ಸಾಹೇಬರು ಗದುಗಿಗೆ ಬಂದಾಗ ಇಲ್ಲಿಯ ನಾಗರಿಕ ಹಿತರಕ್ಷಣ ಮಂಡಳದ ಪರವಾಗಿ ಶ್ರೀ ನವಲಿ, ಡಾ. ವಾಗಳೆ ಮತ್ತು ಶ್ರೀ ಸಿ. ವಿ. ಹಿರೇಮಠ ಇವರ ಶಿಷ್ಟಮಂಡಳ ಅವರನ್ನು ಕಂಡು ಬೆಲ್ಲ, ಗೋದಿ, ಗೋವಿನಜೋಳ, ಜವೆಗೋದಿ, ಉರುವಲು, ಬಟ್ಟೆ ಮೊದಲಾದವುಗಳ ಪೂರೈಕೆ ಬಗ್ಗೆ ಆಗುತಿರುವ ತೊಂದರೆಗಳನ್ನು ಮನವಿ ಮೂಲಕ ತಿಳಿಸಿದರು. ಕಲೆಕ್ಟರರು ಎಲ್ಲವನ್ನು ಶಾಂತರೀತಿಯಿಂದ ಕೇಳಿಕೊಂಡು ಬೆಲ್ಲವನ್ನು ಎಪ್ರಿಲ ೧ ರಿಂದ ಸೀದಾ ಅಂಗಡಿಗಳ ಮೂಲಕ ಕೊಡಲಾಗುವದೆಂದೂ ಉಳಿದ ಸರಕುಗಳ ಪೂರೈಕೆಯ ಬಗ್ಗೆಯೂ ವ್ಯವಸ್ಥೆ ಮಾಡಲಾಗುವದೆಂದೂ ಆಶ್ವಾಸನ ಕೊಟ್ಟರು.

ಗದುಗಿನ ಎಸ್. ಸಿ. ಮಿಲ್ಲಿನ ಕಾರಕೂನರು ಸಂಪು ಹೂಡಿರುವರಷ್ಟೇ. ಅವರ ಶಿಷ್ಟಮಂಡಲ ಕಲೆಕ್ಟರರು ಗದುಗಿಗೆ ಬಂದಾಗ ಅವರನ್ನು ಕಂಡು ಬೇಡಿಕೆ ತಿಳಿಸಿದರು. ಕಲೆಕ್ಟರರು ಎಲ್ಲವನ್ನು ಕೇಳಿಕೊಂಡು ತಮ್ಮ ಸೂಚನೆಗಳನ್ನು ಮಾಡಿದರು. ಈ ಸೂಚನೆಗಳಿಗೆ ಒಡೆಯರು ಒಪ್ಪದಿದ್ದರೆ ಸರಕಾರದವರಿಗೆ ಆ ಬಗ್ಗೆ ತಿಳಿಸುವದಾಗಿಯೂ ಅಲ್ಲಿಯ ಸಂಪನ್ನು ಶಾಂತ ರೀತಿಯಿಂದ ನಡೆಸಿಕೊಂಡು ಹೋಗಬೇಕೆಂದೂ ಸೂಚಿಸಿದರೆಂದು ತಿಳಿಯುತ್ತದೆ.

ಧಾರವಾಡ ಜಿಲ್ಲಾ ಲೋಕಲಬೋರ್ಡ ಭವನದಲ್ಲಿ ಕಳೆದ ತಿಂಗಳಲ್ಲಿ ಸೇರಿದ ಚಕ್ರವರ್ತಿ ಕ್ಷಯರೋಗ ನಿವಾರಣ ನಿಧಿ ಜಿಲ್ಲಾ ಸಮಿತಿಯ ಸಭೆಯಲ್ಲಿ ಕ್ಷಯರೋಗ ನಿವಾರಣ ಆಸ್ಪತ್ರೆಯನ್ನು ಗದುಗಿನಲ್ಲಿ ಕೂಡಲೆ ಸ್ಥಾಪಿಸಬೇಕೆಂದು ಗೊತ್ತಾಗಿ ಆಡಳಿತ ಮಂಡಲವೊಂದು ನಿಯಮಿಸಲಾಯಿತು.

ಬಳ್ಳಾರಿಯವರೆನಿಸಿಕೊಂಡ ಬಿ. ವೆಂಕೋಬರಾವ ಎಂಬವರು ಮುಂಬಯಿಯಲ್ಲಿ ಬಿ. ವಿ. ರಾವ ಅ್ಯಂಡ ಬ್ರದರ್ಸವೆಂಬ ಪ್ರಮುಖ ವ್ಯಾಪಾರಿ ಸಂಸ್ಥೆಯ ಒಡೆಯರೆಂದು ಹೇಳಿ ಅನೇಕರಿಂದ ಹಣವನ್ನೆತ್ತಿಕೊಂಡ ಆರೋಪದ ಮೇಲೆ ಸೆರೆಹಿಡಿಯಲ್ಪಟ್ಟಿದ್ದಾರೆ. ಮುಂದಿನ ವಿಚಾರಣೆ ನಡೆದಿದೆ.

ನವಲಗುಂದದಲ್ಲಿ ಮಾಡಲ್ ಎಜ್ಯುಕೇಶನ ಸಂಸ್ಥೆಯ ಪರವಾಗಿ ಪ್ರಾಥಮಿಕ ಟ್ರೇನಿಂಗ ಕಾಲೇಜು ಬರುವ ಜೂನದಿಂದ ಪ್ರಾರಂಭವಾಗಲಿದ್ದು ಅದಕ್ಕೆ ಸರಕಾರದ ಅಪ್ಪಣೆ ದೊರಕಿದೆ.

ಬೆಳಗಾವಿ

ಮೋಟಾರ ವ್ಯವಸಾಯವನ್ನು ರಾಷ್ಟ್ರೀಕರಣದಿಂದ ಉಳಿಸಿಕೊಳ್ಳಲಿರುವ ಡಾ. ಪಟ್ಟಾಭಿ ಸೀತಾರಾಮಯ್ಯನವರಿಗೆ ಮುಂಬಯಿಪ್ರಾಂತದ ಮೋಟಾರ ಸಾರಿಗೆಗಾರರು ೫೦ ಸಾವಿರ ರೂ ನಿಧಿ ಕೊಡಬೇಕೆಂದು ನಿಶ್ಚಯಿಸಲಾಗಿದೆ. ಪುಣೆಯಲ್ಲಿ ಕೂಡುವ ಮುಂಬಯಿ ಪ್ರಾಂತಿಕ ಮೋಟರ ಯುನಿಯನ್ಸ ಕಾಂಗ್ರೆಸ ಅಧಿವೇಶನದಲ್ಲಿ ಈ ನಿಧಿಯನ್ನರ್ಪಿಸಲಾಗುವದು.

ಸುಳಧಾಳ ಸ್ಟೇಶನದಲ್ಲಿ ೯ ನೇ ತಾರೀಖು ಭಯಂಕರ ಅಪಘಾತ ಸಂಭವಿಸಿ ಹೆಣ್ಣುಮಗಳೊಬ್ಬಳು ಮೇಲಿನ ಕೆಳಗೆ ಬಿದ್ದು ಕತ್ತರಿಸಿಕೊಂಡು ತುಂಡಾಗಿ ಹೋದಳು. ಅಕ್ಕತಂಗೇರಹಾಳದ ದೇಸಾಯಿ ಮನೆತನದ ಮುಸಲ್ಮಾನ ಯುವತಿಯೊಬ್ಬಳು ಅದೇ ತಾನೆ ಬೆಳಗಾವಿ ಪ್ಯಾಸಿಂಜರ ಇಳಿದುರೇಲು ದಾಟಿ ಹೋಗುವಾಗ ಸೀರಿಸಿಕ್ಕಿ ಕೆಳಗೆ ಬಿದ್ದಳು. ಆಗಲೆ ಪುಣೆಯ ಮೇಲು ಭರದಿಂದ ಹೋದ್ದರಿಂದ ಅವಳು ತುಂಡು ತುಂಡಾಗಿ ಹೋದಳು. ಬಗಲಲ್ಲಿಯ ಕೂಸು ಬಿದ್ದದ್ದರಿಂದ ಸುದೈವದಿಂದ ಪಾರಾಯಿತು.

ಭೋಜದ ಮದುವಿ ದಿಬ್ಬಣವೊಂದು ಮೋಟರಿನಲ್ಲಿ ಹೋಗುವಾಗ ಚಿಕ್ಕಡಿಯ ಮೂರುಮಗ್ಗಲಲ್ಲಿ ಭಯಂಕರ ಅಪಘಾತ ಸಂಭವಿಸಿ ಒಬ್ಬ ತಕ್ಷಣ ಮರಣ ಹೊಂದಿದನು. ಮದುಮಗಳಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ. ಅಲ್ಲದೆ ೨೦ ಜನರಿಗೆ ಗಾಯಗಳಾಗಿದ್ದು ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರು.

ನೇಸರಿಯಲ್ಲಿ ಭಯಂಕರ ಸ್ವರೂಪದ ದರವಡೆಯಾಗಿ ೧೨ ಸಾವಿರ ರೂಪಾಯಿ ಅಪಹರಿಸಲ್ಪಟ್ಟದರಷ್ಟೇ. ಶ್ರೀ ದೊಡಮನಿ ಇನಸ್ಪೆಕ್ಟರರು ವಿಚಾರ ನಡೆಸಿ ೩—೪ ದಿನಗಳಹಿಂದೆ ನಿಡಸೋಸಿಯ ಬಾಬು ಹುಸೇನಿಅತ್ತಾರ ಎಂಬವರ ಮನೆ ಝಡತಿಮಾಡಿದಾಗ ಸುಮ್ಮಾರು ೪ ಸಾವಿರ ರೂ. ಆಭರಣ ದೊರತಿವೆ ಅದರ ಬಗ್ಗೆ ಅವರನ್ನು ಸೆರೆಹಿಡಿದಿದ್ದಲ್ಲದೆ ಇನ್ನೂ ೨೦ ಜನರನ್ನು ಬಂಧಿಸಲಿರುವರಂತೆ ಕಾಂಗೆ.ಸಿನ ಕಾರ್ಯಕ್ಕಾಗಿ ದರವಡೆ ಮಾಡುತ್ತಿರುವದಾಗಿ ಅವರು ಹೇಳುತಿರುವರಂತೆ.

ಆಜೆವಾರಿಯಲ್ಲಿಯಾದ ಅನ್ಯಾಯವನ್ನು ಪ್ರತಿಭಟಿಸಿ ರೈತರಿಗೆ ನ್ಯಾಯ ದೊರೆಯುವಂತೆ ಮಾಡುವದಕ್ಕಾಗಿ ಬೈಲಹೊಂಗಲ ತಾಲೂಕಿನ ಕಾರ್ಯಕರ್ತರಾದ ಶ್ರೀ ಹರಕುಣಿ ಸಿದಾ.ಮಠ. ನವರು ೨೮ನೇ ತಾರೀಕಿನಿಂದ ಉಪವಾಸ ಪ್ರಾರಂಭಿಸಿದ್ದಾರೆ. ಕಲೆಕ್ಟರ ಮೊದಲಾದವರು ಅವರ ಪ್ರಕೃತಿಯನ್ನು ನೋಡಿಕೊಂಡು ಹೋದರು.

ವಿಜಾಪುರ

ವಿಜಾಪುರ ಜಿಲ್ಲಾ ಲೋಕಲ್ ಬೋರ್ಡಿಗೆ ಶ್ರೀ ಸಿದ್ದಪ್ಪ ಭಾವೀಕಟ್ಟಿ, ಯಲಗುರದಪ್ಪ ದಿರಾದಾರ, ದುಂಡಪ್ಪ ಅಂಕಲಗಿ, ರೇವಪ್ಪಾ ಕಾಳಿ, ಸೋಮನಗೌಡ ಪಾಟೀಲ. ರಾಮಪ್ಪ ವೆಂಕಟಪ್ಪ, ಕಾಜೀಸಾಹೇಬ ಮೇತ್ರಿ ರಹಿಮಾನಖಾನ ಮಾಳಗಿ ಅವರು ಅವಿರೋಧ ಆರಿಸಿಬಂದಿರುವರು.

ಮಾರ್ಚ ೬ ರಿಂದ ಸಂಪು ಹೂಡಿದ್ದ ವಿಜಾಪುರ ಮುನಿಸಿಪಾಲಿಟಿಯ ಕಸಗೂಡಿಸುವವರು ಭಂಗಿಯವರು ೮ ನೇ ತಾರೀಕಿನಿಂದ ಕೆಲಸದ ಮೇಲೆ ಬಂದಿದ್ದಾರೆ. ಜಾನೇವಾರಿಯಿಂದ ೫ರೂ. ಸಂಬಳದಲ್ಲಿ ಹೆಚ್ಚಳ ಕೊಡಬೇಕೆಂಬುದಕ್ಕೆ ಪೌರ ಸಭೆಯವರು ಒಪ್ಪಿಸಿದ್ದಾರೆ. ಇತರ ಬೇಡಿಕೆಗಳ ಬಗ್ಗೆ ಮಂತ್ರಿಗಳೊಡನೆ ವಿಚಾರ ವಿನಿಮಯ ಮಾಡಲು ಮುನಿಸಿಪಾಲಿಟಿ ಶಿಷ್ಟಮಂಡಳ ಮುಂಬಯಿಗೆ ಹೋಗಿಬಂದ ನಂತರ ವಿಚಾರವಾಗುವದು.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಲಾ ಏಕೀಕರಣ ಪರಿಷತ್ತು ಎಪ್ರಿಲ ತಿಂಗಳ ಮೊದಲನೆ ವಾರದಲ್ಲಿ ಕುಮಟಾ ತಾಲೂಕಿನ ಹೆಗಡೆಯಲ್ಲಿ ಸೇರುವದು ಗೊತ್ತಾಗಿದೆ. ಅದೇ ಕಾಲಕ್ಕೆ ಗ್ರಾಮೋದ್ಯೋಗ ಪ್ರದರ್ಶನ ನಡೆಯಲಿದೆ. ಪರಿಷತ್ತಿಗೆ ಶ್ರೀ ದಿನಕರ ದೇಸಾಯರನ್ನು ಅಧ್ಯಕ್ಷರಾಗಲು ಮತ್ತು ಶ್ರೀ ಬಿ. ಜಿ. ಖೇರ ಇವರನ್ನು ಉದ್ಘಾಟಕರಾಗಲು ಬಿನ್ನವಿಸಿಕೊಳ್ಳಲಾಗಿದೆ.

ಭಟಕಳ ಬಂದರದಿಂದ ೧೦೦೦—೧೨೦೦ ರೂಪಾಯಿ ಬೆಲೆಯ ಅರಿವೆಯನ್ನು ಗೋವಾ ಸೀಮೆಗೆ ಕಳಿಸಿಕೊಡುವ ಪ್ರಯತ್ನ ನಡೆದಿದ್ದಿತು. ಬಂದರ ಕಸ್ಟಮ ಡ್ಯೂಟಿ ಅಫೀಸರ ಶ್ರೀ ಜಿ. ವಾಯ. ಕುಲಕರ್ಣಿಯವರು ಇಂದು ರಾತ್ರಿ ಒಳ್ಳೇದಕ್ಷತೆಯಿಂದ ಅದನ್ನು ಹಿಡಿದಿರುವರು. ಮಾಲಿನ ಒಡೆಯರಾರೆಂಬುದು ಮಾತ್ರ ಇನ್ನೂ ಗೊತ್ತಾಗಿಲ್ಲ. ಪೋಲೀಸರ ತಪಾಸಣೆ ನಡೆದಿದೆ.

ಕನ್ನಡ ಸಂಸ್ಥಾನ

ಅಧಿಕಾರವನ್ನು ವರ್ಗಾಯಿಸುವ ಬ್ರಿಟಿಶ್ ಸರಕಾರದ ಮೊನ್ನಿನ ಘೋಷಣೆಯನ್ನನುಲಕ್ಷಿಸಿ ಬ್ರಿಟಿಶ್ ಅಧಿಕಾರಿಗಳು ಗುಡಚಾಪಿ ಕಿತ್ತುವದರಲ್ಲಿ ತೊಡಗಿದ್ದಾರೆಂದು ಎನಿಸುವಂತೆ ಕೊಲ್ಹಾಪುರ ಮತ್ತು ದಕ್ಷಿಣ ಸಂಸ್ಥಾನಗಳ ರೆಸಿಡೆಂಟರಾದ ಕರ್ನಲ್ ಹಾರ್ವೆಯವರು ಮತ್ತು ದಕ್ಷಿಣ ಸಂಸ್ಥಾನಗಳ ರೆಸಿಡೆಂಟರ ಕಚೇರಿಗಳಲ್ಲಿಯ ಕಾಗದಪತ್ರಗಳನ್ನು ನಾಶಪಡಿಸುವ ಅಥವಾ ಕಾಯ್ದುಡುವ ಬಗ್ಗೆ ವರ್ಗೀಕರಣ ಮಾಡುವ ವಿಚಾರವಿದೆ. ಈ ಸಂಬಂಧದಲ್ಲಿ ಸಾರ್ವಜನಿಕರು ೧೫ ಎಪ್ರಿಲದೊಳಗಾಗಿ ಅರ್ಜಿ ಮಾಡಿಕೊಳ್ಳಬೇಕು.

ಸವಣೂರಿನಲ್ಲಿ ಶ್ರೀ ಸತ್ಯಬೋಧ ಸ್ವಾಮಿಗಳ ಆರಾಧನ ಮಹೋತ್ಸವ ಮೂರುದಿನ ವಿಜೃಂಭಣೆಯಿಂದ ಸಾಂಗವಾಯಿತು. ಶ್ರೀ ಹರಿಸರ್ವೋತ್ತಮಾಚಾರ್ಯ ಮುಂಡರಗಿಯವರು ಕೀರ್ತನ ಮಾಡಿದರು ದಿನಾಲು ಪಂಚಾಮೃತ,ಹಸ್ತೋದಕ ಮೊದಲಾದವುಗಳು ನಡೆಯುತ್ತಿದ್ದವು.

ಕೊಲ್ಹಾಪುರ— ದಕ್ಷಿಣ ಸಂಸ್ಥಾನಗಳ ರೆಸಿಡೆಂಟರಾದ ಹಾರ್ವೆ ಸಾಹೇಬರಿಗೆ ಕಲಕತ್ತೆಗೆ ವರ್ಗಾಗಿತ್ತಷ್ಟೇ ಆದರೀಗ ಹೊಸ ಘೋಷಣೆಯನ್ವಯ ಪರಿಸ್ಥಿತಿಯಲ್ಲಿ ಬದಲಾವಣೆಯಾದ್ದರಿಂದ ಆಯಾ ರೆಸಿಡೆಂಟರನ್ನು ಅಲ್ಲಲ್ಲಿಯೇ ಇಡಲು ನಿರ್ಧರಿಸಿದ್ದರ ಪರಿಣಾಮವಾಗಿ ಹಾರ್ವೆ ಸಾಹೇಬರ ವರ್ಗ ರದ್ದುಮಾಡಲ್ಪಟ್ಟದಂತೆ.

ಪರಪ್ರಾಂತಗಳಲ್ಲಿನ ಕನ್ನಡಿಗರ ಸಂಘಟನೆ

ಸಂಘ ಸ್ಥಾಪನೆ

ಗುಜರಾಥ ಸೌರಾಷ್ಟ್ರ ಕಚ್ಛ ರಾಜಪುತಾನಗಳಲ್ಲಿಯ ಕನ್ನಡಿಗರನ್ನು ಸಾಂಸ್ಕೃತಿಕ ದೃಷ್ಟಿಯಿಂದ ಒಂದುಗೂಡಿಸಲು ಒಂದು ಸಂಘವನ್ನು ಸ್ಥಾಪಿಸಬೇಕೆಂದು ಇತ್ತ ಕಡೆಯ ಕನ್ನಡಿಗರ ತಲೆಯ[illegible]ಲಿತ್ತು. ಇದಕ್ಕಾಗಿ ಒಂದು ಸಭೆ ಸೇರಿ ಇದ[illegible] ಸಂಸ್ಥೆಯ ಸ್ಥಾಪನೆಗಾಗಿ ಅವಶ್ಯವಿದ್ದ ಪ್ರಯತ್ನಗಳೆಲ್ಲವನ್ನು ಕೈಕೊಳ್ಳಲು ಒಂದು ಸಮಿತಿಯನ್ನು ನೇಮಿಸಲಾಯಿತು. ಈ ಭಾಗದಲ್ಲಿರುವ ೧೩ ಜನ ಮಹನೀಯರು ಸದಸ್ಯರಾಗಿರುವರು. ಈ ಪ್ರಯತ್ನಕ್ಕೆ ಶಾರದಾ ಪೀಠದ ಶ್ರೀ ಶಂಕರಾಚಾರ್ಯರು ಆಶೀರ್ವಾದವಿತ್ತಿದ್ದಾರೆ.

ಸಿದ್ದಾಪುರವನ್ನು ಮರೆಯಬೇಡಿ

(ಐದನೇ ಪುಟದಿಂದ)

೧) ಹಾಯಸ್ಕೂಲನ್ನು ಸ್ಥಾಪಿಸುವದು.

೨) ಹಳ್ಳಿಗಳಿಗೆ ಅನುಕೂಲವಾಗುವಂತೆ ದವಾಖಾನೆಗಳನ್ನು ಸೂಲಗಿತ್ತಿಯರ (Midwife) ಸಹಿತವಾಗಿ ತೆರೆಯುವದು.

೩) ಮಳೆಗಾಲದ ಸುಮಾರು ೪-೫ ತಿಂಗಳು ಹಳ್ಳಿಗಳಿಗೆ ಹೊಳೆಗಳಿಂದಪೇಟೆಯ ಸಂಬಂಧವು ತಪ್ಪುತ್ತದೆ. ಹಳ್ಳಿಯ ಜನತೆಗೆ ಇಷ್ಟು ಅವಧಿಯ ಜೀವನ ಸಾಮಗ್ರಿಗಳನ್ನು ಒಂದೇ ಸಲ ಶೇಖರಿಸಿಟ್ಟುಕೊಳ್ಳುವದು ಆರ್ಥಿಕ ಸ್ಥಿತಿಯಿಂದ ಅಶಕ್ಯವು. ಆದ್ದರಿಂದ ಹಳ್ಳಿಗಳ ರಸ್ತೆಗಳ ಸುಧಾರಣೆಯೂ ಅಗತ್ಯವಿದ್ದ ಸೇತುವೆಗಳ ಕಟ್ಟೋಣವೂ ಆಗಬೇಕು.

೪) ಜೋಗಿನಿಂದ ಉತ್ಪನ್ನವಾದ ವಿದ್ಯುಚ್ಛಕ್ತಿಯ ಉಪಯೋಗವು ಸಿದ್ದಾಪುರಕ್ಕೆ ದೊರೆಯಬೇಕು.

೫) ಸಿದ್ದಾಪುರದಿಂದ ೯ ಮೈಲು ದೂರದಲ್ಲಿ ಎಂ. ಎಸ್. ಎಂ. ರೇಲ್ವೆ ಸ್ಟೇಶನ್ ತಾಳಗುಪ್ಪೆ ಇದೆ. ಅಲ್ಲಿಂದ ಸಿದ್ದಾಪುರ-ಸಿರಸಿಯ ಮಾರ್ಗವಾಗಿ ಹುಬ್ಬಳ್ಳಿಯ ವರೆಗೆ ರೇಲ್ವೆ ರಸ್ತೆಯನ್ನು ಹಾಕಿಸುವದು.

೬) ಕೆಪ್ಪ ಜೋಗ (ವಿಲಿಂಗಡನ್ ಫಾಲ್ಸ) ದಿಂದ ವಿದ್ಯುದುತ್ಪಾದಕ ಯೋಜನೆಯನ್ನು ಕೈಕೊಳ್ಳುವದು.

೭) ಕುಮರಿ ಸಾಗುವಳಿಯ ಬಗ್ಗೆ ಬೆಟ್ಟಗಳನ್ನು ಬಿಟ್ಟುಕೊಡುವದು.

ಇವೇ ಮೊದಲಾದವುಗಳು. ಸಿದ್ದಾಪುರ ತಾಲೂಕು ಇವುಗಳನ್ನು ತನ್ನ ಸೇವೆಯ ಪ್ರತಿಫಲವೆಂದು ಸರಕಾರದಿಂದ ಬಯಸುತ್ತಿಲ್ಲ. ಬಹುಜನತೆಗೆ ಅವಶ್ಯವಿರುವ ಕನಿಷ್ಠ ಸವಲತ್ತುಗಳನ್ನು ಸಿದ್ದಾಪುರವು ಬೇಡುತ್ತದೆ. ಕಾಂಗ್ರೆಸ ಸರಕಾರವು ಅರ್ಥಾತ್ ತನ್ನದೇ ಸರಕಾರವು ಅಧಿಕಾರಾರೂಢವಾಗಿರುವಾಗ ಸಿದ್ದಾಪುರವು ತನ್ನ ಕೊರತೆಗಳನ್ನು ಬೇಡುತ್ತದೆ ಮತ್ತು ಕೊರತೆಯು ತುಂಬೀತೆಂದು ಆಶೆ ಇಡುತ್ತದೆ.

ಸಿದ್ದಾಪುರ ತಾಲೂಕಿನ ಈ ಆರ್ತನಾದವು ಜಗತ್ತಿಗೆ ಕೇಳಿಸೀತೆ, ಅದಕ್ಕೆ ಫಲವು ದೊರಕೀತೆ?

ಗಾಂಧೀ ಯಾತ್ರೆ

(೯ ನೇ ಪುಟದಿಂದ)

ಅಂದಿನ ಸಭಿಕರಲ್ಲಿ ಬಹುಸಂಖ್ಯಾಕರಾಗಿದ್ದ ನಾಮಶೂದ್ರರಿಗೆ ಗಾಂಧೀಜಿ ಒಂದು ಎಚ್ಚರಿಕೆಯಿತ್ತರು. ನಾಮಶೂದ್ರರು ತಾವು ಪತಿತರು, ಅಸ್ಪೃಶ್ಯರೆಂದು ಬಗೆಯಕೂಡದು. ಮೇಲ್ಜಾತಿಯವರೆನಿಸಿಕೊಳ್ಳುವವರು ಅಪರಾಧಿಗಳು. ಅವರೇ ಈ ಅಧೋಗತಿಗೆ ಕಾರಣರು. ಇದನ್ನು ನಾಮಶೂದ್ರರು ಅರಿತುಕೊಂಡರೆ ಮೇಲ್ಜಾತಿಯವರ ತಪ್ಪು ರೂಢಿಗಳನ್ನೂ ದುರಭ್ಯಾಸಗಳನ್ನೂ ಅನುಕರಿಸಲಾರರು.

ನಾಮಶೂದ್ರರಲ್ಲಿರುವ ಬಾಲ್ಯವಿವಾಹದ ರೂಢಿಯನ್ನೂ ವಿಧವೆಯರ ವಿವಾಹಕ್ಕೆ ಒತ್ತಾಯದಿಂದ, ಮೇಲ್ಜಾತಿಯವರ ಅನುಕರಣೆ ನಡೆಸಲೆಂದು, ತಡೆ ಹಾಕುವದನ್ನೂ ಕೇಳಿ ಗಾಂಧೀಜಿಗೆ ದುಃಖವಾಯಿತು. ಅದರಿಂದ ಅವರಲ್ಲಿ ಅನೀತಿಜನ್ಯವಾದ ರೋಗಗಳು ಪ್ರಚಲಿತವಾಗಿವೆ. ಅವರ ಉದ್ಧಾರ ಶಾಸನ ಸಭೆಗಳಿಂದಾಗಲಿ ಬೇರಾವ ಬಾಹ್ಯ ಶಕ್ತಿದಿಂದಾಗಲಿ ಸಾಧ್ಯವಾಗದು. ಅದು ಅವರ ಸ್ವಂತ ಪ್ರಯತ್ನಗಳನ್ನೆ ಅವಲಂಬಿಸಿದೆ. ಸ್ವರ್ಗೀಯ ಮಾಲವೀಯಜಿಯವರು ಹೇಳಿದಂತೆ, ನಾವು ಪ್ರಾಮಾಣಿಕತೆಯಿಂದ ಒಂದು ಕವಡೆಯಷ್ಟೇ ಆದರೂ ಸಂಪಾದಿಸಿ ಅದರಿಂದ ಸಿಗಬಹುದಾದ್ದನ್ನೇ ಬಳಸಿ ಬಾಳಬೇಕು. ಹಾಗಾದರೆ ಅವರಿಗೆ (ನಾಮಶೂದ್ರರಿಗೆ) ಸುಖವುಂಟಾಗಿ ಅಸ್ಪೃಶ್ಯತೆ ಗತಕಾಲದ ಮಾತಾದೀತು. ಆಗ ಮೇಲ್ಜಾತಿಯವರೆನಿಸುವವರು ತಾವು ಮಾಡಿದ ಪಾಪಾಚಾರಕ್ಕೆ ನಾಚಿಕೊಳ್ಳುವರು.

ನಡೆದ ವಿಧ್ವಂಸವನ್ನು ಕುರಿತು ಬಾಪಾ ಅವರು ಹೇಳಿದ್ದಾರೆ. ಅದಕ್ಕಾಗಿ ತಮಗೆ ದುಃಖವಾಗಿದೆಯೆಂದು ಗಾಂಧೀಜಿ ಮುಂದುವರಿಸಿದರು. ಆದರೆ ತಾವು ಆ ಕಾರಣದಿಂದ ಒಂದು ಹನಿ ಕಣ್ಣೀರನ್ನು ಮಿಡಿಯುವದೂ ಇಲ್ಲ ವಿಧ್ವಂಸಕರಲ್ಲಿ ದ್ವೇಷ ಬುದ್ಧಿಯನ್ನಿಟ್ಟುಕೊಳ್ಳುವದೂ ಇಲ್ಲ. ನಾಮಶೂದ್ರರು ತಮ್ಮ ದುರ್ಗತಿಯನ್ನು ಕುರಿತು ಅಳದಿರಲಿ. ಕಠಿನ ಪರಿಶ್ರಮ ಅವರಿಗೆ ಅಭ್ಯಾಸವಾಗಿದೆ, ಆಗಿರಬೇಕು. ನ್ಯಾಯ ಪಾಡುದನ್ನು, ಸಕಾಲದಲ್ಲಿ, ಮಾಡಬೇಕೆಂದು ಸರಕಾರಕ್ಕೆ ಅವರು ಮೊರೆಯಿಡಬಹುದು. ಆದರೆ ಸಹಾಯ ಬಾರದಿದ್ದರೆ ಅವರು ಎದೆಗೆಡಬಾರದು ತಮ್ಮ ಕೈಕಾಲುಗಳ ಬಲವನ್ನೆ ನಂಬಿ ಅವರು ಹೊಸತಾಗಿ ಜೀವನವನ್ನು ಪ್ರಾರಂಭಿಸಬೇಕು. ತನ್ನ ಉದ್ಧಾರಕ್ಕೆ ತಾನೇ ಅಣಿಯಾದವನಿಗೆ ಯಾವಾಗಲೂ ದೇವರ ವರದಹಸ್ತವಿದೆ. ಚೈತನ್ಯರೂಪಿ ಪರಮಾತ್ಮನನ್ನು ನಂಬಿರಿ. ಯಾವಾಗಲೂ ಕುಂದುಕೊರತೆ ತುಂಬಿದ ಜನರಾಶಿಯನ್ನು ಕ್ಷಮಿಸಿರಿ.

ಹೈಮಚಾರದಲ್ಲಿ ವಿಶ್ರಾಂತಿ

ತಮ್ಮ ಪ್ರವಾಸದ ಎರಡನೆ ಘಟ್ಟ ಮುಗಿದ ನಂತರ ಹೈಮಚಾರದಲ್ಲಿ ಗಾಂಧೀಜಿ ಒಂದು ವಾರದ ವಿಶ್ರಾಂತಿ ಪಡೆಯಲೊಪ್ಪಿದರು. ಆ ಕಾಲದಲ್ಲಿ ನಡೆದ ಘಟನೆಗಳಲ್ಲಿ ಫಜಲುಲ್ ಹಕ್ಕರು ಅವರನ್ನು ೯೦ಡು ಮಾತಾಡಿದ್ದೊಂದು ಮುಖ್ಯ ಸಂಗತಿ. ಹಕ್ಕರು ಗಾಂಧೀಜಿಯನ್ನು ನೌಖಾಲಿಯಿಂದ ಹೊರಗಟ್ಟಬೇಕೆಂದು ಪ್ರಚಾರ ಮಾಡುತಿದ್ದರು. ಈ ಬಗ್ಗೆ ಗಾಂಧೀಜಿಯನ್ನು ಕಂಡು ಅವರು ಬಂಗಾಲದಲ್ಲಿರುವದರಿಂದ ಹಿಂದೂ ಮುಸ್ಲಿಂ ಸಖ್ಯಕ್ಕೆ ಗಂಡಾಂತರವುಂಟೆಂದು ಅವರಿಗೆ ಮನವರಿಕೆ ಮಾಡಿಕೊಡುವದಾಗಿ ಸಾರಿದ್ದರು. ಗಾಂಧೀಜಿ ಅವರಿಗೆ ಭೆಟ್ಟಿ ಕೊಟ್ಟರು. ಭೆಟ್ಟಿಯಾಗಿದ ನಂತರ ಹಕ್ಕರು ಒಂದು ಕಡೆ ಭಾಷಣದಲ್ಲಿ ಗಾಂಧೀಜಿಯ ಸಾಸ್ತವ್ಯದಿಂದ ಪೂರ್ವ ಬಂಗಾಲದಲ್ಲಿ ಹಿಂದೂ ಮುಸ್ಲಿಂ ಸಖ್ಯಕ್ಕೆ ಅನುಕೂಲವಾಗಿದೆಯೆಂದೂ ಸ್ವತಃ ತಾವು ಇನ್ನು ಮುಂದೆ ಗಾಂಧೀಜಿಯಂತೆ ಹಿಂದೂ ಮುಸ್ಲಿಂ ಐಕ್ಯಕ್ಕೆ ಜೀವನವನ್ನು ಮೀಸಲಿಡುವೆವೆಂದೂ ಹೇಳಿದರಂತೆ!

ಬಿಹಾರಕ್ಕೆ ಪಯಣ

ಬಂಗಾಲ ಸಂಚಾರದ ಎರಡನೆ ಘಟ್ಟ ಮುಗಿದ ನಂತರ ಗಾಂಧೀಜಿಯವರು ಕೆಲ ದಿನದ ಮಟ್ಟಿಗೆ ಬಿಹಾರಕ್ಕೆ ಭೆಟ್ಟಿಕೊಡಲು ನಿರ್ಣಯಿಸಿದರು. ಬಿಹಾರದ ಪರಿಸ್ಥಿತಿ ಅಷ್ಟು ನೆಟ್ಟಗಿಲ್ಲವೆಂದು ಬಿಹಾರ ಮಂತ್ರಿ ಡಾ. ಸಯ್ಯದ ಮಹಮ್ಮದರು ತಮಗೆ ಪತ್ರ ಬರೆದುದೇ ಈ ನಿರ್ಧಾರಕ್ಕೆ ಕಾರಣವೆಂದು ಗಾಂಧೀಜಿ ತಿಳಿಸಿದ್ದಾರೆ. ಬಿಹಾರದ ಸಂಕ್ಷಿಪ್ತ ಪ್ರವಾಸವನ್ನು ಮುಗಿಸಿ ಅವರು ತಿರುಗಿ ನೌಖಾಲಿಗೆ ಮರಳುವರು. ಹೈಮಚಾರದಿಂದ ದೋಣಿಯ ಮುಖಾಂತರ ಹೊರಟು ಕಲಕತ್ತೆಗೆ ಮುಟ್ಟಿ ಅಲ್ಲಿ ಸೋದೆಪುರ ಆಶ್ರಮದಲ್ಲಿ ಎರಡು ದಿನ ಉಳಿದುಕೊಂಡು ಗಾಂಧೀಜಿ ಬಿಹಾರದ ಪಾಟನಾಕ್ಕೆ ತಾ. ೫ಕ್ಕೆ ಬಂದು ಸೇರಿದರು. ಬಿಹಾರದ ಹಿಂದುಗಳ ಮನವೊಲಿಸಿ ಮುಸ್ಲಿಮರ ಸ್ಥಿತಿಗತಿಯನ್ನು ಸುಧಾರಿಸುವದೇ ಅವರ ಉದ್ದೇಶ.

ಓಡಿಸಾದ ಜವಳಿ ಧೋರಣ

(೭ ನೇ ಪುಟದಿಂದ)

ಅದು ಕೇವಲ ಭೌತಿಕ ಅವಶ್ಯಕತೆಯನ್ನಷ್ಟೇ ಪೂರೈಸಲಾರದು, ಅದು ಲಾಭದಾಯಕ ಉದ್ಯೋಗವನ್ನು ಒದಗಿಸುತ್ತದೆ ಮತ್ತು ಅದೇ ಕಾಲಕ್ಕೆ ವ್ಯಕ್ತಿತ್ವದ ಅಭಿವೃದ್ಧಿಗೆ ಅವಕಾಶವನ್ನು ರಟುಮಾಡುತ್ತದೆ. ಜವಳಿ ಉದ್ಯೋಗವು ಕೇವಲ ಭೌತಿಕ ಅವಶ್ಯಕತೆಯನ್ನು ಮಾತ್ರ ಪೂರಯಿಸುತ್ತದೆ; ಮೂರು ಕಾರ್ಯಗಳಲ್ಲಿ ಇದು ತೀರ ಕನಿಷ್ಠ ಮಹತ್ವದ್ದು. ಜನರು ಇಂಥ ವಸ್ತುಗಳನ್ನು ಕೊಳ್ಳುವಾಗ ವಿನಿಮಯ ರೂಪವಾಗಿ ಅವರು ತಮ್ಮ ಉಳಿದ ಉತ್ಪಾದನೆಗಳನ್ನು ಸಲ್ಲಿಸುತ್ತಾರೆ. ಆದರೆ ಅವರು ತಮ್ಮ ಬಟ್ಟೆಯನ್ನು ತಾವೆ ಉತ್ಪಾದನೆ ಮಾಡುವಾಗ ಅವರಿಗೆ ತಮ್ಮ ಉತ್ಪಾದನೆಯನ್ನು ಎರಡನೆಯವರಿಗೆ ಕೊಡಬೇಕಾಗಿಲ್ಲ. ಆದರಿಂದ ಅವರು ಯಾವುದನ್ನೂ ಕಳೆದುಕೊಳ್ಳಬೇಕಾಗುವದಿಲ್ಲ. ಇದಕ್ಕಾಗಿಯೆ ಓಡಿಸಾದ ಜನರ ಸುಲಿಗೆಯಲ್ಲದೆ ಬೇರೆ ಯಾವ ಉದ್ದೇಶವನ್ನೂ ಗಿರಣಿ ಉದ್ಯೋಗವು ಸಾಧಿಸಲಾರದೆಂದು ನಾನು ಹೇಳಬಯಸುತ್ತೇನೆ.

ಕಾಂಗ್ರೆಸ್ಸಿನ ಇಡೀ ಕ್ರೋಢಿಕೃತ ಧೋರಣದ ಅವಶ್ಯಕತೆಯಿದೆಂಬುದು ಈ ಪತ್ರವ್ಯವಹಾರದಿಂದ ಸಿದ್ಧವಾಗುವದು. ಈ ಬಗೆಯ ಪರಿಸ್ಥಿತಿಯನ್ನೆದುರಿಸುವುದಕ್ಕಾಗಿ ಅಲಹಾಬಾದ ಪರಿಷತ್ತು ಕೆಲ ಸೂಚನೆಗಳನ್ನು ಮಾಡಿದೆ.

—ಜೆ. ಸಿ. ಕುಮಾರಪ್ಪ

ಅ. ಭಾ. ಆಕಾಶವಾಣಿಯ ಭಾಷಾ ಧೋರಣೆ

(೮ ನೇ ಪುಟದಿಂದ)

ಹೆಚ್ಚಾಗಿ ಹಿಂದುಸ್ತಾನಿಯಲ್ಲಿಯೆ ನಡೆಸಲ್ಪಡಬೇಕಾಗುವದು. ಆದುದರಿಂದ ಎಲ್ಲ ಪ್ರಾಂತಿಕ ಸರಕಾರಗಳೂ ಸಾರ್ವಜನಿಕ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗದಂತೆ, ಉರ್ದೂ ನಾಗರಿ ಲಿಪಿಗಳೆರಡರಲ್ಲೂ ಬರೆಯಲ್ಪಡುವ ಹಿಂದುಸ್ತಾನಿಯ ಅಭ್ಯಾಸವನ್ನು ಆದಷ್ಟು ಬೇಗನೆ ಒತ್ತಾಯದ ವಿಷಯವಾಗಿ ಮಾಡಬೇಕೆಂದು ಈ ಸಮಿತಿ ಬಿನ್ನವಿಸುತ್ತದೆ. ಸದ್ಯಕ್ಕೆ ಈ ಕೆಳಗಿನ ಧೋರಣವನ್ನು ಅನುಸರಿಸಬೇಕುಃ—

(೧) ಎರಡೂ ಲಿಪಿಗಳನ್ನು ಬಲ್ಲ ಹಿಂದುಸ್ತಾನಿ ಶಿಕ್ಷಕರನ್ನು ನೇಮಿಸಿಕೊಳ್ಳುವದನ್ನು ಎಲ್ಲ ಶಾಲೆಗಳಿಗೂ ಕಡ್ಡಾಯವಾಗಿ ಮಾಡಬೇಕು.

(೨) ಎರಡೂ ಲಿಪಿಗಳನ್ನು ಕಲಿತ ವಿದ್ಯಾರ್ಥಿಗಳಿಗೆ ಮಾತ್ರ ಸರಕಾರ ಪ್ರಮಾಣ ಪತ್ರಗಳನ್ನು ಕೊಡಬೇಕು.*

(೩) ಎರಡೂ ಲಿಪಿಗಳನ್ನು ಕಲಿತ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿವೇತನ ಪಾರಿತೋಷಿಕ ಮೊದಲಾದವುಗಳನ್ನು ಕೊಡಬೇಕು. ಟ್ರೇನಿಂಗ ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗೂ ಇತರ ಸರಕಾರಿ ನೌಕರರಿಗೂ ಉಭಯ ಲಿಪಿಗಳಲ್ಲಿ ಹಿಂದುಸ್ತಾನಿಯ ಪರಿಜ್ಞಾನವನ್ನು ಕಡ್ಡಾಯವಾಗಿ ಮಾಡಬೇಕು.

* ಎರಡೂ ಲಿಪಿಗಳನ್ನು ಒಮ್ಮೆಲೆ ಕಲಿಯಬೇಕೊ ಒಂದರ ನಂತರ ಇನ್ನೊಂದನ್ನೊ ಎಂಬುದು ಆಯಾ ಪ್ರಾಂತಗಳ ಇಚ್ಛೆಯಂತೆ ನಿರ್ಣಯಿಸಲ್ಪಡಬೇಕು.

ಕಾಂಗ್ರೆಸ ಸೇವಾದಲದ ಸ್ಥಾಪನೆ

ಕಾಂಗ್ರೆಸ್ ಕಾರ್ಯಸಮಿತಿಯ ನಿರ್ಣಯ

ಕಾಂಗ್ರೆಸ ಸೇವಾದಲದ ಬಗ್ಗೆ ಅ. ಭಾ. ಕಾಂಗ್ರೆಸ ಕಾರ್ಯ ಸಮಿತಿಯು ೧೯೪೭ ಮಾರ್ಚ ೭ ನೇ ತಾರೀಖಿನ ಸಭೆಯಲ್ಲಿ ಈ ಕೆಳಗಿನ ಗೊತ್ತುವಳಿಯನ್ನು ಅಂಗೀಕರಿಸಿತು.

ಕಾಂಗ್ರೆಸ ಕಾರ್ಯ ಸಮಿತಿಯು ಮನ್ನಿಸಿದ ಘಟನೆ ಮತ್ತು ನಿಯಮಗಳಿಗನುಸಾರವಾಗಿ ಎಲ್ಲ ಪ್ರಾಂತಿಕ ಕಾಂಗ್ರೆಸ ಸಮಿತಿಗಳು ತಮ್ಮ ಸ್ವಯಂಸೇವಕ ಸಂಸ್ಥೆಗಳನ್ನು ಪುನರ್ಘಟಿಸಲು ಕೂಡಲೆ ಉಪಾಯಗಳನ್ನು ಕೈಕೊಳ್ಳಬೇಕೆಂದು ಪ್ರಾ. ಕಾಂ. ಸಮಿತಿಗಳಿಗೆ ಆಜ್ಞಾಪಿಸಲಾಗಿದೆ.

ಕಾಂಗ್ರೆಸ ಸೇವಾ ದಲಗಳ ಪುನರ್ಘಟನೆಯ ಕಾರ್ಯದಲ್ಲಿ ಅ. ಭಾ. ಕಾಂ. ಸಮಿತಿಯು ಪ್ರಾಂ. ಕಾಂಗ್ರೆಸ ಸಮಿತಿಗಳಿಗೆ ಪ್ರತ್ಯಕ್ಷ ಸಹಾಯ ಮಾಡುವದಕ್ಕಾಗಿ ಮತ್ತು ಸ್ವಯಂಸೇವಕರಿಗೆ ಅವಶ್ಯಕ ಶಿಕ್ಷಣ ಕೊಡುವದಕ್ಕಾಗಿ ಕಾಂಗ್ರೆಸ ಕಾರ್ಯ ಸಮಿತಿಯು ಮೇ. ಜ. ಶಹಾನವಾಜಖಾನರನ್ನು ನೇಮಿಸಿದೆ.

ಕಾಂಗ್ರೆಸ ಸ್ವಯಂಸೇವಕ ಸಂಸ್ಥೆಯ ಹೆಸರು 'ಕಾಂಗ್ರೆಸ ಸೇವಾದಲ'ವೆಂದಿರಬೇಕು.

ಕಾಂಗ್ರೆಸ ಸೇವಾದಲದ ಧ್ಯೇಯಗಳಿಂತಿರಬೇಕು—

೧ ಕಾಂಗ್ರೆಸಿನ ಗೊತ್ತುಗುರಿಗಳಿಗನುಸಾರವಾಗಿ ರಾಷ್ಟ್ರಕ್ಕೆ ಸುಸಂಘಟಿತವಾಗಿ ಶಿಸ್ತಿನಿಂದ ಸೇವೆ ಸಲ್ಲಿಸಲು ಅನುಕೂಲವಾಗುವಂತೆ ಮತ್ತು ಸ್ವತಂತ್ರ ಭಾರತದ ಆದರ್ಶ ನಾಗರಿಕರಾಗುವಂತೆ ತರುಣರಲ್ಲಿ ಸ್ವಾರ್ಥತ್ಯಾಗ, ಸ್ವಾವಲಂಬನ, ನಿರಾಡಂಬರ, ಸೇವಾಬುದ್ಧಿ, ಸಹಿಷ್ಣುತೆ ಮತ್ತು ಸಹಕಾರ ಭಾವಗಳನ್ನು ಬಿತ್ತುವದು.

೨ ಯಾವ ಜಾತಿಭೇದಗಳನ್ನು ಲೆಕ್ಕಿಸದೆ ಎಲ್ಲರಿಗೂ ವಿಧಾಯಕ ಕಾರ್ಯಕ್ರಮದ ಮೂಲಕ ಸೇವೆ ಸಲ್ಲಿಸಿ ರಾಷ್ಟ್ರೀಯ ಐಕ್ಯಕ್ಕೆ ಸಹಾಯ ಮಾಡುವದು.

೩ ಶಾರೀರಿಕಶಿಕ್ಷಣದ ಮೂಲಕ ಭಾರತೀಯರ ದೇಹಾರೋಗ್ಯವನ್ನು ಬೆಳೆಸುವದುಃ

೪ ಅವಶ್ಯಕ ಪ್ರಸಂಗದಲ್ಲಿ ಜನರ ಗೌರವ ವಿತ್ತ ಜೀವಿತಗಳ ರಕ್ಷಣೆಯ ಹೊಣೆ ಹೊತ್ತು ಶಾಂತಿದಳದಂತೆ ದುಡಿದು ಪರಿಹಾರ ಕಾರ್ಯ ನಡೆಸಬೇಕು.

ಈ ನಾಡಿನಲ್ಲಿ ಸೇವಾದಲಗಳನ್ನು ಸಂಘಟಿಸುವದಕ್ಕಾಗಿ ಕಾಂಗ್ರೆಸ ಕಾರ್ಯ ಸಮಿತಿಯು ತನ್ನ ಒಬ್ಬ ಸದಸ್ಯನನ್ನಾಗಲಿ ಬೇರೆ ಯಾರನ್ನಾಗಲಿ ನೇಮಿಸುವದು. ಆ ವ್ಯಕ್ತಿಗೆ ಸಹಾಯ ಮಾಡಲು ತರಬೇತಿ ಹೊಂದಿದ ಐವರ ಸಲಹೆ ಮಂಡಳ ನೇಮಿಸಲಾಯಿತು.


ಆ ವ್ಯಕ್ತಿಯು ಪ್ರಾಂತಿಕ ಸೇವಾದಲಗಳ ಸಹಕಾರ್ಯ, ಮೇಲ್ವಿಚಾರಣೆ ಮಾರ್ಗದರ್ಶನಗಳನ್ನು ವಹಿಸಿಕೊಳ್ಳಬೇಕಾಗುವದು. ಸ್ವಯಂಸೇವಕ ಶಿಕ್ಷಣ, ಸಂಸ್ಥೆಯ ತಂತ್ರ, ಸ್ವಯಂಸೇವಕರ ಪ್ರತಿಜ್ಞೆಯನ್ನು ಬರೆದು ತೆಗೆಯುವದು ಧ್ವಜವಂದನೆಯ ರೀತಿ' ಮುಂತಾದ ಎಲ್ಲ ಪ್ರಾಂತಿಕ ದಲಗಳಿಗೆ ಸಂಬಂಧಿಸಿದ ಸಾಮಾನ್ಯ ವಿಷಯಗಳನ್ನು ನೋಡಿಕೊಳ್ಳಬೇಕಲ್ಲದೆ ಪ್ರಾಂತಿಕ ಸೇವಾದಲಗಳಿಗೆ ಸಹಾಯ ಮಾಡಬೇಕು.

ತಮ್ಮ ಪ್ರಾಂತಿಕ ಸ್ವಯಂ ಸೇವಕ ದಲದ ಪೂರ್ಣ ಹೊಣೆಹೊತ್ತು ಪ್ರಾಂತದಲ್ಲಿ ಅದರ ಚಟುವಟಿಕೆಗಳನ್ನು ನಡೆಸುವದಕ್ಕಾಗಿ ಪ್ರಾಂತಿಕ ಕಾಂ ಸಮಿತಿಗಳು ವರ್ಷಕ್ಕೊಮ್ಮೆ ಇಲ್ಲವೆ ನಿಯಮಗಳಲ್ಲಿ ಹೇಳಿದ ಕಾಲಾವಧಿಗೊಮ್ಮೆ ಪ್ರಾಂತಿಕ ಮಂಡಳಗಳನ್ನು ನೇಮಿಸಬೇಕು. ಪ್ರಾಂತಿಕ ದಲದ ಮುಖ್ಯಾಧಿಕಾರಿಯು ಈ ಮಂಡಲದ ವಿಶೇಷ ಸದಸ್ಯನಾಗಿರಬೇಕು.

ಪ್ರಾಂ. ಕಾಂ. ಸಮಿತಿಯ ಕಾರ್ಯದರ್ಶಿಗಳಲ್ಲೊಬ್ಬರು ಈ ಮಂಡಳದ ಕಾರ್ಯದರ್ಶಿಗಳಾಗಬೇಕು.

ಪ್ರಾಂ. ಸ್ವಯಂಸೇವಕ ಮಂಡಳವು ಅ. ಭಾ. ಸ್ವಯಂಸೇವಕ ಸಂಸ್ಥೆಯ ಕಾರ್ಯಕ್ಕಾಗಿ ನೇಮಕ ಹೊಂದಿದ ಸದಸ್ಯನ ಇಲ್ಲವೆ ವ್ಯಕ್ತಿಯ ಅನುಮತಿ ಪಡೆದು ಪ್ರಾಂತಿಕ ಸೇವಾದಲದ ಮುಖ್ಯಾಧಿಕಾರಿಯನ್ನು ನೇಮಿಸುವದು. ಈ ಅಧಿಕಾರಿಯು ಮೂರು ವರ್ಷ ಕಾಲ ಉಳಿಯತಕ್ಕದ್ದು.

ಶ್ರೀ ದ. ಪ. ಕರಮರಕರರು



ಇದೇ ಎಪ್ರಿಲ ತಿಂಗಳ ೧೦ ನೇ ದಿನಾಂಕ ಸ್ವಿಝರ್ಲಂಡದ ಸುಪ್ರಸಿದ್ಧ ಜಿನೆವಾ ನಗರದಲ್ಲಿ ಸೇರಲಿರುವ ಅಂತರ ರಾಷ್ಟ್ರೀಯ ವಾಣಿಜ್ಯ ಪರಿಷತ್ತಿಗೆ ಹಿಂದುಸ್ತಾನ ಸರಕಾರದ ಶಿಷ್ಟಮಂಡಲದ ಸದಸ್ಯರಾಗಿ ಹೋಗಲು ಶ್ರೀ ದ. ಪ. ಕರಮರಕರರಿಗೆ ಆಮಂತ್ರಣ ಕೊಡಲಾಗಿದೆಯೆಂದು ತಿಳಿದುಬಂದಿರುವದು.

ಪ್ರಶ್ನೆ ಪೆಟ್ಟಿಗೆ

ಪ್ರಶ್ನೆ—ನಿಮ್ಮ ಅಸಹಕಾರ ಮತ್ತು ಮಿತ್ರ ರಾಷ್ಟ್ರಗಳ ಅಬಾಂಧವ್ಯ (ಶತ್ರುಪ್ರದೇಶಗಳೊಡನೆ ಸಂಪರ್ಕ ಬೆಳೆಸದಿರುವದು) ಗಳಲ್ಲಿ ಭೇದವೇನು?

ಉತ್ತರ—ಉತ್ತರ ಸ್ಪಷ್ಟವಿದೆ. ನನ್ನ ಅಸಹಕಾರ ವಿಚಾರ ಮತ್ತು ಪರಿಣಾಮಗಳಲ್ಲಿ ಅಹಿಂಸಾತ್ಮಕವಾಗಿದ್ದಿತು. ಇದರ ಅರ್ಥ ಆಚರಣೆಯಲ್ಲಿ ಅದು ಸದಾ ಕಾಲ ಪರಿಪೂರ್ಣವಾಗಿದಿತೆಂದಲ್ಲ. ತತ್ವ ವಿಚಾರ ಮತ್ತು ಆಚರಣೆ ಕ್ವಚಿತ್ತಾಗಿ ಕೂಡುತ್ತವೆ. ಯೂಕ್ಲೀಡಿನ ರೇಖೆಯ ತಾತ್ವಿಕ ವ್ಯಾಖ್ಯೆ ಕೂಡ ವ್ಯವಹಾರದಲ್ಲಿ ಎಂದೂ ಕೂಡುವದಿಲ್ಲ.

ಮಿತ್ರರಾಷ್ಟ್ರಗಳ ಅಬಾಂಧವ್ಯ ಧೋರಣೆಯ ಪರಿಣಾಮ ಯಾವಾಗಲೂ ಘಾತಕವಾದುದು. ಆ ಧೋರಣೆಯನ್ನನುಸರಿಸುವವರು ಅದನ್ನು ಕಾಣಬಹುದು. ಆ ದುರಂತಕ್ಕೆ ಇನ್ನೂ ಕೊನೆಯಿಲ್ಲೆಂಬುದು ಶೋಚನೀಯವಾಗಿದೆ. ಅದರ ಪರ್ಯವಸಾನವೆಂತಾಗಬಲ್ಲುದೆಂಬುದು ಯಾರಿಗೂ ತಿಳಿಯದು.

ಮೋ. ಕ. ಗಾಂಧಿ

ಈ ಕಾಂಗ್ರೆಸ ಸೇವಾದಲದಲ್ಲಿ ಬಾಲ, ಕುಮಾರ ಇಲ್ಲವೆ ಕುಮಾರಿ ಮತ್ತು ಪ್ರೌಢ ಎಂದು ಮೂರು ವರ್ಗಗಳನ್ನು ಮಾಡಲಾಗಿದೆ.

ಈ ಸ್ವಯಂಸೇವಕ ಸಂಸ್ಥೆಯು ಕಾಂಗ್ರೆಸಿನಲ್ಲಿಯ ಪಾಕ್ಷಿಕ ರಾಜಕಾರಣದಿಂದ ದೂರವಾಗಿರಬೇಕು. ಈ ಸಂಸ್ಥೆಯಲ್ಲಿಯ ಯಾವದೇ ಅಧಿಕಾರಿಯು ಕಾಂಗ್ರೆಸಿನಲ್ಲಿ ಯಾವ ಅಧಿಕಾರಸ್ಥಾನವನ್ನೂ ಹೊಂದಬಾರದು. ಆದರೆ ಅವರು ತಮ್ಮ ಮತಾಧಿಕಾರವನ್ನು ಉಪಭೋಗಿಸಬಲ್ಲರು. ಪ್ರಾಂತಿಕ ಮುಖ್ಯಾಧಿಕಾರಿಯ ಇಚ್ಛೆಯ ಮೇರೆಗೆ ಗ್ರಾಮ ಸಮಿತಿಯ ವಿಷಯಗಳಲ್ಲಿ ಈ ನಿಯಮವನ್ನು ಸಡಲಿಸಬಹುದು.

ಕಾಂಗ್ರೆಸಿಗನು ಕಾಂಗ್ರೆಸ ಸೇವಾದಲವನ್ನಲ್ಲದೆ ಬೇರೆಯಾವ ಸ್ವಯಂಸೇವಕ ಸಂಸ್ಥೆಯನ್ನೂ ಸೇರಲಾರನು; ಸಂಘಟಿಸಲಾರನು.

ಪ್ರಾಂತಿಕ ಸೇವಾದಲದ ಕಾರ್ಯವನ್ನು ಸಾಗಿಸುವದಕ್ಕಾಗಿ ಪ್ರಾಂತಿಕ ಸ್ವಯಂಸೇವಕ ಮಂಡಳವು ಕಾಂಗ್ರೆಸ ಕಾರ್ಯ ಸಮಿತಿಯ ನಿಯಮಗಳಿಗೆ ವಿರುದ್ಧವಾಗದಂಥ ನಿಯಮಗಳನ್ನು ರಚಿಸಿಕೊಳ್ಳಬಹುದು.

ಪ್ರಾಂತಿಕ ಸೇವಾದಲದ ಆವಶ್ಯಕ ವೆಚ್ಚಕ್ಕೆಂದು ಬೇಕಾಗುವ ನಿಧಿಯನ್ನು ಪ್ರಾಂತಿಕ ಸ್ವಯಂ ಸೇವಕ ಮಂಡಳವು ಪ್ರಾಂ. ಕಾಂ. ಸಮಿತಿಯ ಸಮ್ಮತಿಯಿಂದ ಕೂಡಿಸಬಲ್ಲದು.

ಗಾಂಧೀಯಾತ್ರೆ

ನಾನು ಸೋತರೂ—

ತಾ. ೨೦ ಕ್ಕೆ ತಿಪ್ಪೇರಾ ಜಿಲ್ಲೆಯ ಕಮಲಾಪುರದಲ್ಲಿ ಕಲಕತ್ತಾ ವಿಶ್ವವಿದ್ಯಾಲಯದ ಡಾ. ಅಮಿಯಾ ಚಕ್ರವರ್ತಿಯವರು ನೌಖಾಲಿ ತಿಪ್ಪೇರಾಗಳ ಮುಸ್ಲಿಂ ಬಹುಸಂಖ್ಯಾಕರು ಹಿಂದುಗಳನ್ನು ಬಹಿಷ್ಕರಿಸಿದ್ದಾರೆಂಬ ಸುದ್ದಿಯನ್ನು ಗಾಂಧೀಜಿಯೊಡನೆ ಚರ್ಚಿಸಿದರು. "ಧರ್ಮ, ಆಚಾರ, ವಸ್ತ್ರ ಮೊದಲಾದ ವೈಯಕ್ತಿಕ ಪ್ರಶ್ನೆಗಳಲ್ಲಿನ ಭಿನ್ನತೆಗಳನ್ನು ಕೂಡ ಜನರು ಸಹಿಸದೆ ಬಹಿಷ್ಕಾರವನ್ನೇ ಹಟದಿಂದ ಅವಲಂಬಿಸುವದಾದರೆ ತಮ್ಮ ಪ್ರತಿನಿಧಿಯಾದ ಸರಕಾರದ ಸಹಾಯವಿಲ್ಲದೆ ಅದು ಅವರಿಗೆ ಸಾಧ್ಯವಿಲ್ಲ"ವೆಂದು ಗಾಂಧೀಜಿ ಹೇಳಿದರು.

"ಇದರಲ್ಲಿ ನಾನು ಸೋತರೂ ಸತ್ಯಕ್ಕೆ ಸೋಲಾದಂತಾಗಲಿಲ್ಲ. ಈ ಸಮಸ್ಯೆಯನ್ನು ಬಿಡಿಸಲು ನಾನು ಹೆಣಗಬೇಕು. ಈ ಪ್ರಯತ್ನದಲ್ಲಿ ನಾನು ಉಳಿಯುವೆ ಇಲ್ಲವೆ ಅಳಿಯುವೆ. ನನ್ನ ಜೀವನದಲ್ಲಿ ಅತಿ ಕಠಿನ ಸಾಹಸಗಳಲ್ಲಿ ನನಗೆ ಯಶಸ್ಸು ದೊರತಿದೆ. ಈ ಬಾರಿ ಏನಾಗುವದೋ ನಾನರಿಯೆ." ಮುಂದುವರಿದು ಗಾಂಧೀಜಿ ಹೇಳಿದ್ದು, "ವಿಭಜನೆಯ ಪ್ರತಿಪಾದಕರು ತಮ್ಮ ನಿಲುಮೆಯೇನೆಂಬದನ್ನು ಅರಿತುಕೊಳ್ಳಬೇಕು. ಬಹಿಷ್ಕಾರವೇ ಸರಕಾರದ ಧೋರಣೆಯಾಗಿದ್ದರೆ ಜನರಿಗೆ ಹಾಗೆ ತಿಳಿಸಲಿ. ಒಂದು ಸಮಾಜ ನಾನಾ ನೀತಿಯ ಯಾವದೇ ಕ್ರಮ ಕೈಕೊಳ್ಳಲಾರದು. ಬಂಗಾಲವೂ ಇತರ ಪ್ರಾಂತಗಳೂ ಇದನ್ನು ಚೆನ್ನಾಗಿ ಅರಿತುಕೊಳ್ಳಲಿ."

ಅಂತರ್ಜಾತೀಯ ವಿವಾಹ

ತಾ. ೨೧ ಕ್ಕೆ ಕಮಲಾಪುರದಲ್ಲಿ ಪ್ರಾರ್ಥನಾ ಸಭೆಗೆ ಚಾಂದಪುರದ ಸುತ್ತಮುತ್ತಲ ಹಳ್ಳಿಗಳಿಂದ ಬಹಳ ಜನ ನೆರೆದಿದ್ದರು. ಬಿಸಲಲ್ಲಿ ನಿಲ್ಲಬೇಕಾಗಿ ಬಂದುದಕ್ಕೆ ಗಾಂಧೀಜಿ ಹಳ್ಳಿಗರಲ್ಲಿ ಸಹಾನುಭೂತಿ ತೋರಿಸಿದರು. "ಈ ಹಿಂದುಸ್ತಾನದ ಬಿಸಲಿಗೆ ನೀವಂಜಲಾರಿರೆಂದು ಹಾರೈಸುವೆ. ಅದು ದೇವರ ಅತ್ಯುದಾರ ದಾನವೆಂದು ಹೇಳಬಹುದು. ವರ್ಷದಲ್ಲಿ ಬಹಳಕಾಲ ನಿರ್ಮಲ ಆಕಾಶವಿರುವ ಹಿಂದುಸ್ತಾನವೇ ಭಾಗ್ಯಶಾಲಿ." ನಿರಾಶ್ರಿತರ ಶುಶ್ರೂಷೆಯಲ್ಲಿ ಚಾಂದಪುರ ವಹಿಸಿದ ಅಂಗಕ್ಕಾಗಿ ನೆರೆದವರನ್ನು ಅಭಿನಂದಿಸಿದರೂ ನೈರ್ಮಲ್ಯಕ್ಕೆ ಅವರು ಲಕ್ಷ್ಯಗೊಡದಿರುವದಕ್ಕೆ ಗಾಂಧೀಜಿ ವ್ಯಸನಪಟ್ಟರು.

ಆ ಮೇಲೆ ಗಾಂಧೀಜಿ ಮುಸ್ಲಿಂ ನೆರೆಹೊರೆಯವರ ಬಗ್ಗೆ ವೈಮನಸ್ಯವನ್ನಿಟ್ಟುಕೊಳ್ಳಬೇಡಿರೆಂದು ಹಿಂದುಗಳಿಗುಪದೇಶಿಸಿದರು. ಎರಡೂ ಜಂಗಡಗಳು ಪರಸ್ಪರ ಶಾಂತಿಯಿಂದಿರಬೇಕು. ಯಾವುದೊಂದು ಪಕ್ಷ ವೈಮನಸ್ಯರಹಿತವಾಗಿದ್ದರೆ ತಿಕ್ಕಾಟ ಅಳಿದುಹೋಗುವದು. ನಾವು ಬಯಸಿದಂತೆ ನಮ್ಮ ಬಾಳೆಂದು ಉಪನಿಷತ್ತಿನ ಉಜ್ವಲ ಮಂತ್ರವೊಂದು ಹೇಳುತ್ತದೆ. ಜೀವನದ ಎಲ್ಲ ರಂಗಗಳಲ್ಲಿಯೂ ಇದು ಅಕ್ಷರಶಃ ಸತ್ಯವಾಗಿದೆ.

ಆ ಮೇಲೆ ಅವರಿಗೆ ಎರಡು ಪ್ರಶ್ನೆಗಳು ಕೇಳಲ್ಪಟ್ಟವು.

ಪ್ರ:— ನೀವು ಅಂತರ್ಜಾತೀಯ ವಿವಾಹವನ್ನು ಪ್ರತಿಪಾದಿಸುತ್ತೀರಿ. ಅಂತರ್ಧರ್ಮೀಯ ವಿವಾಹಕ್ಕೂ ನಿಮ್ಮ ಅನುಜ್ಞೆಯಿದೆಯೆ? ಹಾಗಾದರೆ ಅವರು ಯಾವುದೇ ಧರ್ಮಕ್ಕೆ ಸೇರಿಲ್ಲವೆಂದು ಹೇಳಿಕೊಳ್ಳಬೇಕೆ ಅಥವಾ ತಮ್ಮ ಹಳೆಯ ಧರ್ಮಾಚಾರದಲ್ಲಿಯೆ ಇದ್ದು ಅಂತರ್ಧರ್ಮೀಯ ವಿವಾಹಮಾಡಿಕೊಳ್ಳಬಹುದೆ? ಹಾಗಿದ್ದರೆ ವಿವಾಹ ಸಂಸ್ಕಾರ ಯಾವ ರೂಪದಲ್ಲಿರಬೇಕು, ಕೇವಲ ನಾಗರಿಕ ಸಮಾರಂಭವಿರಬೇಕೆ ಇಲ್ಲ, ಧಾರ್ಮಿಕವಿರಬೇಕೆ?

ಧರ್ಮವೆಂಬುದು ಕೇವಲ ವೈಯಕ್ತಿಕ ವಿಷಯವೆಂದು ನಿಮ್ಮ ಭಾವನೆಯೆ?

ಉ:— ಹಿಂದೆ ನನಗೆ ಹಾಗೆ ಅಭಿಪ್ರಾಯವಿದ್ದಿಲ್ಲವಾದರೂ ಅಂತರ್ಧರ್ಮೀಯ ವಿವಾಹ ಸ್ವಾಗತಾರ್ಹ ವಿಷಯವೆಂಬ ತೀರ್ಮಾನಕ್ಕೆ ನಾನು ಬಂದು ಬಹಳಕಾಲವಾಯಿತು. ಆದರೆ ಅಂಥ ಸಂಬಂಧ ಕಾಮುಜನ್ಯವಾಗಿರಬಾರದು. ಹಾಗಿದ್ದರೆ ಅದು ವಿವಾಹವೇ ಅಲ್ಲ, ಬರಿ ಅಕ್ರಮ ಸಂಬಂಧ. ನನ್ನ ದೃಷ್ಟಿಯಲ್ಲಿ ವಿವಾಹವೊಂದು ಧಾರ್ಮಿಕ ಸಂಸ್ಥೆ. ಆದುದರಿಂದ ಪರಸ್ಪರ ಸ್ನೇಹವೂ ಉಭಯತರ ಧರ್ಮದಲ್ಲಿ ಪರಸ್ಪರ ಗೌರವವೂ ಇರತಕ್ಕದ್ದು. ಇದರಲ್ಲಿ ಧರ್ಮಾಂತರದ ಪ್ರಶ್ನೆಯೆ ಇಲ್ಲ. ಆದುದರಿಂದ ಉಭಯ ಧರ್ಮಗಳ ಪುರೋಹಿತರು ಸೇರಿ ಈ ಸಂಸ್ಕಾರವನ್ನು ಮಾಡಿಸಬೇಕು.

ಇನ್ನೊಂದು ಪ್ರಶ್ನೆ ಧಾರ್ಮಿಕ ಶಿಕ್ಷಣ ಸಂಬಂಧಿಯಾಗಿತ್ತು. ರಾಜ ಧರ್ಮವೆಂಬುದಿರಬಾರದೆಂದು ಗಾಂಧೀಜಿ ಉತ್ತರವಿತ್ತರು. ಧರ್ಮವೆಂಬುದು ವೈಯಕ್ತಿಕ ವಿಷಯ. ಸರಕಾರ ಇದರಲ್ಲಿ ಕೈಹಾಕುವದು ಅನುಚಿತ. ತಲೆಗಳಿದ್ದಷ್ಟೆ ಧರ್ಮಗಳಿವೆ. ದೇವರ ಬಗ್ಗೆ ಒಬ್ಬೊಬ್ಬರ ಕಲ್ಪನೆ ಒಂದೊಂದು. ಧಾರ್ಮಿಕ ಸಂಸ್ಥೆಗಳಿಗೆ ಸರಕಾರದ ಸಹಾಯಧನ ಕೊಡುವದನ್ನು ಕೂಡ ಗಾಂಧೀಜಿ ವಿರೋಧಿಸಿದರು.

ಪೈಗಂಬರರ ವಚನಗಳು

ತಾ. ೨೨ ಕ್ಕೆ ಚಾರಕೃಷ್ಣಪುರದಲ್ಲಿ ಪ್ರಾರ್ಥನೋತ್ತರ ಭಾಷಣದ ಪ್ರಾರಂಭಕ್ಕೆ ಬಲುಚಿಸ್ತಾನದ ಗೆಳೆಯರೊಬ್ಬರು ಪೈಗಂಬರರ ಮತ್ತು ಇತರ ಧರ್ಮಗುರುಗಳ ವಚನಗಳ ಹಸ್ತಪತ್ರಿಕೆಯನ್ನು ತಮಗೆ ಕಳಿಸಿದ್ದಾರೆಂದು ಗಾಂಧೀಜಿ ಹೇಳಿ ಅವುಗಳಲ್ಲಿ ಮಹಮ್ಮದರ ಕೆಳಗಿನ ವಚನವನ್ನು ಓದಿದರು.

"ದೇವರು ಭೂಮಿಯನ್ನು ಸೃಜಿಸಿದಾಗ ಅದು ಅತ್ತಿತ್ತ ಓಲಾಡಹತ್ತಿತು. ಅದನ್ನು ಅಚಲವಾಗಿರಿಸಲು ಅವನು ಪರ್ವತಗಳನ್ನು ಹೇರಿದನು. ಆಗ ದೇವತೆಗಳು ಕೇಳಿದರು, ಓ ಪರಮಾತ್ಮಾ, ನಿನ್ನ ಸೃಷ್ಟಿಯಲ್ಲಿ ಈ ಪರ್ವತಗಳಿಗಿಂತ ಬಲಿಷ್ಠವಾದುದೇನಾದರೂ ಇದೆಯೆ? ಆಗ ದೇವರು ಉತ್ತರವಿತ್ತನು, ಈ ಪರ್ವತಗಳಿಂದ ಕಬ್ಬಿಣ ಬಲಿಷ್ಠ. ಏಕೆಂದರೆ ಅದು ಇವುಗಳನ್ನು ಒಡೆಯುತ್ತದೆ.

ಹಾಗಾದರೆ ನಿನ್ನ ಸೃಷ್ಟಿಯಲ್ಲಿ ಕಬ್ಬಿಣಕ್ಕಿಂತ ಬಲಿಷ್ಠವಾದುದೇನಾದರೂ ಉಂಟೆ?

ಹೌದು, ಕಬ್ಬಿಣಕ್ಕಿಂತ ಬೆಂಕಿ ಬಲಿಷ್ಠ, ಅದನ್ನು ಇದು ಕರಗಿಸುತ್ತದೆ.

ಬೆಂಕಿಗಿಂತ ಬಲಿಷ್ಠವಾದುದೇನಾದರೂ ಉಂಟೆ?

ಹೌದು, ನೀರಿದೆ. ಅದು ಬೆಂಕಿಯನ್ನು ಆರಿಸುತ್ತದೆ.

ನೀರಿಗಿಂತ ಬಲಿಷ್ಠವಾದುದೇನಾದರೂ ಉಂಟೆ?

ಹೌದು, ಗಾಳಿಯಿದೆ. ಅದು ನೀರನ್ನು ಚಲಿಸುವಂತೆ ಮಾಡುತ್ತದೆ.

ಹೇ ನಮ್ಮ ಸಂರಕ್ಷಕಾ, ಗಾಳಿಗಿಂತ ಬಲಿಷ್ಠವಾದುದೇನಾದರೂ ಉಂಟೆ?

ಹೌದು, ಭಿಕ್ಷೆನೀಡುವ ಧರ್ಮಾತ್ಮನಿರುವ. ಬಲಗೈಯಿಂದ ಭಿಕ್ಷೆ ನೀಡಿ ಅದನ್ನು ಎಡಗೈಗೆ ತಿಳಿಸದಿದ್ದರೆ ಅವನು ಎಲ್ಲವನ್ನೂ ಗೆಲ್ಲುವ. ಸತ್ಕರ್ಮಗಳೆಲ್ಲವೂ ಧರ್ಮ. ನಿಮ್ಮ ಗೆಳೆಯನನ್ನು ಕಂಡಾಗ ನಸುನಕ್ಕರೆ, ದಾರಿಗನೊಬ್ಬನಿಗೆ ಸರಿದಾರಿ ತೋರಿಸಿದರೆ, ನೀರಡಿಸಿದವನಿಗೆ ನೀರು ಕೊಟ್ಟರೆ ಅದು ಧರ್ಮ ಕೊಟ್ಟಂತೆಯೆ. ಮನುಷ್ಯನ ನಿಜವಾದ ಐಶ್ವರ್ಯವೆಂದರೆ ಪರೋಪಕಾರ ಮನುಷ್ಯ ಸತ್ತಾಗ ಜನರು ಕೇಳುತ್ತಾರೆ, ಏನು ಸೊತ್ತು ಬಿಟ್ಟು ಹೋಗಿದ್ದಾನೆಂದು. ಆದರೆ ದೇವತೆಗಳು ಕೇಳುವರು, ಏನು ಸತ್ಕರ್ಮ ಮಾಡಿದ್ದಾನೆಂದು.

ಅಸ್ಪೃಶ್ಯತೆ ಅಳಿಯಬೇಕು

ಅನಂತರ ಕೆಲ ಪ್ರಶ್ನೆಗಳಿಗೆ ಗಾಂಧೀಜಿ ಉತ್ತರವಿತ್ತರು.

ಪ್ರ— ಮಂದಿರ ಪ್ರವೇಶದ ಒತ್ತಾಯವೇಕೆ? ಅಡ್ಡಿ ಬಂದರೆ ಅದರಲ್ಲಿ ಸತ್ಯಾಗ್ರಹಕ್ಕೆ ಅವಕಾಶವಿದೆಯೆಂದು ನಮಗೆ ಗೊತ್ತಿದೆ. ಅಂತರ್ಜಾತೀಯ ಭೋಜನ ಸಮಾರಂಭಗಳ ಪ್ರಯೋಜನವೂ ಅಷ್ಟಕ್ಕಷ್ಟೆ. ಅದರಲ್ಲಿ ಭಾಗವಹಿಸುವವರು ತಮ್ಮ ಮನೆಯಲ್ಲಿಯಾಗಲಿ ಸಾಮಾಜಿಕ ಸಮಾರಂಭಗಳಲ್ಲಾಗಲಿ ಅಸ್ಪೃಶ್ಯತೆಯನ್ನು ಬಿಟ್ಟಿರುವದಿಲ್ಲ. ಇಂಥ ಭೋಜನ ಕೂಟಗಳು ಜಾತಿನಿಯಮಗಳಿಂದ ತಾತ್ಕಾಲಿಕವಾಗಿ ಮುಕ್ತವಾದ ವಿಶೇಷ ಸಮಾರಂಭಗಳೆಂದು ಅವರು ಬಗೆಯುತ್ತಾರೆ. ಜಗನ್ನಾಥ ದೇವಸ್ಥಾನದಲ್ಲಿ ಪ್ರಸಾದಾನ್ನವನ್ನು ಜಾತಿ ನೀತಿಗಳನ್ನೆಣಿಸದೆ ಸ್ವೀಕರಿಸುವಂತೆ. ಅಸ್ಪೃಶ್ಯತಾ ವಿರೋಧ ನಮ್ಮ ಜನರ ಸಾಮಾಜಿಕ ಜೀವನದಲ್ಲಿ ಆಳವಾಗಿ ಬೇರೂರಿಲ್ಲ. ಮಂದಿರ ಪ್ರವೇಶದಲ್ಲಿಯೂ ಒಂದು ಪ್ರಶ್ನೆಯುಂಟು. ಸ್ವತಂತ್ರ ಹಿಂದುಸ್ತಾನದಲ್ಲಿ ಸಾರ್ವಜನಿಕ ಸೇವೆಯಲ್ಲಿರುವ ಪೂಜಾರಿ ಪುರೋಹಿತರನ್ನು, ಹಿಂದಿನ ಜಾತಿಯನ್ನು ಎಣಿಸದೆ ಕೇವಲ ಯೋಗ್ಯತಾ ದೃಷ್ಟಿಯಿಂದ, ಆರಿಸಲಾಗುವದೆಂದು ನಿಮ್ಮೆಣಿಕೆಯೆ?

ಉ— ನಾಮಶೂದ್ರರು ಬಹಳ ಜನರಿರುವ ಬಂಗಾಲದ ಈ ಭಾಗದಲ್ಲಿ ಇದು ಪ್ರಸಂಗೋಚಿತ ಪ್ರಶ್ನೆಯೆ ಸರಿ. ಎಲ್ಲರೂ ನನ್ನಂತೆ ಜಾತೀಯ ನಿಚ್ಚಣಿಕೆಯಲ್ಲಿ ವಿಶ್ವಾಸವನ್ನು ಕಳೆದೊಗೆದು ಆ ನಿಚ್ಚಣಿಕೆಯ ಅತಿ ಕೆಳಗಿನ ಮೆಟ್ಟಲಲ್ಲಿ ಬಂದು ನಿಲ್ಲಬೇಕೆಂದು ಆಮಂತ್ರಿಸುವೆ. ಹಾಗಾದರೆ ಇಂಥ ಪ್ರಶ್ನೆಗಳಿಗೆ ಅವಕಾಶವೇ ಉಳಿಯುವದಿಲ್ಲ. ಅದು ಸಾಧಿಸುವ ವರೆಗೆ ನಾನು ಈ ಸಮಸ್ಯೆಯನ್ನು ಎದುರಿಸಲೇ ಬೇಕು. ಜಾತಿ ಮೂಲವಾದ ಅಪಾತ್ರತೆಗಳನ್ನೆಲ್ಲ ರದ್ದುಗೊಳಿಸಿದಾಗಲೇ ಅಸ್ಪೃಶ್ಯತೆಯು ನಾಶವಾಗುವದೆಂದು ನಾನೊಪ್ಪುವೆ. ಅದರೂ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮದಲ್ಲಿ ಮಂದಿರ ಪ್ರವೇಶಕ್ಕೆ ಪ್ರಥಮ ಸ್ಥಾನವಿದೆಯೆಂದು ನನ್ನ ದೃಢವಾದ ನಂಬಿಕೆ. ಅಸ್ಪೃಶ್ಯತಾರಾಕ್ಷಸನ ಸಂಹಾರವಾಗಬೇಕಾದರೆ ಸಾರ್ವಜನಿಕ ಭೋಜನಗಳು ಮೊದಲು ನಡೆಯಬೇಕು. ಬ್ರಿಟಿಶ ಆಳಿಕೆ ಅಳಿಯದಿದ್ದರೆ ಬ್ರಿಟಿಶ ಜಾತಿಯ ಹೆಸರಿಲ್ಲದಾಗುವಂತೆ ಅಸ್ಪೃಶ್ಯತೆ ಅಳಿಯದೆ ಹೋದರೆ ಹಿಂದೂ ಧರ್ಮ ನಾಶ ಹೊಂದುವದೆಂದು ನಾನು ಭವಿಷ್ಯ ಹೇಳುವೆ.

ಇನ್ನೊಂದು ಪ್ರಶ್ನೆ ಆರ್ಥಿಕ ಸಮಾನತೆಯ ವಿಷಯಕ್ಕಿತ್ತು. ಸಮಾಜಕ್ಕೆ ಉಪಯುಕ್ತ ಸೇವೆ ಮಾಡುವವರಿಗೆಲ್ಲರಿಗೂ ಅವರು ಭಂಗಿಗಳಿರಲಿ, ಡಾಕ್ಟರ, ಎಂಜಿನಿಯರ, ಅಧ್ಯಾಪಕ, ಲೆಕ್ಕಿಗರಿರಲಿ, ಸಮಾನವಾದ ಸಂಬಳ ಸಿಗಬೇಕೆಂದು ನಿಮ್ಮ ಹೇಳಿಕೆಯೆ? ಹೀಗಾದರೆ ಎಂದಾದರೊಂದು ದಿನ ಅಸ್ಪೃಶ್ಯತೆ ನಾಶವಾಗುವದೆಂದು ನಿಮಗನಿಸುವದಿಲ್ಲವೇ? ಉತ್ತರ ಕೊಡುತ್ತ ಗಾಂಧೀಜಿ ಭಂಗಿ,ಡಾಕ್ಟರ,ಅಧ್ಯಾಪಕ,ವ್ಯಾಪಾರಿಗಳೆಲ್ಲರಿಗೂ ಸಮಾನ ಪ್ರತಿಫಲ ದೊರೆತರೇ ಹಿಂದುಸ್ತಾನ ಜಗತ್ತೆಲ್ಲ ಅಸೂಯೆಪಡುವಂಥ ಸ್ವಾತಂತ್ರ್ಯವನ್ನು ಅನುಭೋಗಿಸಬಲ್ಲದೆಂದರು. ಆ ಧ್ಯೇಯವನ್ನು ಪೂರ್ತಿ ಸಾಧಿಸುವದು ಅಸಾಧ್ಯವಾದರೂ ಆ ದಿಶೆಯಲ್ಲಿ ಪ್ರಯತ್ನ ಮಾಡುವದು ಕರ್ತವ್ಯ.

ನಾಮಶೂದ್ರರ ಪ್ರಶ್ನೆ

ತಾ. ೨೩ ಕ್ಕೆ ಚಾರಶೋಲದಿಯಲ್ಲಿ ಗಾಂಧೀಜಿಗೆ ನಾಮಶೂದ್ರರ ಕೆಲ ಸಾಮಾಜಿಕ ಸಮಸ್ಯೆಗಳ ಬಗ್ಗೆ ಕೇಳಲಾಯಿತು. ನಾಮಶೂದ್ರ ಹುಡುಗಿಯರಿಗೆ ೧೨–೧೩ ವರ್ಷಕ್ಕೆ ಮದುವೆಯಾಗುವದು. ವರನು ೧೫೦ ರೂಪಾಯಿ ಕನ್ಯಾಶುಲ್ಕ ಕೊಡಬೇಕಾಗುವದು. ವಧೂವರರ ವಯಸ್ಸುಗಳಲ್ಲಿ ೧೨–೧೫ ವರ್ಷಗಳಷ್ಟು ಅಂತರವಿರುತ್ತದೆ. ಆದರಿಂದ ನಾಮಶೂದ್ರ ಸಮಾಜದಲ್ಲಿ ವಿಧವೆಯರ ಸಂಖ್ಯೆ ಬಹಳ ದೊಡ್ಡದಿದೆ. ಅವರಲ್ಲೊಂದು ಪಂಗಡದಲ್ಲಿ ವಿಧವಾ ವಿವಾಹ ಪ್ರಚಲಿತವಾಗಿದ್ದರೂ ಮೇಲ್ಜಾತಿಯೆನಿಸಿಕೊಳ್ಳುವ ಇನ್ನೊಂದು ಪಂಗಡದವರನ್ನು ಅನುಕರಿಸಿ ಇವರೂ ಆ ಪದ್ಧತಿಯನ್ನು ಬಿಟ್ಟುಕೊಡುತಿದ್ದಾರೆ. ಬಾಲ್ಯ ವಿವಾಹ ಮತ್ತು ವಿಧವಾವಿವಾಹದ ಬಗ್ಗೆ ನಿಮ್ಮ ಸಲಹೆಯೇನು?

ಗಾಂಧೀಜಿ ತಮ್ಮ ಉತ್ತರದಲ್ಲಿ ಬಾಲ್ಯ ವಿವಾಹವನ್ನೆ ಖಂಡಿಸಿದರು. ಬಾಲ್ಯ ವಿವಾಹವೆ ಇಲ್ಲದಿದ್ದರೆ ಬಾಲ ವಿಧವೆಯರ ಪ್ರಶ್ನೆಯೆ ಉಳಿಯುವದಿಲ್ಲ. ಈ ದುಷ್ಟ ಪದ್ಧತಿಯನ್ನು ನಾಮಶೂದ್ರರು ಮೇಲ್ಜಾತಿಯವರೆನಿಸಿಕೊಳ್ಳುವವರಿಂದ ಕಲಿತಿರಬೇಕು. ಕನ್ಯಾಶುಲ್ಕಕ್ಕೂ ಗಾಂಧೀಜಿ ವಿರೋಧ ವ್ಯಕ್ತಗೊಳಿಸಿದರು. ಅದು ಹುಡುಗಿಯರ ಮಾರಾಟವಲ್ಲದೆ ಬೇರೇನಲ್ಲ. ಇನ್ನು ನಾಮಶೂದ್ರರಲ್ಲಿ ಜಾತಿಭೇದಗಳಿರುವದು ವಿಷಾದಕರ. ಅವರು ಅದನ್ನು ನಿರ್ನಾಮಗೊಳಿಸಬೇಕು. ಒಟ್ಟಿನ ಮೇಲೆ ಜಾತಿಭೇದಗಳೆ ಅಳಿದು ಭಂಗಿಗಳೆಂಬ ಒಂದೇ ಜಾತಿಯಿರಬೇಕು ಮತ್ತು ಹಿಂದುಗಳೆಲ್ಲ ಭಂಗಿಗಳೆ ಎನಿಸಿಕೊಳ್ಳಲು ಅಭಿಮಾನ ಪಡಬೇಕೆಂದು ಅವರು ಅಭಿಪ್ರಾಯಪಟ್ಟರು.

ಬಾಲ್ಯವಿವಾಹವನ್ನು ರದ್ದುಗೊಳಿಸಿದ ಮೇಲೆ ಬಾಲವಿಧವೆಯರ ಸಂಖ್ಯೆ ಇದ್ದರೂ ಬಹಳ ಕಡಿಮೆಯಿರುವದು. ಸಾಮಾನ್ಯವಾಗಿ ಒಬ್ಬ ಗಂಡಸಿಗೆ ಜೀವಮಾನಕ್ಕೆಲ್ಲ ಒಬ್ಬಳು ಹೆಂಡತಿ ಮತ್ತು ಒಬ್ಬಳು ಹೆಂಗಸಿಗೆ ಆಜೀವ ಒಬ್ಬನೇ ಗಂಡ ಇರಬೇಕೆಂದು ಗಾಂಧಿಜಿಯ ಅಭಿಪ್ರಾಯ. ಆದರೆ ರೂಢಿಯಲ್ಲಿ ಹೆಂಗಸಿಗೆ ಒತ್ತಾಯದ ವೈಧವ್ಯ, ಗಂಡಸಿಗೆ ತದ್ವಿರುದ್ಧ ಸೌಕರ್ಯವಿರುವದು ನಾಚಿಗೇಡು. ಸಮಾಜದ ಸದ್ಯದ ಕರುಣ ಪರಿಸ್ಥಿತಿಯಲ್ಲಿ ಎಳೆವಯಸ್ಸಿನ ವಿಧವೆಯರ ವಿವಾಹಕ್ಕೆ ಗಾಂಧೀಜಿ ಅನುಕೂಲಾಭಿಪ್ರಾಯವುಳ್ಳವರಾಗಿದ್ದಾರೆ.

ಪ್ರಶ್ನೆ — ನೀವು ಅಂತರ್ಧರ್ಮೀಯ ವಿವಾಹಗಳನ್ನು ಸಮರ್ಥಿಸುತ್ತೀರಿ ಮತ್ತು ಸಂಗಡಲೇ ಎರಡೂ ಪಕ್ಷಗಳು ಸ್ವಧರ್ಮವನ್ನುಳಿಸಿ ಕೊಳ್ಳಬೇಕೆನ್ನುವಿರಿ. ಅದಕ್ಕಾಗಿ ನಾಗರಿಕ ವಿವಾಹಗಳನ್ನು ನೀವು ಒಪ್ಪಿಕೊಳ್ಳಲು ಸಿದ್ಧರಿದ್ದೀರಿ. ಬೇರೆ ಬೇರೆ ಧರ್ಮಗಳಿಗೆ ಸೇರಿದ ಎರಡೂ ಪಕ್ಷಗಳು ಆಮರಣ ತಮ್ಮ ಧರ್ಮಗಳನ್ನು ಕಾಯ್ದುಕೊಂಡ ಉದಾಹರಣೆಗಳಿವೆಯೆ? ನಾಗರಿಕ ವಿವಾಹವೆಂದರೆ ಧರ್ಮಲಂಡತನವಲ್ಲವೆ? ಅದು ಧರ್ಮಾಚರಣೆಯನ್ನು ಸಡಿಲಿಸುವದಿಲ್ಲವೇ?

ಉತ್ತರ:— ಪ್ರಶ್ನೆಯೇನೊ ಉಚಿತವಾದುದು. ಎರಡೂ ಪಕ್ಷಗಳು ಆಮರಣ ತಮ್ಮ ಧರ್ಮಗಳಿಗೆ ಅಂಟಿಕೊಂಡ ಉದಾಹರಣೆ ನನ್ನಲ್ಲಿಲ್ಲ. ಏಕೆಂದರೆ ನನ್ನ ಪರಿಚಯದ ಇಂಥ ಗೆಳೆಯರು ಇನ್ನೂ ಸತ್ತಿಲ್ಲ. ಅದರೂ ಸ್ವಧರ್ಮಕ್ಕೆ ಅಂಟಿಕೊಂಡಿರುವ ಸ್ತ್ರೀಪುರುಷರು ನನ್ನ ದೃಷ್ಟಿಯಲ್ಲಿದ್ದಾರೆ. ಆದರೆ ಹಿಂದಿನ ಉದಾಹರಣೆಗಳನ್ನೇ ಏಕೆ ನಾವು ತೆಗೆದುಕೊಳ್ಳಬೇಕು. ಅಳ್ಳೆದೆಯವರ ಭಯವನ್ನು ಹರಿಯಲು ನಾವ್ರೆ ಹೊಸ ಉದಾಹರಣೆಗಳನ್ನೇಕೆ ಸ್ಥಾಪಿಸಬಾರದು?

ನಾಗರಿಕ ವಿವಾಹದಲ್ಲಿ ನನಗೆ ವಿಶ್ವಾಸವಿಲ್ಲದಿದ್ದರೂ ಸುಧಾರಣೆಯ ಸಲುವಾಗಿ ಅದನ್ನು ಸ್ವಾಗತಿಸಲು ನಾನು ಸಿದ್ಧನಿದ್ದೇನೆ.

ಕೊನೆಯ ದಿನ

ತಾ. ೨೪ಕ್ಕೆ ತಮ್ಮ ತೀರ್ಥಯಾತ್ರೆಯ ಎರಡನೆ ಪರ್ಯಾಯದ ಕೊನೆಯವಾದುದರಿಂದ ಗಾಂಧೀಜಿ ಅದರ ಮಂಗಲಾಂತ್ಯಕ್ಕಾಗಿ ದೇವರನ್ನು ಕೊಂಡಾಡಿದರು. ಹರಿಜನರ ಪುರೋಹಿತರೂ ಸೇವಕರೂ ಎನಿಸಿದ ಬಾಪಾ ಅವರ ಒತ್ತಾಯಕ್ಕಾಗಿ ಹೈಮಚಾರವನ್ನು ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಲಾಯಿತೆಂದು ತಿಳಿಸಿದರು. ಬಾಪಾ ಅವರು ತಮ್ಮ ಸೇವೆಗಾಗಿ ಹೈಮಚಾರ ಭಾಗವನ್ನು ಆರಿಸಿಕೊಂಡಿದ್ದರು.

ಅನಂತರ ಅಟ್ಲಿಯವರ ಹೇಳಿಕೆಯನ್ನು ಕುರಿತು ಅಭಿಪ್ರಾಯ ಕೇಳುವ ತಂತಿ ಮತ್ತು ಇತರ ಪತ್ರಗಳು ತಮಗೆ ಬರುತಿರುವದನ್ನು ಎತ್ತಿಕೊಂಡು, ಗಾಂಧೀಜಿ ಹೇಳಿದ್ದು: ಅಧಿಕೃತ ಅಭಿಪ್ರಾಯಗಳನ್ನು ಕೊಡಲು ಕಾಂಗ್ರೆಸ್ಸು, ಲೀಗು ಮತ್ತು ಇತರ ಸಂಸ್ಥೆಗಳಿವೆ. ಆದರೆ ಈ ಹೇಳಿಕೆಯಿಂದ ವಿವಿಧ ಪಕ್ಷಗಳ ಮೇಲೆ ತಮಗೆ ಸರಿ ತೋರಿದ್ದನ್ನು ಮಾಡುವ ಹೊಣೆ ಬಿದ್ದಂತಾಗಿದೆಯೆಂದು ಮಾತ್ರ ನಾನು ಹೇಳಬಲ್ಲೆ. ಜೂನ ೧೯೪೮ರಲ್ಲಿ ಬ್ರಿಟಿಶ ಆಳಿಕೆ ಕೊನೆಗೊಳ್ಳುವದೆಂದು ಅದು ಸಾರಿದೆ. ಭವಿಷ್ಯತ್ತನ್ನು ಮಾಡುವ[ದು] ಮುರಿಯುವದು ಹಿಂದೀ ಪಕ್ಷಗಳ ಕೈಲಿದೆ. ನಮ್ಮ ಒಮ್ಮತದ ಇಚ್ಛೆಯನ್ನು ತಲೆಕೆಳಗು ಮಾಡುವ ಶಕ್ತಿ ಪ್ರಪಂಚದಲ್ಲಿಲ್ಲ. ನನ್ನ ಮಟ್ಟಿಗೆ ಹೇಳಬೇಕಾದರೆ, ಹಿಂದುಗಳೂ ಮುಸ್ಲಿಮರೂ ತಮ್ಮ ವೈಷಮ್ಯಗಳನ್ನು ಬದಿಗೊತ್ತಿ ಹೊರಗಿನ ಒತ್ತಾಯವಿಲ್ಲದೆ ಒಂದಾದರೆ, ಆಗ ಅವರು ಹಿಂದುಸ್ತಾನದ ಮೇಲೆ ಮಾತ್ರವಲ್ಲ, ಬಹುಶ ಇಡಿ ಜಗತ್ತಿನ ಮೇಲೆ ಪ್ರಭಾವ ಬೀರಬಲ್ಲರು.

೧೦ನೇ ಪುಟಕ್ಕೆ

ಕತ್ತಿಯಿಂದ ನೇಗಿಲದತ್ತ

ದಶಕಾನುದಶಕಗಳಿಂದ ಕಾಂಗ್ರೆಸ್ಸೊಂದೇ ಹೋರಾಡುವ ಸಂಸ್ಥೆಯಾಗಿದೆ. ಎಲ್ಲ ಬಗೆಯಿಂದ ಬ್ರಿಟಿಶ ಸಾಮ್ರಾಜ್ಯದಲ್ಲಿ ಆಳಿಗಳನ್ನೆಲ್ಲಾ ಧಿಕ್ಕರಿಸಿ ಕಿತ್ತೊಗೆದು ಜನತೆಗೆ ಸಹಾಯಕವಾದ ರಾಜ್ಯವನ್ನು ಪ್ರಸ್ಥಾಪಿಸುವದೆ ಅದರ ಒಂದೇ ಒಂದಾದ ಉದ್ದೇಶವಾಗಿದೆ. ಬಳಕೆಯ ವಸ್ತುಗಳನ್ನು ಸ್ವಾಧಿಸಲು ಇಲ್ಲವೆ ಹೊಲಗಳನ್ನಾಳಲು ಸೈನ್ಯಕ್ಕೆ ಆವಶ್ಯಕ ಸಮಯ ಇಲ್ಲವೆ ವಿಚಾರವಿರುವದಿಲ್ಲ ಆದರೆ ಅದು ತನ್ನ ಉದ್ದೇಶವನ್ನು ಸಫಲಮಾಡಿಕೊಂಡಬಳಿಕ ಮತ್ತೆ ನಾಗರಿಕ ಜೀವನಕ್ಕಿಳಿಯಬೇಕಾಗುವದು. ಇಲ್ಲದಿದ್ದರೆ ದೇಶದ ಸಂರಕ್ಷಣೆಗಾಗಿ ಇದ್ದ ಸೈನವು ಕಳ್ಳಕಾಕರ ಗುಂಪಾಗಿ ಪರಿಣಮಿಸುವುದು. ಈ ಬಗೆಯ ಪರಿವರ್ತನೆ ಯಾವ ಕಾಲಕ್ಕಾಗುವದೆಂಬುದನ್ನು ಹೇಳುವದು ಕಠಿಣ. ಅನೇಕ ಸಲ ಯುದ್ಧಕಾಲೀನ ಮುಖಂಡರು ಅಧಿಕಾರಮತ್ತರಾಗಿ ಕೃತಜ್ಞ ನಾಗರಿಕರ ಸದ್ಭಾವನೆಗಳ ಸಹಾಯದಿಂದ ತಮ್ಮ ಕಾರ್ಯವನ್ನು ನಿರ್ವಹಿಸಿಕೊಂಡು ಹೋಗಬಲ್ಲರು ಆದರೆ ಆ ದೇಶಬಾಂಧವರು ಸ್ವಾರ್ಥಸಾಧಕ ಪರಪುಷ್ಟ ಜೀವಿಗಳಾಗುವವರೆಗೆ ಮಾತ್ರ ಇದು ಸಾಧ್ಯವಾಗಬಲ್ಲದು.

ರಾಷ್ಟ್ರೀಯ ಧುರೀಣರನ್ನೊಳಗೊಂಡ ನಡುಗಾಲ ಸರ್ಕಾರ ಇದೀಗ ಕೇಂದ್ರದಲ್ಲಿ ಸ್ಥಾಪಿತವಾಗಿದೆ. ಕಾಂಗ್ರೆಸ್ಸನ್ನು ಶಾಂತಿಪ್ರಸ್ಥಾಪನೆಯ ಕಾರ್ಯವನ್ನು ಮಾಡಬಲ್ಲ ಸಂಸ್ಥೆಯನ್ನಾಗಿ ಮಾರ್ಪಡಿಸುವಲ್ಲಿ ನಮ್ಮ ರಾಷ್ಟ್ರಪತಿಗಳು ಕೂಡಲೆ ತಮ್ಮ ಲಕ್ಷ್ಯವನ್ನು ಪೂರೈಸುತ್ತಿದ್ದುದಕ್ಕಾಗಿ ಅಭಿವಂದನಾರ್ಹರಾಗಿರುವರು. ಆದರೆ ಈ ಬದಲಾವಣೆಯು ಕಣ್ಣಿಗೆ ಕಾಣುವಷ್ಟು ಸುಲಭವಾದ ಸಂಗತಿಯಲ್ಲ. ಧುರೀಣರ ಮತ್ತು ಕಾರ್ಯಕರ್ತರ ಇಡೀ ಜೀವನವನ್ನೇ ಇದಕ್ಕಾಗಿ ಬೇರೆ ದಿಶೆಯಲ್ಲಿ ಪರಿವರ್ತಿಸಬೇಕಾಗುವದು. ಈ ವರೆಗೆ ಕಾಂಗ್ರೆಸ್ಸು ಶಾಂತಿ ಕಾಲದ ಇಂಥ ಉದ್ಯೋಗಗಳನ್ನೆಲ್ಲ ವಿಶಿಷ್ಟ ಸಂಸ್ಥೆಗಳಿಗೆ ಒಪ್ಪಿಸಿಕೊಟ್ಟಿದ್ದಿತು. ಆ ಸಂಸ್ಥೆಗಳು ಹೋರಾಟದ ಕಾರ್ಯದಲ್ಲಿ ಯಾವದೇ ಬಗೆಯ ಭಾಗವಹಿಸದೆ ಯಾವಗೊಂದಲದಲ್ಲಿಯೂ ಬೀಳದೆ ತಮ್ಮ ಕಾರ್ಯವನ್ನು ಸಾಗಿಸಿಕೊಂಡು ಹೋಗುತ್ತಿದ್ದವು. ಅದರೀಗ ರಾಷ್ಟ್ರಪತಿಗಳು ಪ್ರಾಂತಿಕ ಧುರೀಣರ ಸಭೆಯನ್ನು ಕರೆದಿದ್ದರು. ಇಡೀ ಕಾಂಗ್ರೆಸ ಸಂಸ್ಥೆಯನ್ನು ವಿಧಾಯಕ ಸಂಸ್ಥೆಯನ್ನಾಗಿ ಮಾರ್ಪಡಿಸಲು ಏನು ಮಾಡಬೇಕೆಂಬ ಬಗ್ಗೆ ವಿಚಾರವಿನಿಮಯ ಮಾಡಿ ಅವರ ಸಲಹೆಯನ್ನು ಕೋರಿದೆ. ಯಾವಾಗ ಕಾಂಗ್ರೆಸ್ಸು ಜನಸಾಮಾನ್ಯರಿಗೆಲ್ಲ ಅನ್ನ ಬಟ್ಟೆ ಆಶ್ರಯದ ಅನುಕೂಲತೆಯನ್ನು ಮಾಡಿಕೊಡುವ ಹೊಣೆಯನ್ನು ತನ್ನ ಕಡೆಗೆ ಹೊತ್ತುಕೊಳ್ಳುವದೊ ಆಗ ಅದು ಜನರನ್ನು ದಾಸ್ಯದಿಂದ ಮುಕ್ತಮಾಡಿ ಆರ್ಥಿಕ ಸ್ವರಾಜ್ಯದತ್ತ ಒಯ್ಯುವ ಕಾರ್ಯ ಮಾಡಿದಂತಾಗುವದು.

ಬಹುಸಂಖ್ಯಾಕ ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಗಳು ಅಧಿಕಾರ ಸಾಗಿಸುತ್ತಿರುವರು. ಈ ಮಂತ್ರಿಮಂಡಳಗಳು ಜನತೆಯ ಸೇವೆಯನ್ನು ಯಾವ ಮಾರ್ಗದಿಂದ ಮಾಡಬೇಕೆಂಬುದರ ಬಗ್ಗೆ ಸಂಕಷ್ಟದಲ್ಲಿ ಬಿದ್ದಿರುವವು ಚಡಪಡಿಸುತ್ತಿರುವವು. ತಮ್ಮ ಇಡೀ ಜೀವನವನ್ನೆಲ್ಲ ರಾಷ್ಟ್ರಕಾರ್ಯದಲ್ಲಿ ತೊಡಗಿಸಿದ ಧುರೀಣರ ಕಡೆಗೆ ಬಹ್ವಂಶದಿಂದ ಅಧಿಕಾರಸೂತ್ರಗಳಿರುವವು. ಇಷ್ಟು ವರ್ಷಗಳ ವರೆಗೆ ಅವರು ಕತ್ತಿಯನ್ನು ಹಿಡಿದಿದ್ದರು. ಅವರಿಗೆ ಈಗ ನೇಗಿಲವನ್ನು ನಡೆಸಲು ಕಠಿನವೆನಿಸಹತ್ತಿದೆ. ಅದುದರಿಂದ ಇದೊಂದು ಸ್ವಾಗತಾರ್ಹ ಬದಲಾವಣೆ ಕಟ್ಟಕಡೆಯ ಧುರೀಣನು ಕೆಗೆದವರ ಲಕ್ಷ್ಯವನ್ನು ಅದನ್ನು ಕಟ್ಟುವವರ ಕಡೆಗೆ ಎಳೆಯಬೇಕೆಂದು ಬಯಸಿ ರಾಷ್ಟ್ರಪತಿಗಳು ಸಕಾಲಿಕ ಕಾರ್ಯವನ್ನು ಮಾಡಿರುವರು.

ಅಲಹಾಬಾದಿನಲ್ಲಿ ಪ್ರಾಂತಿಕ ಕಾಂಗ್ರೆಸ್ ಧುರೀಣರು ಸಭೆ ಸೇರಿ ವಿಧಾಯಕ ಕಾರ್ಯಕರ್ತರೊಡನೆ ಕಾಂಗ್ರೆಸ್ಸಿನ ಭಾವೀ ಕಾರ್ಯಕ್ರಮದ ಬಗ್ಗೆ ವಿಚಾರ ವಿನಿಮಯ ಮಾಡಿದರು. ಆ ಸಭೆಯಲ್ಲಿದ್ದ ಉತ್ಸಾಹ ಮತ್ತು ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಜನತೆಯ ಸೇವೆಯನ್ನು ಮಾಡಬೇಕೆಂಬ ಅತ್ಯಂತಿಕ ಆಸ್ಥೆ ಮೊದಲಾದ್ದನ್ನು ನೋಡಿದರೆ ಮತ್ತೆ ಭವಿಷ್ಯತ್ತು ಅತ್ಯಂತ ಉಜ್ವಲವಾಗಿ ತೋರುತ್ತದೆ. ಅವರು ಸಿದ್ಧಪಡಿಸಿದ ಯೋಜನೆಯು ಕಾಂಗ್ರೆಸ ಕಾರ್ಯಸಮಿತಿಯ ಮುಂದಿಡಲ್ಪಟ್ಟು ಅದರಲ್ಲಿ ಕೂಲಂಕಷ ವಿಚಾರವಾಗಿ ಅಷ್ಟೇ ಉತ್ಸಾಹ ಮತ್ತು ಅದೇಬಗೆಯ ಏಕಾಗ್ರತೆಯಿಂದ ಕಾರ್ಯಕಾರಿಯಾಗಬಲ್ಲದೆಂದು ನಮಗೆ ಭರವಸೆಯಿದೆ. ಆ ಪರಿಷತ್ತಿನವರು ಪಾಸು ಮಾಡಿದ ಗೊತ್ತುವಳಿಗಳನ್ನು ನಾವು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಕೊಟ್ಟಿದ್ದೇವೆ. ಮೂರೇ ದಿನಗಳ ಅಲ್ಪ ಕಾಲದಲ್ಲಿ ಅವರು ಎಷ್ಟು ದೊಡ್ಡ ಯೋಜನೆಯನ್ನು ತಯಾರಮಾಡಿರುವರೆಂಬುದು ಅದರಿಂದ ಗೊತ್ತಾಗುವದು. ಕಾರ್ಯಪದ್ಧತಿ ಮತ್ತು ಪರಿಸ್ಥಿತಿಯ ಬಗ್ಗೆ ಇದ್ದ ಎಚ್ಚರಿಕೆಯನ್ನು ನೋಡಿದರೆ ದೇಶದ ಭವಿಷ್ಯ ಉಜ್ವಲವಾಗಿದೆಂದು ಮನವರಿಕೆಯಾಗುತ್ತದೆ. ಸಕಾಲದಲ್ಲಿ ಬೇರೆ ಬೇರೆ ಮಂತ್ರಿಮಂಡಳಗಳು ಕಾರ್ಯಕರ್ತರು ನಮ್ಮೆಲ್ಲರ ಮುಂದಿರುವ ಪುನರ್ರಚನೆಯ ಕಾರ್ಯದಲ್ಲಿ ಸಂಪೂರ್ಣವಾಗಿ ಸಹಕರಿಸುವರೆಂದು ನಂಬಲಾಗಿದೆ.

ಜೆ. ಸಿ. ಕುಮಾರಪ್ಪ

ಅ. ಭಾ. ಆಕಾಶವಾಣಿಯ ಭಾಷಾಧೋರಣೆ

[ಈಗ ಕೆಲ ವರ್ಷಗಳಿಂದ ಅಖಿಲ ಭಾರತ ಆಕಾಶವಾಣಿಯ ಭಾಷಾ ಧೋರಣೆಯ ಬಗ್ಗೆ ಹಿಂದೀ ಪ್ರೇಮಿಗಳಿಗೂ ಉರ್ದೂ ಪ್ರೇಮಿಗಳಿಗೂ ಕಟುತರವಾದ ವಾಗ್ವಾದ ನಡೆಯುತ್ತಿದೆಂಬುದು ಎಲ್ಲರಿಗೂ ತಿಳಿದ ಮಾತು. ಸಾಹಿತ್ಯಕ ಹಿಂದಿಯ ಅಭಿವೃದ್ಧಿಗಾಗಿ ಕೆಲಸಮಾಡುತ್ತಿರುವ ಸಂಸ್ಥೆಯಾದ ಹಿಂದೀ ಸಾಹಿತ್ಯ ಸಮ್ಮೇಲನದವರು ಅ. ಭಾ. ಆಕಾಶವಾಣಿಯನ್ನು ಬಹಿಷ್ಕರಿಸುವಷ್ಟು ದೂರ ಹೋಗಬೇಕಾಯಿತೆಂಬುದೂ ಸರ್ವವಿದಿತ. ಈಗ ನಡುಗಾಲ ರಾಷ್ಟ್ರೀಯ ಸರಕಾರದವರು ಮಾಡಿರುವ ಜಾಣತನದ ಹಾಗು ಮುತ್ಸದ್ದಿತನದ ತೀರ್ಮಾನದಿಂದ, ಈ ವಿಷಾದಜನಕ ಸಮಸ್ಯೆಯ ಮೇಲೆ ನಡೆದಿದ್ದ ಅನವಶ್ಯಕ ವಿವಾದಗಳು ನಿಂತುಹೋಗಿ ಅಖಿಲ ಭಾರತ ಮಾಧ್ಯಮವಾದ ಹಿಂದುಸ್ತಾನಿಯ ಅಭಿವೃದ್ಧಿ ಅ. ಭಾ. ಆಕಾಶವಾಣಿಯ ಮುಖಾಂತರ ಆದೀತೆಂದು ಹಾರೈಸಲಾಗಿದೆ. ಈ ಕೆಳಗೆ ಕೊಟ್ಟ ಸರಕಾರಿ ಧೋರಣದ ಹೇಳಿಕೆಯಲ್ಲಿ "ಸಾಹಿತ್ಯಕ ಹಿಂದೀ ಮತ್ತು ಉರ್ದುಗಳ ಪ್ರತಿಪಾದಕರ ನಡುವೆ ನಡೆದ ವಿವಾದದಿಂದ ಹಿಂದುಸ್ತಾನಿಗೆ ಹಾನಿಯಾಗಬಾರದೆಂದು ಆಕಾಶವಾಣಿ ಕೇಳುವವರಲ್ಲಿ ಬಹಳ ಜನರು ಇಚ್ಛಿಸುವದರಿಂದ ಸಾಹಿತ್ಯಕ ಹಿಂದೀ ಅಥವಾ ಉರ್ದುವಿನಿಂದ ಭಿನ್ನವಾದ ಸರಳ ಹಿಂದುಸ್ತಾನಿಯಲ್ಲಿ ಕಾರ್ಯಕ್ರಮಗಳನ್ನು ಸಂಘಟಿಸಲು ಮೊದಲು ಮಾಡಬೇಕೆಂದು ಸರಕಾರ ತೀರ್ಮಾನಿಸಿದೆ" ಎಂದು ಉಲ್ಲೇಖಿಸಿರುವದರಿಂದ ಈ ಅಖಿಲ ಭಾರತ ಭಾಷೆಯ ಪ್ರೇಮಿಗಳೆಲ್ಲರಿಗೂ ಆನಂದವಾಗದಿರದು. ಅ. ಪ್ರೆ. ಸುದ್ದಿ ಸಂಸ್ಥೆಯಿಂದ ಪ್ರಸರಿಸಲ್ಪಟ್ಟ ಧೋರಣ ಹೇಳಿಕೆ ಈ ಕೆಳಗೆ ಕೊಡಲ್ಪಟ್ಟಿದೆ.]

ಸ್ಥಾಯಿ ಸಲಹೆ ಸಮಿತಿಯ ಸರ್ವಾನುಮತ ಸೂಚನೆಯನ್ನು ಸರಕಾರ ಸ್ವೀಕರಿಸಿ ಹಿಂದುಸ್ತಾನಿಯ ಶಬ್ದಕೋಶದ ಐಕ್ಯಯ ವಿಷಯದಲ್ಲಿ ಈ ಕೆಳಗಿನ ತತ್ವಗಳನ್ನನುಸರಿಸಬೇಕೆಂದೊಪ್ಪುತ್ತದೆ.

(ಅ) ಮೂಲ ಹಿಂದುಸ್ತಾನಿ ಶಬ್ದ ಭಂಡಾರದಲ್ಲಿರುವ ಶಬ್ದಗಳನ್ನೆ, ಅವುಗಳ ನಿಷ್ಪತ್ತಿ ಎಲ್ಲೇ ಇರಲಿ, ಇದ್ದಕ್ಕಿದ್ದಂತಾಗಲಿ ಮೊಟ್ಟಮೊದಲು ಸಾಧ್ಯವಿದ್ದಷ್ಟು ಮಟ್ಟಿಗೆ ಹೊಸ ಶಬ್ದಗಳನ್ನು ಸೃಷ್ಟಿಸುವ ಸಲುವಾಗಿಯಾಗಲಿ ಉಪಯೋಗಿಸಬೇಕು. (ಬ) ವಿಶಿಷ್ಟ ಶಬ್ದಕೋಶಕ್ಕೆ ಅವಶ್ಯವಿರುವ ಶಬ್ದಗಳು ಮೂಲ ಭಂಡಾರದಲ್ಲಿ ಸಿಗದಿದ್ದ ಸಂದರ್ಭದಲ್ಲಿ ದೇಶ್ಯ ಶಬ್ದಗಳಿಗೂ ಅವುಗಳ ರೂಪಾಂತರಗಳಿಗೂ ಅಗ್ರಸ್ಥಾನ ಕೊಡಬೇಕು. (ಕ) ದೇಶ್ಯ ಶಬ್ದಗಳನ್ನು ಉಪಯೋಗಿಸುವಾಗ ಅವುಗಳ ಐಕ್ಯಯಲ್ಲಿ ಅಧಿಕಾಂಶ ಜನರಿಗೆ ಅರ್ಥವಾಗುವಂಥವಿರಬೇಕೆಂಬುದೇ ಮುಖ್ಯ ತತ್ವವಾಗಿರಬೇಕು.

ಹಿಂದುಸ್ತಾನಿ ಪರ್ಯಾಯ ಶಬ್ದಗಳ ಐಕ್ಯಯ ಮಟ್ಟಿಗೆ, ಹಿಂದುಸ್ತಾನಿಯ ಬಗ್ಗೆ ಸಲಹೆ ಕೊಡಲು ಶಾಶ್ವತವಾದೊಂದು ಸ್ಥಾಯಿ ಸಲಹೆ ಸಮಿತಿಯನ್ನು ನೇಮಿಸುವದು ಅವಶ್ಯವೆಂದ ಸರಕಾರದ ಅಭಿಪ್ರಾಯ. ಅದು ಮೊಟ್ಟ ಮೊದಲು ಅ. ಭಾ. ಆಕಾಶವಾಣಿಯ ಶಬ್ದಕೋಶವನ್ನು ಪರಿಶೀಲಿಸಿ, ಈ ಮೊದಲೇ ಸಂಗ್ರಹಿಸಿದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು, ಆ ಶಬ್ದ ಕೋಶದಲ್ಲಿ ಸೇರಿಸಲ್ಪಟ್ಟಿರುವ ಶಬ್ದಗಳಿಗೆ ಸರಿಯಾದ ಹಿಂದುಸ್ತಾನಿ ಪರ್ಯಾಯ ಶಬ್ದಗಳನ್ನು ಸೂಚಿಸಬೇಕು. ಆ ಮೇಲೆ ಅದು, ಆ ಶಬ್ದಕೋಶವನ್ನು ಇಂದಿನ ಪರ್ಯಂತ ತಂದು ಮುಟ್ಟಿಸುವ ವಿಷಯದಲ್ಲಿ ಡಾಯರೆಕ್ಟರ ಜನರಲ್ಲರಿಗೆ ಸಲಹೆ ಕೊಡಬೇಕಲ್ಲದೆ, ಅ. ಭಾ. ಆಕಾಶವಾಣಿಯ ಮೂಲಕ ಹಿಂದುಸ್ತಾನಿಗೆ ಉತ್ತೇಜನ ಕೊಡುವ ಉಪಾಯಗಳನ್ನೂ ಸೂಚಿಸಬೇಕು. ಈ ಸಮಿತಿಯ ನೇಮಕವನ್ನು ಪ್ರತ್ಯೇಕವಾಗಿ ಸಾರಲಾಗುವದು.

ಸಾಹಿತ್ಯಕ ಹಿಂದೀ ಮತ್ತು ಉರ್ದೂ ಭಾಷೆಗಳ ಪ್ರತಿಪಾದಕರ ನಡುವೆ ನಡೆದ ವಿವಾದದಿಂದ ಹಿಂದುಸ್ತಾನಿಗೆ ಹಾನಿಯಾಗಬಾರದೆಂದು ಬಹಳ ಜನ ಆಕಾಶವಾಣಿ ಕೇಳುವವರು ಇಚ್ಛಿಸುತ್ತಾರೆಂದು ಸರಕಾರಕ್ಕೆ ಅನಿಸುತ್ತದೆ. ಆದುದರಿಂದ, ಸಾಹಿತ್ಯಕ ಹಿಂದಿ ಅಥವಾ ಉರ್ದುವಿನಿಂದ ಭಿನ್ನವಾದ ಸರಳ ಹಿಂದುಸ್ತಾನಿಯಲ್ಲಿ ಕಾರ್ಯಕ್ರಮಗಳನ್ನು ಸಂಘಟಿಸಲು ಮೊದಲು ಮಾಡಬೇಕೆಂದು ಸರಕಾರ ತೀರ್ಮಾನಿಸಿದೆ. ಈ ದೃಷ್ಟಿಯಿಂದಲೇ ಪ್ರಸರಿಸಲ್ಪಡುವ ಕಾರ್ಯಕ್ರಮಗಳಲ್ಲಿ ಹಿಂದುಸ್ತಾನಿ ಕಾರ್ಯಕ್ರಮಗಳಿಗೂ ಒಂದಂಶ ಸಮಯವನ್ನು ಕೊಡಬೇಕೆಂದು ನಿರ್ಧರಿಸಿದೆ.

ಈ ತೀರ್ಮಾನಗಳನ್ನು ಅನುಲಕ್ಷಿಸಿ ಸರಕಾರದವರು ಸ್ಥಾಯೀ ಸಲಹೆ ಸಮಿತಿಯ ಈ ಕೆಳಗಿನ ಸರ್ವಾನುಮತ ಸೂಚನೆಗಳನ್ನು ಅಂಗೀಕರಿಸಿದ್ದಾರೆ:

೧ ಸುದ್ದಿಗಳನ್ನು ಬಿಟ್ಟು ಇತರ ಶ್ರಾವ್ಯ ವಿಷಯಗಳು ಪ್ರೌಢ ಉರ್ದೂ ಅಥವಾ ಹಿಂದೀ ಸಾಹಿತ್ಯದಿಂದ ಆರಿಸಿದವಿರಬೇಕು ಇಲ್ಲವೆ ಹಿಂದೀ ಮತ್ತು ಉರ್ದೂ ಭಾಷೆಗಳ ಲಬ್ಧಪ್ರತಿಷ್ಠ ಲೇಖಕರಿಂದಾಗಲಿ ಪಂಡಿತರಿಂದಾಗಲಿ ಬರೆಯಲ್ಪಟ್ಟವಿರಬೇಕು. ಆದರೆ ಹಿಂದುಸ್ತಾನಿಯಲ್ಲಿಯೂ ಕೆಲವು ಕಾರ್ಯಕ್ರಮಗಳಿರಲೇಬೇಕೆಂಬ ನಿಯಮವಿರತಕ್ಕದ್ದು.

(೨) ಹೆಂಗಸರು ಮಕ್ಕಳಿಗೋಸ್ಕರ ಅಥವಾ ಇತರ ವಿಶಿಷ್ಟ ಶ್ರೋತೃಗಳಿಗೋಸ್ಕರ ಇರುವ ಕಾರ್ಯಕ್ರಮಗಳನ್ನು, ವಿವಿಧ ಕೇಂದ್ರಗಳಲ್ಲಿ ಹಿಂದೀ ಮತ್ತು ಉರ್ದೂ ಭಾಷೆಗಳಿಗಾಗಿ ನಿರ್ದಿಷ್ಟಪಡಿಸಿದ ಪ್ರಮಾಣದಂತೆ ಆ ಎರಡು ಭಾಷೆಗಳಲ್ಲಿ ಪ್ರತಿಪ್ರತ್ಯೇಕವಾಗಿ ಬಿತ್ತರಿಸಬೇಕು. ಅಲ್ಲದೆ, ಶಿಕ್ಷಣಾತ್ಮಕ ಕಾರ್ಯಕ್ರಮಗಳಿಗೆ ಹೆಚ್ಚು ಸಮಯ ಕೊಡಲು ಪ್ರಯತ್ನಿಸತಕ್ಕದ್ದು. ಆದರೆ ಈ ಕಾರ್ಯಕ್ರಮಗಳಲ್ಲಿ ಅಧಿಕಾಂಶ ಹಿಂದುಸ್ತಾನಿಯಲ್ಲಿರಬೇಕು.

(೩) ಗ್ರಾಮ ಕಾರ್ಯಕ್ರಮಗಳು ಯಾರಿಗಾಗಿ ಇವೆಯೋ ಅವರಿಗೆ ಅವುಗಳ ಭಾಷೆ ತಕ್ಕದ್ದಾಗಿಲ್ಲ. ಆದುದರಿಂದ ಸಂಬಂಧಪಟ್ಟ ಜಿಲ್ಲೆಗಳ ಸಾರ್ವಜನಿಕ ಕಾರ್ಯಕರ್ತರನ್ನೊಳಗೊಂಡ ಸಲಹೆ ಸಮಿತಿಗಳು ಪ್ರತಿ ಕೇಂದ್ರಕ್ಕೆ ಗ್ರಾಮ ಕಾರ್ಯಕ್ರಮಗಳ ಸಂಬಂಧದಲ್ಲಿ ಸಲಹೆ ಕೊಡುವ ಗೋಸುಗ ಇರಬೇಕು.

(೪) ಪ್ರತಿಷ್ಠಿತ ಉರ್ದೂ ಕವಿಗಳ ಗಝಲುಗಳು ಸಂಗೀತ ಕಾರ್ಯಕ್ರಮಗಳಲ್ಲಿ ಹಾಡಲ್ಪಡುವಂತೆ, ಪ್ರಸಿದ್ಧ ಹಿಂದೀ ಕವಿಗಳ ಕವಿತೆಗಳಿಗೂ ಸ್ವರ ಹಾಕಿ ಹಾಡಬೇಕು.

(೫) ಹಿಂದೀ ಮತ್ತು ಉರ್ದೂ ಭಾಷೆಗಳಲ್ಲಿ ಬಿತ್ತರಿಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ ಸಲಹೆ ಕೊಡುವ ಸಲುವಾಗಿ ಆ ಎರಡು ಭಾಷೆಗಳಲ್ಲಿ ಪ್ರತಿಯೊಂದಕ್ಕೂ ಒಂದೊಂದು ಸ್ಥಾಯಿ ಸಲಹೆ ಸಮಿತಿ ಇರತಕ್ಕದ್ದು. ಅದೇ ಪ್ರಕಾರ ಹಿಂದುಸ್ತಾನಿಗೂ ಒಂದು ಸಮಿತಿಯಿರಬೇಕೆಂದು ಸರಕಾರದ ವಿಚಾರವಿದೆ.

(೬) ಶಾಸ್ತ್ರೀಯ ಹಾಡುಗಳಲ್ಲಿರುವ ಹಿಂದೀ ಮತ್ತು ಉರ್ದೂ ಶಬ್ದಗಳ ವಿಚಾರವನ್ನು ಎಚ್ಚರಿಕೆಯಿಂದ ಪರೀಕ್ಷಿಸಿ ಮೂಲ ಶುದ್ಧ ಉಚ್ಚಾರವನ್ನೇ ಅನುಸರಿಸಬೇಕು.

(೭) ಕಾರ್ಯಕ್ರಮಗಳಿಗೆ ಸಂಬಂಧಿಸಿದ ಎಲ್ಲ ಬಗೆಯ ಪ್ರಕಟನೆಗಳಲ್ಲಿಯೂ ಹಿಂದೀ ಮತ್ತು ಉರ್ದೂ ಭಾಷೆಗಳನ್ನು ಸಮವಾಗಿ ಬಳಸಲಾಗಿರಬೇಕು.

(೮) ಹಿಂದುಸ್ತಾನಿ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಪ್ರಕಟನೆಗಳು ಪ್ರಕಟನೆಗೆ ಹಿಂದಿ ಮತ್ತು ಉರ್ದೂ ಎರಡೂ ಭಾಷೆಗಳ ಪದಗಳು ಪದವಿರತಕ್ಕದ್ದು.

ಸರಕಾರದ ಅಭಿಪ್ರಾಯದಲ್ಲಿ ಪ್ರಾರಂಭದ ಮತ್ತು ಕೊನೆಯ ಅರಿಕೆಗಳು ಆಯಾ ಕಾರ್ಯಕ್ರಮದ ಭಾಷೆಯನ್ನನುಸರಿಸಿ ಹಿಂದೀ ಅಥವಾ ಉರ್ದೂ ಭಾಷೆಗೆ ಪ್ರಾತಿನಿಧ್ಯವುಳ್ಳ ಸರಳ ಭಾಷೆಯಲ್ಲಿರಬೇಕು. ವಂದನೆ ನಮಸ್ಕಾರಗಳು ಆಯಾ ಆಕಾಶವಾಣಿ ಕೇಂದ್ರಗಳಿರುವ ಪ್ರದೇಶದಲ್ಲಿ ಸಾಮಾನ್ಯವಾಗಿ ಪ್ರಚಲಿತವಾಗಿರುವ ಪದ್ಧತಿಯನ್ನೇ ಅನುಸರಿಸಬೇಕು. "ತೆಸಿಮುಲ್" ಎಂಬ ಶಬ್ದದ ಪರ್ಯಾಯ "ದಶಮೂಲಕ" ಎಂಬುದಿರಬೇಕು. ಏಕೆಂದರೆ ತೆಸಿಮುಲ ಶಬ್ದ ಅದರಿಂದಲೇ ಹುಟ್ಟಿದ್ದೆಂಬುದು ಸುಸ್ಪಷ್ಟ.

ವಿವಿಧ ಭಾಷೆಗಳಿಗೆ ಕೊಡಬೇಕಾದ ಪ್ರಮಾಣದ ಸಂಬಂಧದಲ್ಲಿ ಸರಕಾರ ಈ ಕೆಳಗಿನ ನಿರ್ಣಯಗಳಿಗೆ ಬರಬೇಕಾಗಿದೆ.

ಪೇಶಾವರ: "ಶ್ರಾವ್ಯ" ಕಾರ್ಯಕ್ರಮದಲ್ಲಿ ಪುಸ್ತು ಭಾಷೆಗೆ ಪ್ರಾಧಾನ್ಯವಿರಬೇಕು ಆದರೆ ಅದು ಗ್ರಾಮ ಕಾರ್ಯಕ್ರಮವನ್ನೊಳಗೊಂಡು ೧೦೦ಕ್ಕೆ ೫೦ ಅಂಶಕ್ಕಿಂತ ಹೆಚ್ಚಾಗಿರಬಾರದು. ಉಳಿದ ಅಂಶವನ್ನು ಉರ್ದು ಮತ್ತು ಹಿಂದುಸ್ತಾನಿಗಳಲ್ಲಿ ೩ಕ್ಕೆ ೧ರ ಪ್ರಮಾಣದಲ್ಲಿ ಹಂಚಬೇಕು.

ಲಾಹೋರ: ಜನಸಾಮಾನ್ಯರಿಗೆ ಮೆಚ್ಚಿಗೆಯಾಗುವ ವಿಷಯಗಳು ಸ್ಥಾನಿಕ ಭಾಷೆಯಾದ ಪಂಜಾಬಿಯಲ್ಲಿರಬೇಕು. ಆದರೆ ಪಂಜಾಬಿ ಭಾಷೆಗೆ ಕೊಡುವ ಒಟ್ಟು ಅಂಶ, ಗ್ರಾಮ ಕಾರ್ಯಕ್ರಮ ಸೇರಿ ನೂರಕ್ಕೆ ೨೫ ರಷ್ಟಕ್ಕಿಂತ ಅಧಿಕವಾಗಿರಬಾರದು. ಉಳಿದ ಅಂಶ ಉರ್ದು, ಹಿಂದಿ ಮತ್ತು ಹಿಂದುಸ್ತಾನಿಗಳಲ್ಲಿ ಕ್ರಮವಾಗಿ ೬೫,೧೦ ಮತ್ತು ೧೦ರ ಪ್ರಮಾಣದಲ್ಲಿ ಹಂಚಲ್ಪಡಬೇಕು.

ಲಖನೌ: ಹಿಂದೀ ನೂರಕ್ಕೆ ೬೦, ಉರ್ದು ೩೦ ಮತ್ತು ಹಿಂದುಸ್ತಾನಿ ೧೦.

ಮುಂಬಯಿ: ಹಿಂದುಸ್ತಾನಿ, ಹಿಂದಿ ಮತ್ತು ಉರ್ದು ಸಮಾನ ಪ್ರಮಾಣದಲ್ಲಿರಬೇಕು.

ಕಲಕತ್ತೆ ಮತ್ತು ಢಾಕಾ: ಮುಂಬಯಿಯಂತೆ.

ದಿಲ್ಲಿ: ಹಿಂದಿ ನೂರಕ್ಕೆ ೪೦, ಉರ್ದು ೪೦, ಹಿಂದುಸ್ತಾನಿ ೨೦.

ದೇಶದ ವಿಶಾಲ ಹಿತವನ್ನನುಲಕ್ಷಿಸಿ ಹಿಂದುಸ್ತಾನಿಯನ್ನು ಎಂದರೆ ಉತ್ತರ ಹಿಂದುಸ್ತಾನದಲ್ಲಿ ಸಾಮಾನ್ಯವಾಗಿ ಮಾತಾಡಲ್ಪಡುವ ಹಾಗೂ ಅರ್ಥವಾಗುವ ಮತ್ತು ದೇವನಾಗರಿ ಅಥವಾ ಉರ್ದು ಲಿಪಿಯಲ್ಲಿ ಬರೆಯಲ್ಪಡುವ ಭಾಷೆಯನ್ನು ಪ್ರಚುರಗೊಳಿಸುವದನ್ನೇ ಸರಕಾರ ಧ್ಯೇಯವಾಗಿಟ್ಟುಕೊಂಡಿದೆ. ಸರಕಾರ ಮಾಡಿರುವ ತೀರ್ಮಾನ, ವಾದಕ್ಕೆ ಬಿದ್ದಿರುವ ಎರಡೂ ಪಕ್ಷಗಳನ್ನು ಪೂರ್ತಿಯಾಗಿ ಸಂತೋಷಗೊಳಿಸದಿದ್ದರೂ ಸಾಮಾನ್ಯವಾಗಿ ಸಾರ್ವಜನಿಕರಿಗೆ ಒಪ್ಪಿಗೆಯಾಗಬಹುದೆಂದು ತೋರುತ್ತದೆ. ಸಾಮಾನ್ಯ ಧ್ಯೇಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಸಾಮಾನ್ಯ ಶ್ರೋತೃಗಳ ಅವಶ್ಯಕತೆಯನ್ನೂ ಅವರಲ್ಲಿ ಸಾಹಿತ್ಯಾಭಿರುಚಿಯುಳ್ಳವರ ರುಚಿಯನ್ನೂ ಸರಿತೂಗುವಂತೆ ಈ ನಿರ್ಣಯವನ್ನು ಮಾಡಬೇಕಾಗಿ ಬಂತು. —ಅ. ಪ್ರೆ.

ವರ್ಧಾದ ಹಿಂದುಸ್ತಾನಿ ಪ್ರಚಾರ ಸಭೆಯ ಕಾರ್ಯಸಮಿತಿಯ ಗೊತ್ತುವಳಿಯೊಂದರ ಪ್ರತಿ:-

ಹಿಂದುಸ್ತಾನಿ ಪ್ರಚಾರ ಸಭೆಯ ಕಾರ್ಯಸಮಿತಿಯಿದು ಎಲ್ಲ ಪ್ರಾಂತಿಕ ಸರಕಾರಗಳೂ ರಾಷ್ಟ್ರೀಯ ಭಾಷೆಯಾದ ಹಿಂದುಸ್ತಾನಿಯನ್ನು ಪ್ರಚುರಗೊಳಿಸುವ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕೆಂದು ಬಯಸುತ್ತದೆ. ಹಿಂದುಸ್ತಾನಿಯ ಪ್ರಚಾರ ಅಂತರ್ಪ್ರಾಂತೀಯ ಸಂಪರ್ಕಕ್ಕೆ ಅವಶ್ಯವಾಗಿದೆಯೆಂಬುದು ಸ್ವಯಂವೇದ್ಯ. ಸ್ವತಂತ್ರ ಹಿಂದುಸ್ತಾನದಲ್ಲಿ ರೇಲ್ವೆ, ಟಪಾಲು, ತಂತಿ, ಬ್ಯಾಂಕು ಮೊದಲಾದವುಗಳ ವ್ಯವಹಾರ

—೧೧ ನೇ ಪುಟಕ್ಕೆ

ಕರ್ಮವೀರ ಹರಿಜನ ಪುರವಣಿ

ಓಡಿಸಾದ ಜವಳಿ ಧೋರಣ

ಜನತೆಯ ಪರಿಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಪ್ರಜಾಪ್ರಭುತ್ವ ಸರಕಾರಗಳು ಸ್ವೀಕರಿಸತಕ್ಕ ಧೋರಣೆಗಳ ಸಂಬಂಧದಲ್ಲಿ ಬಹಳ ಉತ್ಕಂಠಿತ ವಿಚಾರಗಳು ನಡೆದಿವೆ. 'ಓಡಿಸಾದ ಆತ್ಮಹತ್ಯೆ' ಎಂಬುದಾಗಿ ನಾವು ಬರೆದ ಬರಹದ ಬಗ್ಗೆ ಮುಖ್ಯ ಮಂತ್ರಿ ಮೆಹತಾಬರವರು ತಮ್ಮ ಸ್ಪಷ್ಟೀಕರಣವನ್ನು ಕಳಿಸಿರುವರು. ಸಂತೋಷದಿಂದ ನಾವದನ್ನು ಕೆಳಗೆ ಕೊಡುತ್ತೇವೆ.

"ಆ ಬರೆಹದ ಮೊದಲನೇ ಪರಿಚ್ಛೇದದಲ್ಲಿಯ ವಿಷಯದ ಸಂಬಂಧದಲ್ಲಿ ಭಿನ್ನಾಭಿಪ್ರಾಯವಿಲ್ಲ. ಅಲ್ಲಿ ವಿವರಿಸಲ್ಪಟ್ಟ ಉದ್ದೇಶಗಳ ಬಗ್ಗೆ ನನ್ನ ಪೂರ್ಣ ಒಪ್ಪಿಗೆ ಇದೆ. ಆದರೆ ಪ್ರಾಂತಿಕ [illegible]ರು ಸೀದಾ ಯೋಜನೆಯ ಆಮಿಷವನ್ನು ಸ್ವೀಕರಿಸಲು ಓಡಿಸಾ ಸರಕಾರವೇ ಮೊದಲು ಮುಂದೆ ಬಂದು ಹೊಸ ಕಂಪನಿಗಾಗಿ ಯಂತ್ರ ಮತ್ತು ಯಂತ್ರೋಪಕರಣಗಳನ್ನು ತರಿಸಿಕೊಳ್ಳುವಲ್ಲಿ ಎಲ್ಲಕ್ಕಿಂತ ಪ್ರಥಮ ಪ್ರಾಶಸ್ತ್ಯವನ್ನು ಪಡೆದುಕೊಂಡಿತೆಂದು' ನೀವು ಎರಡನೇ ಪರಿಚ್ಛೇದದಲ್ಲಿ ಹೇಗೆ ಹೇಳುವಿರೆಂಬುದು ಆಶ್ಚರ್ಯಕರವಾಗಿದೆ. 'ಓಡಿಸಾ ಟೆಕ್ಸ್ಟಾಯಿಲ್ ಮಿಲ್ಸ್ ಲಿಮಿಟೆಡ್' ಮೊದಲಾದವುಗಳ ಸಂಬಂಧದಲ್ಲಿ ನಿಜವಾದ ಸುದ್ದಿಸಂಗತಿಗಳನ್ನು ಓಡಿಸಾದಲ್ಲಿಯ ನಿಮ್ಮ ಗೆಳೆಯರಿಂದಲ್ಲದಿದ್ದರೂ ಅಧಿಕಾರೀವರ್ಗದಿಂದಲಾದರೂ ತಿಳಿದುಕೊಳ್ಳಬೇಕಿತ್ತೆಂದು ನನ್ನ ಅಭಿಪ್ರಾಯ. ನಿಮ್ಮ ಮಾಹಿತಿಗಾಗಿ ಕೆಳಗಿನ ವಿಷಯಗಳನ್ನು ನಾನು ಕೊಡಬಯಸುತ್ತೇನೆ. ಓಡಿಸಾದಲ್ಲಿ ಜವಳಿ ಉದ್ಯೋಗವನ್ನು ಪ್ರಾರಂಭಿಸುವ ಸಂಬಂಧದಲ್ಲಿ ನಡೆದ ಹೊರಗಿನ ಪ್ರಚಾರವನ್ನನುಲಕ್ಷಿಸಿಯೇ ನಿಮ್ಮ ಟೀಕೆ ಇದೆಯೆಂಬುದು ನನಗೆ ಗೊತ್ತಿದೆ. ನಾನು ಕೊಡುವ ಮಾಹಿತಿಯಿಂದ ನಿಮಗಾದ ತಪ್ಪು ತಿಳುವಳಿಕೆ ನಿವಾರಣೆಯಾಗುವದೆಂದು ಭಾವಿಸುತ್ತೇನೆ.

ಹಿಂದುಸ್ಥಾನ ಸರಕಾರದವರು ೧೯೪೫ ಫೆಬ್ರುವರಿಯಲ್ಲಿ ಡಿ. ಎಂ. [illegible] ಇವರ ಅಧ್ಯಕ್ಷತೆಯಲ್ಲಿ ಯುದ್ಧೋತ್ತರ ಯೋಜನಾ ಸಮಿತಿ (ಜವಳಿ)ಯನ್ನು ನೇಮಿಸಿದರು. ೧೯೪೫ ನವಂಬರದಲ್ಲಿ ಈ ಸಮಿತಿಯು ತನ್ನ ವರದಿಯನ್ನೊಪ್ಪಿಸಿತು. ಆ ವರದಿಯಲ್ಲಿ ಸಮಿತಿಯವರು ಹಿಂದುಸ್ಥಾನವನ್ನು ಬೇರೆ ಬೇರೆ ಪ್ರದೇಶಗಳನ್ನಾಗಿ ವಿಭಾಗಿಸಿ ಮುಂಬಯಿ ಪ್ರಾಂತವೊಂದೆ ಉಳಿತಾಯದ ಪ್ರಾಂತವಿದ್ದು ಉಳಿದೆಲ್ಲ ಪ್ರದೇಶಗಳು ಕೊರತೆಯ ಪ್ರದೇಶಗಳೆಂದು ಸಾರಿತು. ಈ ಪ್ರದೇಶಗಳಲ್ಲಿ ಸಂಸ್ಥಾನಗಳನ್ನೊಳಗೊಂಡ ಓಡಿಸಾ ಕೊರತೆಯ ಭಾಗವು. ಅಲ್ಲಿ ೧೫೦,೦೦೦ ಕದರುಗಳ ಗಿರಣಿಗಳನ್ನು ಹಾಕಲು ಅಪ್ಪಣೆ ಕೊಡಬೇಕೆಂದು ಸೂಚನೆ ಮಾಡಿತು. ಜವಳಿ ಕಮೀಶನರರು ೧೫೦,೦೦೦ದ ಈ ಪ್ರಮಾಣವನ್ನು ೧೧೯,೦೦೦ ಕ್ಕಿಳಿಸಿದರು. ೧೯೪೬ ಎಪ್ರಿಲ ೧೫ ರೊಳಗಾಗಿ ಬೇರೆ ಬೇರೆ ಕಾರಖಾನೆಗಳಿಗೆ ಎಷ್ಟೆಷ್ಟು ಕದಿರುಗಳನ್ನು ಕೊಡಬೇಕೆಂದು ಸೂಚನೆಗಳನ್ನು ಕಳಿಸಬೇಕೆಂದು ಹಿಂದುಸ್ಥಾನ ಸರಕಾರ ಪ್ರಾಂತಿಕ ಸರಕಾರಕ್ಕೆ ಬಿನ್ನವಿಸಿತು. ಉಳಿದ ಪ್ರಾಂತಗಳಿಗೂ ಇದೇ ಬಗೆಯ ಸೂಚನೆಗಳನ್ನು ಕಳಿಸಲಾಯಿತೆಂಬುದನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ. ಓಡಿಸಾದಲ್ಲಿ ಕಾಂಗ್ರೆಸ್ಸು ೧೯೪೬ ಎಪ್ರಿಲ ೧೭ಕ್ಕೆ ಅಧಿಕಾರ ಸ್ವೀಕರಿಸಿತು. ಪ್ರಾಂತದಲ್ಲಿಯ ಸರಕಾರದಲ್ಲಿ ಬದಲಾವಣೆಯನ್ನನುಲಕ್ಷಿಸಿ ಈ ಪ್ರಾಂತಕ್ಕಾಗಿ ಕೊಡಲಾಗುವ ಕದಿರುಗಳನ್ನು ರದ್ದುಪಡಿಸಬೇಕೆಂದು ಪ್ರಾಂತಿಕ ಸರಕಾರ ಹಿಂದುಸ್ಥಾನ ಸರಕಾರಕ್ಕೆ ತಿಳಿಸಬಹುದಾಗಿತ್ತು. ಹಾಗೆ ಮಾಡಿದ್ದರೆ ಈ ಕದಿರುಗಳ ಸೀದಾ ಪಡೆದ ಆಯಾ ಕಾರಖಾನೆಗಳವರು ನೆರೆಯ ಸಂಸ್ಥಾನಗಳಲ್ಲಿ ತಮ್ಮ ಉದ್ಯೋಗವನ್ನು ಪ್ರಾರಂಭಿಸುತ್ತಿದ್ದರು. ಇಲ್ಲವೆ ಹಿಂದುಸ್ಥಾನ ಸರಕಾರದ ಸೂಚನೆಗಳಿಗನುಗುಣವಾಗಿ ಓಡಿಸಾದ ಕದಿರು ಸೀದಾ ಬಂಗಾಲಕ್ಕೆ ಹೋಗುತ್ತಿದ್ದಿತು. ಇದೂ ಅಲ್ಲದೆ ಹಿಂದುಸ್ಥಾನ ಸರಕಾರನ ದ್ವಾರಾ ಪ್ರಾಂತದ ಮೇಲೆ ಹೇರಿದಂತೆ ವಿರೋಧವನ್ನು ಲೆಕ್ಕಿಸದೆ ಒತ್ತಾಯದಿಂದ ಈ ಕದಿರುಗಳನ್ನು ಓಡಿಸಾದ ಮೇಲೆ ಹೇರುವ ಸಂಭವವೂ ಇದ್ದಿತು. ಅದೇನೇ ಇದ್ದರೂ ಓಡಿಸಾ ಸರಕಾರ ೧೯೪೬ ರಲ್ಲಿ ಈ ಕದಿರುಗಳನ್ನು ರದ್ದು ಪಡಿಸಲಿಕ್ಕೆ ಹಿಂದುಸ್ಥಾನ ಸರಕಾರಕ್ಕೆ ಬರೆದುಕೊಳ್ಳಲಿಲ್ಲೆಂಬುದು ನಿಜ.

ಅದೇ ಸಮಯದಲ್ಲಿ ಪ್ರಾಂತಿಕ ಸರಕಾರಗಳ ಜವಳಿ ಧೋರಣದ ಸಂಬಂಧ ಕಾಂಗ್ರೆಸ್ ಪಕ್ಷದಲ್ಲಿಯೂ ಬೇರೆ ಬೇರೆ ಪ್ರಾಂತಗಳೊಡನೆಯೂ ಒಂದೇ ಸವನೆ ವಿಚಾರವಿನಿಮಯ ನಡೆಯಿತು. ಓಡಿಸಾ ಶಾಸನ ಸಭೆಯ ಕಾಂಗ್ರೆಸ ಪಕ್ಷವು ಸ್ವೀಕರಿಸಿದ ಗೊತ್ತುವಳಿಯನ್ನು ನಿಮ್ಮ ಅವಗಾಹನೆಗಾಗಿ ಇದರೊಡನೆ ಕಳಿಸಿದ್ದೇನೆ. ಮದ್ರಾಸ ಪ್ರಾಂತವನ್ನೊಂದು ಬಿಟ್ಟು ಉಳಿದ ಯಾವ ಪ್ರಾಂತವೂ ಈ ಸಂಬಂಧದಲ್ಲಿ ಯಾವ ವಿಚಾರವನ್ನೂ ಮಾಡಲಿಲ್ಲ. ವಿಶೇಷತಃ ಜವಳಿ ಉತ್ಪಾದನೆಯಲ್ಲಿ ಉಳಿತಾಯದ ಪ್ರಾಂತವಾಗಿದ್ದ ಮುಂಬಯಿ ಸರಕಾರ ಕೂಡ ಯಾವದೇ ಬಗೆಯ ವಿರೋಧವನ್ನು ಪ್ರದರ್ಶಿಸಲಿಲ್ಲೆಂಬುದನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ.

೧೯೪೬ ನೇ ನವಂಬರ ೪ ನೇ ತಾರೀಕು ಹಿಂದುಸ್ಥಾನ ಸರಕಾರ ಮತ್ತೊಂದು ಪತ್ರ ಬರೆದು ಈ ಸಂಬಂಧದಲ್ಲಿ ವಿವಂಚನೆಯನ್ನು ವ್ಯಕ್ತಪಡಿಸಿತು. ವಿಶೇಷತಃ ಔದ್ಯೋಗೀಕರಣದಲ್ಲಿ ಹಿಂದುಳಿದ ಪ್ರಾಂತಗಳು ಯಂತ್ರ ಯಂತ್ರೋಪಕರಣಗಳ ಆಯಾತದ ಸಂಬಂಧದಲ್ಲಿ ತಮ್ಮ ಹಕ್ಕುಬಾಧ್ಯತೆಗಳ ಬಗ್ಗೆ ಕೂಡಲೆ ಬರೆಯಬೇಕೆಂದು ಕೇಳಿಕೊಂಡಿತು. ಈ ಪತ್ರದಲ್ಲಿ ವಿವರಣೆ ಮಾಡಿದಂತೆ ಪ್ರಥಮ ಪ್ರಾಶಸ್ತ್ಯಕ್ಕೆ ಪಾತ್ರರಾದ ಆಯಾ ಜನರ ಸಂಬಂಧದಲ್ಲಿಯೂ ಕೂಡಲೆ ಬರೆಯಬೇಕೆಂದು ಹಿಂದುಸ್ಥಾನ ಸರಕಾರ ಪ್ರಾಂತಿಕ ಸರಕಾರಗಳಿಗೆ ಬಿನ್ನವಿಸಿಕೊಂಡಿತು. ಓಡಿಸಾ ಔದ್ಯೋಗೀಕರಣದಲ್ಲಿ ಹಿಂದುಳಿದ ಪ್ರಾಂತವಾದ್ದರಿಂದ ಹಿಂದುಸ್ಥಾನ ಸರಕಾರದ ಈ ಧೋರಣೆಗನುಸಾರವಾಗಿ ಜವಳಿ ಉದ್ಯೋಗವಿಷ್ಟೇ ಅಲ್ಲದೆ ಉಳಿದ ಉದ್ಯೋಗಗಳ ಸಂಬಂಧದಲ್ಲಿಯೂ ವಿಶೇಷ ವಿಚಾರಗಳು ನಡೆದಿವೆಂದು ಹೇಳಬಯಸುತ್ತೇನೆ.

ಓಡಿಸಾದಲ್ಲಿ ಜವಳಿ ಗಿರಣಿಗಳ ಸ್ಥಾಪನೆಯನ್ನು ಪ್ರತಿಬಂಧಿಸಲು ಸರಕಾರವು ಧುರೀಣತ್ವವನ್ನು ವಹಿಸಿರದಿದ್ದರೂ ಅವನ್ನು ಇಲ್ಲಿ ಸ್ಥಾಪಿಸಲಿಕ್ಕಾದರೂ ಧುರೀಣತ್ವವನ್ನು ವಹಿಸಲಿಲ್ಲೆಂಬುದು ಮೇಲೆ ವಿವರಿಸಿದ ಸಂಗತಿಗಳಿಂದ ತಮಗೆ ಗೊತ್ತಾಗಬಹುದು. ಈ ವಿಷಯದ ಸಂಬಂಧದಲ್ಲಿ ಜಾಜೂಜಿಯವರೊಡನೆ ನಾನು ಪತ್ರವ್ಯವಹಾರ ಮಾಡಿದೆನು. ಬಟ್ಟೆ ಉತ್ಪಾದನೆಯ ವಿಷಯಕ ಧೋರಣವನ್ನು ಪ್ರಾಂತಿಕ ತಳಹದಿಯಮೇಲೆ ನಿರ್ಧರಿಸಲಾಗದೆಂದು ನನ್ನ ನಮ್ರ ಅಭಿಪ್ರಾಯವಾಗಿದೆ. ಅಖಿಲಭಾರತ ಧೋರಣವನ್ನು ಗೊತ್ತುಪಡಿಸದಿದ್ದರೆ ಯಾವ ಒಂದು ಪ್ರಾಂತ ವಿಶೇಷತಃ ಇಲ್ಲಿ ಬಟ್ಟೆಗಳನ್ನು ಹೊರಗಿನಿಂದ ತರಿಸಬೇಕಾಗಿದ್ದ ಓಡಿಸಾದಂಥ ಪ್ರಾಂತ ಕ್ರಾಂತಿಕಾರಕ ಬದಲಾವಣೆಯನ್ನು ಮಾಡಬಲ್ಲದೆಂದು ಬಯಸುವದು ನಿರರ್ಥಕವೇ ಸೈ. ನೆರೆ ಪ್ರಾಂತಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ಏನೇ ಸಂಭವಿಸಿದರೂ ಓಡಿಸಾ ಮಾತ್ರ ಜವಳಿ ಉತ್ಪಾದನೆಯ ಸಂಬಂಧದಲ್ಲಿ ತನ್ನದೇ ಆದ ಧೋರಣವನ್ನು ಗೊತ್ತುಪಡಿಸಿಕೊಳ್ಳಬೇಕೆಂದು ಹೇಳುವದು ಸಯುಕ್ತಿಕವಾಗಲಾರದೆಂದು ನನಗನಿಸುತ್ತದೆ.

ಮೊದಲನೆ ಪರಿಚ್ಛೇದದಲ್ಲಿ ನೀವು ಹೇಳಿದ ತತ್ವಕ್ಕೆ ಒಪ್ಪುವ ನಾವು ಪ್ರಾಂತಿಕ ಸರಕಾರವೆಂದು ಇಡೀ ಪ್ರಾಂತದ ವ್ಯವಹಾರ್ಯ ಸಮಸ್ಯೆಗಳನ್ನು ಎಂತು ಬಿಡಿಸಬಲ್ಲೆವೆಂಬುದರ ವಿವರಗಳನ್ನು ಸೂಚಿಸಿದರೆ ಸಹಾಯಕವಾಗಬಲ್ಲುದು. ಇಲ್ಲದಿದ್ದರೆ ಒಂದೇ ಬಗೆಯ ಟೀಕೆ ಮಾಡುವದರಿಂದ ಯಾವ ಉದ್ದೇಶವೂ ಸಾಧಿಸಲಾರದು.

ಮೇಲೆ ಉಲ್ಲೇಖಿಸಿದ ಓಡಿಸಾ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಧೋರಣ ಈ ರೀತಿಯಿದೆ.

"ಈಗಿನಂತೆ ಸ್ಪರ್ಧೆ ಮತ್ತು ದೊಡ್ಡ ಪ್ರಮಾಣದ ಕೇಂದ್ರೀಕೃತ ಉತ್ಪಾದನೆಯ ತಳಹದಿಯ ಮೇಲೆ ಸ್ಥಾಪಿತವಾದ ಸಧ್ಯದ ಹಣಕಾಸಿನಪದ್ಧತಿಯಬದಲು ರಾಟಿ ಮತ್ತು ಗ್ರಾಮೋದ್ಯೋಗಗಳ ಸ್ವಾವಲಂಬ ಗ್ರಾಮೀಣ ಆರ್ಥಿಕ ರಚನೆಯನ್ನು ಸಂಸ್ಥಾಪಿಸುವಲ್ಲಿ ಕಾಂಗ್ರೆಸ ಪಕ್ಷಕ್ಕೆ ವಿಶ್ವಾಸವಿದೆ. ಗಾಂಧೀಜಿಯವರು ಹೇಳುವಂತೆ ಸಮಾಜ-ಆರ್ಥಿಕ ರಚನೆಯಲ್ಲಿ ತೀವ್ರ ಕ್ರಾಂತಿಯಾಗದಿದ್ದರೆ ಜಾಗತಿಕ ಶಾಂತಿಯು ತನಗಾಗಿಯೇ ಉಳಿಯುವದೆಂಬುದು ಪಕ್ಷಕ್ಕೆ ಸಂಪೂರ್ಣ ಮನವರಿಕೆಯಾಗಿದೆ. ಅದೇ ಕಾಲಕ್ಕೆ ಈ ಉದ್ದೇಶ ಸಾಧನೆಗಾಗಿ ಪ್ರಚಂಡ ತಾಳ್ಮೆ ಮತ್ತು ದೀರ್ಘ ಪ್ರಯತ್ನ ಅವಶ್ಯವೆಂದೂ ಇದೇನೂ ಕೆಲತಿಂಗಳಗಳ ಇಲ್ಲವೆ ವರುಷಗಳ ಮಾತಲ್ಲೆಂದೂ ಪಕ್ಷವು ಕಂಡುಹಿಡಿದಿದೆ. ಈ ಪ್ರಚಂಡ ಕಾರ್ಯದಲ್ಲಿ ಸರಕಾರ ಮತ್ತು ರಾಷ್ಟ್ರೀಯಸಂಸ್ಥೆ ಜನತೆಯಉತ್ಸಾಹಶಕ್ತಿಯನ್ನುದ್ರೇಕಿಸಲು ಸಂಪೂರ್ಣವಾಗಿ ಸಹಕರಿಸುವದಾದರೆ ಈ ಹೊಸ ಸಾಮಾಜಿಕ ರಚನೆಯನ್ನು ಸಂಪೂರ್ಣವಾಗಿ ಸ್ಥಾಪಿಸಲು ೧೫-೨೦ ವರುಷ ಹತ್ತುವವೆಂದು ಪಕ್ಷದ ಅಭಿಪ್ರಾಯವಾಗಿದೆ. ಸರಕಾರವೊಂದೇ ಈ ವಿಷಯದಲ್ಲಿ ವಿಧಾಯಕ ಇಲ್ಲವೆ ವಿಧ್ವಂಸಕ ಸ್ವರೂಪದ ಬದಲಾವಣೆಯನ್ನು ಮಾಡಲು ಪ್ರಯತ್ನಿಸಿದರೆ ಅದು ನಿಷ್ಫಲವಾಗುವದು ನಿಶ್ಚಿತ. ಈ ವಿಶಾಲದೃಷ್ಟಿಯನ್ನಿಟ್ಟುಕೊಂಡು ಸಮಿತಿಯು ಪ್ರಾಂತದಲ್ಲಿಯ ಗಿರಣಿಗಳಲ್ಲಿ ಬಟ್ಟೆ ಉತ್ಪಾದನೆಯನ್ನು ಪೂರ್ಣವಾಗಿ ನಿಲ್ಲಿಸಿ ಬಿಡುವ ಪ್ರಶ್ನೆಯನ್ನು ವಿಚಾರಿಸಿತು. ಇದೇ ದೃಷ್ಟಿಯಿಂದ ಪ್ರಾಂತಕ್ಕೆ ದೊರೆತ ಕದಿರುಗಳಿಂದ ಜವಳಿ ಗಿರಣಿಗಳ ಸಂಸ್ಥಾಪನೆಯನ್ನೂ ಸಮಿತಿಯು ವಿಚಾರಿಸಿತು.

ಪಕ್ಷದಲ್ಲಿ ಈ ವಿಷಯದ ಕೂಲಂಕಷ ಚರ್ಚೆಯಾಗಿ ಈ ಸಂಧಿಕಾಲದಲ್ಲಿ ಪ್ರಾಂತವು ತನ್ನ ಬೇಡಿಕೆಗಳನ್ನೆಲ್ಲ ಕೈನೂಲಿನ ಕೈಮಗ್ಗದ ಬಟ್ಟೆಗಳಿಂದ ಪೂರೈಸಲು ಸಮರ್ಥವಾಗುವವರೆಗೆ ಮುಂಬಯಿ ಅಹಮ್ಮದಾಬಾದ ಮೊದಲಾದ ಕಡೆಯ ಗಿರಣಿ ಬಟ್ಟೆಗಳನ್ನವಲಂಬಿಸದೆ, ಪ್ರಾಂತಿಕ ಸರಕಾರದ ನೇತೃತ್ವದಲ್ಲಿ ಸ್ಥಾಪಿತವಾಗುವ ಜವಳಿ ಗಿರಣಿಗಳಿಂದಲೆ ಜವಳಿಬೇಡಿಕೆಗಳನ್ನು ನಿರ್ವಹಿಸಿಕೊಳ್ಳುವದು ಇಷ್ಟವೆಂಬ ನಿರ್ಧಾರಕ್ಕೆ ಬಂತು. ಉಳಿದ ಪ್ರಾಂತಗಳು ವಿಶೇಷತಃ ಕಾಂಗ್ರೆಸ್ ಪ್ರಾಂತಗಳು ಜವಳಿ ಗಿರಣಿ ಸ್ಥಾಪನೆಯ ಸಂಬಂಧದಲ್ಲಿ ಪ್ರತಿಬಂಧಕ ಧೋರಣವನ್ನು ವಹಿಸಲು ಒಪ್ಪಿದರೆ ಅಥವಾ ಈಗ ದೇಶದಲ್ಲಿದ್ದ ಮತ್ತು ಸ್ಥಾಪಿತವಾಗಲಿರುವ ಗಿರಣಿಗಳು ಸರಕಾರದ ನಿಯಂತ್ರಣದಲ್ಲಿ ಸಂಪೂರ್ಣ ರಾಷ್ಟ್ರೀಕರಣ ಹೊಂದಿದರೆ ಹೊಸ ಗಿರಣಿಗಳ ಸ್ಥಾಪನೆಯನ್ನು ಪ್ರತಿಬಂಧಿಸಲು ಕಾಂಗ್ರೆಸ ಪಕ್ಷವು ತನ್ನ ಶಕ್ತಿಮೀರಿ ಪ್ರಯತ್ನಿಸುವದೆಂಬುದನ್ನು ಪಕ್ಷವು ಸ್ಪಷ್ಟಪಡಿಸಿತು."

ಅವುಗಳ ಸಂಬಂಧದಲ್ಲಿ ಕೆಳಗಿನ ಉತ್ತರವನ್ನು ಕಳಿಸಿದ್ದಾಗಿದೆ.

೧೯೪೭ ನೇ ಫೆಬ್ರುವರಿ ೩ ರ ನಿಮ್ಮ ಪತ್ರದಲ್ಲಿ ಪ್ರಾಂತದ ಜವಳಿಧೋರಣದ ಸಂಬಂಧದಲ್ಲಿ ನೀವು ಕಳಿಸಿದ ಸ್ಪಷ್ಟೀಕರಣಕ್ಕೆ ಋಣಿಯಾಗಿರುವೆ. ನಾನು ಟೀಕಿಸಿದ್ದಲ್ಲ ನಿಮ್ಮಮೇಲೆಯೇ ಇದೆಂಬುದಾಗಿ ನೀವು ಭಾವಿಸಿ ನಿಮ್ಮಮೇಲಿನ ಹೊಣೆಗಾರಿಕೆಯನ್ನು ಹಾರಿಸಿಕೊಳ್ಳಲು ನೀವು [illegible]ಕಾರವಹಿಸಿದ ತಾರೀಖು ಮುಂತಾದವುಗಳನ್ನು ಕೊಡುವ ತೊಂದರೆ ತೆಗೆದುಕೊಂಡಿರುವಿರೆಂದು ನನಗನಿಸುತ್ತದೆ.

ಪ್ರಚಾರಕ್ಕೆ ನಾನು ಮರಳು ಹೋಗಿ ಆ ರೀತಿ ಟೀಕೆ ಮಾಡಿದೆನೆಂದೂ ನೀವು ತಿಳಿದುಕೊಂಡಂತೆ ತೋರುತ್ತದೆ.

ಯಾರೊಬ್ಬರಮೇಲೆಯೆ ಹೊಣೆಗಾರಿಕೆಯನ್ನು ಹೊರಿಸಬೇಕೆಂಬ ವಿಚಾರ ನನ್ನ ಕಲ್ಪನೆಯಲ್ಲಿ ಕೂಡ ಇರಲಿಲ್ಲ. ಕಾಂಗ್ರೆಸ್ಸಿನ ಹೆಸರು ಕೂಡ ನಾನು ಉಲ್ಲೇಖಿಸಿರಲಿಲ್ಲ. ಓಡಿಸಾ ಸರಕಾರವೆಂದ ನಾನು ಉಲ್ಲೇಖಿಸಿದೆ. ಆ ಬಗೆಯ ಧೋರಣೆಯನ್ನು ಸ್ವೀಕರಿಸುವಾಗ ಅಧಿಕಾರದಲ್ಲಿದ್ದ ಸರಕಾರವೆಂದು ಅದರ ಅರ್ಥವಾಗುವದು ಸ್ವಾಭಾವಿಕ. ಪ್ರಚಾರ ಮಾಡುವವರೆಗೂಡ ನನ್ನ ಸಂಬಂಧವಿರುವದಿಲ್ಲ. ಇಂಡಿಯನ್ ಫಾಯನನ್ಸ 'ಮತ್ತು 'ದಿ ಈಸ್ಟರ್ನ ಎಕಾನಮಿಸ್ಟ'ಗಳಂಥ ಹೊಣೆಗಾರ ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಕಂಪನಿಯ ಅಧಿಕೃತ ಪ್ರಾಸ್ಪೆಕ್ಟಸ್‌ದಿಂದ ನಾನು ಸುದ್ದಿಸಂಗತಿಗಳನ್ನು ತಿಳಿದುಕೊಂಡೆ. ಪ್ರಾಸ್ಪೆಕ್ಟಸ್ ಅಧಿಕೃತ ಪತ್ರಿಕೆಯಾಗಿದ್ದು ಅರೆ ಸರಕಾರಿಯಾಗಿದೆ.

ಸರಕಾರದಲ್ಲಿ ಆದ ಬದಲಾವಣೆಯನ್ನನುಲಕ್ಷಿಸಿ ಪ್ರಾಂತಕ್ಕೆ ಕೊಡಲ್ಪಟ್ಟ ಕದಿರುಗಳನ್ನು ರದ್ದುಪಡಿಸಬೇಕೆಂದು ಪ್ರಾಂತಿಕ ಸರಕಾರ ಹಿಂದುಸ್ಥಾನ ಸರಕಾರಕ್ಕೆ ತಿಳಿಸಬೇಕಾಗಿತ್ತೆಂದು ನಿಮ್ಮ ಸ್ಪಷ್ಟೀಕರಣದಲ್ಲಿ ಉಲ್ಲೇಖಿಸಿ ನೀವೇ ಹೊಣೆಗಾರಿಕೆಯನ್ನು ಹೊತ್ತುಕೊಂಡಿರುವಿರಿ. ಆದರೆ ಹೀಗೆಮಾಡಲಿಲ್ಲ. ನೀವು ಹೀಗೆ ಮಾಡಿದ್ದರೆ ಪ್ರತಿಕ್ರಿಯೆಗಳೇನಾಗುತ್ತಿದ್ದುವೆಂಬುದು ಇಲ್ಲಿ ಮಹತ್ವದ್ದಲ್ಲ. ಎರಡನೆಯವರು ತಪ್ಪು ಮಾಡುವರೆಂದು ಮೊದಲೆ ಭಾವಿಸಿ ನಾವು ತಪ್ಪು ಮಾಡಲು ಸಿದ್ಧರಾಗುವದು ಸರಿಯಾಗಲಾರದು.

ಓಡಿಸಾ ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ಸ್ವೀಕರಿಸಿದ ಧೋರಣವನ್ನು ನೋಡಿದರೆ ಅದು ಖಾದಿಯ ಬಗ್ಗೆ ಕೇವಲ ಶಾಬ್ದಿಕ ಸಹಾನುಭೂತಿಯನ್ನು ತೋರಿಸುತ್ತದೆಯಲ್ಲದೆ ಅದರಲ್ಲಿ ಆತ್ಯಂತಿಕ ವಿಶ್ವಾಸವನ್ನು ವ್ಯಕ್ತಪಡಿಸುವದಿಲ್ಲೆಂಬುದು ಗೊತ್ತಾಗುವದು. ಖಾದಿ ಸ್ವಾವಲಂಬನಕ್ಕೆ ಅಖಿಲ ಭಾರತ ಜವಳಿ ಧೋರಣ ಅವಶ್ಯವಾಗಿಲ್ಲ. ವಿಶೇಷತಃ ಓಡಿಸಾದಂಥ ಪ್ರಾಂತದಲ್ಲಿಯಂತೂ ಅದು ಅವಶ್ಯವೇ ಇಲ್ಲ. ಏಕೆಂದರೆ ಓಡಿಸಾದಲ್ಲಿ ವಿಶಿಷ್ಟ ಹಿತಸಂಬಂಧವುಳ್ಳವರ ಸಂಖ್ಯೆ ಹೆಚ್ಚಿಗಿಲ್ಲ. ಬಟ್ಟೆ ಸ್ವಾವಲಂಬನವೇ ಘಟಕವೆಂದರೆ ಮನೆಯು. ಬಳಿಕ ಹಳ್ಳಿಯು... ಪರಿಸ್ಥಿತಿ ಹೀಗಿರುವಾಗ ಖಾದಿಕಾರ್ಯಕ್ರಮವನ್ನು ಕೈಕೊಳ್ಳುವಾಗ ಘಟಕದಅವಶ್ಯಕತೆಯಿಲ್ಲ. ಅದುದರಿಂದ ಜವಳಿ ಉತ್ಪಾದನೆಯಲ್ಲಿ ಪ್ರಾಂತಿಕ ತಳಹದಿಯನ್ನಿಟ್ಟುಕೊಂಡು ಧೋರಣವನ್ನು ನಿರ್ಧರಿಸಲಾಗದು ಎಂಬುದಕ್ಕೆ ನಾನು ಒಪ್ಪಲಾರೆ. ನನ್ನ ಬರೆಹದ ಮೊದಲನೇ ಪರಿಚ್ಛೇದದಲ್ಲಿ ಹೇಳಿದ ತತ್ವಕ್ಕೆ ನಿಮ್ಮ ಒಪ್ಪಿಗೆಯಿದ್ದರೆ-ಒಪ್ಪಿಗೆಯಿದೆಂದು ನೀವು ಬರೆಯುವಿರಿ—ಖಾದಿಯು ಸ್ವಾವಲಂಬನ ಕಾರ್ಯಕ್ರಮವನ್ನು ಕೈಕೊಳ್ಳುವದವಶ್ಯವೆಂಬುದು ತಾನೇ ಸಿದ್ಧವಾಗುವದು. ಬಟ್ಟೆ ಕೊರತೆಯನ್ನು ಹೋಗಲಾಡಿಸಲು ಅದು ನಿಶ್ಚಿತ ಮತ್ತು ತೀವ್ರವಾದ ಉಪಾಯವಾಗಿದೆ.

ಓಡಿಸಾದಲ್ಲಿ ಆತ್ಯಂತಿಕ ದಾರಿದ್ರ್ಯ ಮತ್ತು ನಿರುದ್ಯೋಗತೆ ಇರುವದರಿಂದ ಉಳಿದ ಪ್ರಾಂತಗಳಿಗಿಂತ ಅಲ್ಲಿ ಇದು ಹೆಚ್ಚು ಅವಶ್ಯವಾಗಿದೆ. ಯಾವದೊಂದು ಆರ್ಥಿಕ ಕಾರ್ಯಕ್ರಮದ ಉದ್ದೇಶ ಮೂರು ಬಗೆಯದಾಗಿರುವದು.

—೧೦ನೇ ಪುಟಕ್ಕೆ

ವಿಧಾಯಕ ಕಾರ್ಯಕ್ರಮ

("ಹರಿಜನ"ದಿಂದ)

[ಅಲಹಾಬಾದದಲ್ಲಿ ಫೆಬ್ರುವರಿ ೨೨—೨೪ ಕ್ಕೆ ಜರೆಗಿದ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರ ಮತ್ತು ಕಾರ್ಯದರ್ಶಿಗಳ ಸಮ್ಮೇಲನದಲ್ಲಿ ಈ ಕೆಳಗಿನ ಗೊತ್ತುವಳಿಗಳು ಸ್ವೀಕರಿಸಲ್ಪಟ್ಟವು.

ವಿಧಾಯಕ ಕಾರ್ಯಕ್ರಮವನ್ನು ಕುರಿತ ಈ ಗೊತ್ತುವಳಿಗಳನ್ನು ಕಾಂಗ್ರೆಸ್ ಕಾರ್ಯಸಮಿತಿಯ ಮುಂದೆ ಇರಿಸಲಾಗುವದು. ಅದರಲ್ಲಿ ಅವಶ್ಯಕಂಡ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿ ಕಾರ್ಯಸಮಿತಿ ಅದನ್ನು ಕಾರ್ಯರಂಗಕ್ಕಿಳಿಸಲು ದೇಶದ ಮುಂದೆ ಮಂಡಿಸುವದೆಂದು ನಿರೀಕ್ಷಿಸಲಾಗಿದೆ. —ಜೆ. ಸಿ. ಕು]

೧. ಅ. ಭಾ. ಚ. ಸಂಘ, ಅ. ಭಾ. ಗ್ರಾಮೋದ್ಯೋಗ ಸಂಘ ಮತ್ತು ಹಿಂದುಸ್ತಾನೀ ತಾಲಿಮೀ ಸಂಘ ಇವುಗಳು ಕಾಂಗ್ರೆಸ್ಸೇ ನಿರ್ಮಿಸಿದ ಸಂಸ್ಥೆಗಳಾಗಿದ್ದು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅವು ಕಾಂಗ್ರೆಸ್ಸು ಹಾಕಿಕೊಟ್ಟ ರೀತಿಯಲ್ಲಿಯೆ ಕೆಲಸ ಮಾಡುತ್ತ ಬಂದಿವೆಯೆಂಬದನ್ನು ಈ ಸಮ್ಮೇಲನ ಕಾರ್ಯಸಮಿತಿಯ ಗಮನಕ್ಕೆ ತರುತ್ತದಲ್ಲದೆ, ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಯೋಜನೆಗಳನ್ನು ವಿಸ್ತಾರ ಪ್ರಮಾಣದಲ್ಲಿ ಆಚರಣೆಗೆ ತರುತಿರುವದರಿಂದ, ಕಾಲಕಾಲಕ್ಕೆ ಕಾಂಗ್ರೆಸ್ಸು ಈ ಸಂಬಂಧದಲ್ಲಿ ವಿಧಿಸುತ್ತ ಬಂದಿರುವ ಕಾರ್ಯಕ್ರಮಗಳನ್ನು ಕಾರ್ಯಕಾರಿಯಾಗಿ ಮಾಡಬೇಕೆಂದೂ ಈ ಭಾಗದಲ್ಲಿ ಮೇಲ್ಕಂಡ ಸಂಸ್ಥೆಗಳು ಗಳಿಸಿದ ಅನುಭವಗಳನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಬೇಕೆಂದೂ ಕಾಂಗ್ರೆಸ್ಸಿಗೆ ಅಧೀನರಾಗಿರುವ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಮಂತ್ರಿಗಳಿಗೆ ಕಾರ್ಯಸಮಿತಿ ಅಪ್ಪಣೆ ಕೊಡಬೇಕೆಂದು ಈ ಸಮ್ಮೇಲನ ಅಭಿಪ್ರಾಯ ಪಡುತ್ತದೆ.

ವಿಧಾಯಕ ಕಾರ್ಯಕ್ರಮದ ಮುಖ್ಯ ಉದ್ದೇಶವೆಂದರೆ ತಮ್ಮ ರಾಜಕೀಯ, ಸಾಮಾಜಿಕ, ಆರ್ಥಿಕ ಜೀವನವನ್ನು ತಾವೇ ಸಹಕಾರಿ ಪದ್ಧತಿಯಂತೆ ಸಂಘಟಿಸಿಕೊಳ್ಳುವಂತೆ ಜನರಲ್ಲಿ ಸ್ವಯಂಪ್ರೇರಣೆಯನ್ನುಂಟುಮಾಡುವದು ಮತ್ತು ತನ್ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿಯೂ ಸ್ವಯಂಪೂರ್ಣರನ್ನಾಗಿಯೂ ಮಾಡುವದು.

ಆದುದರಿಂದ, ಕೆಳಗೆ ಹೇಳುವ ವಿಧಾಯಕ ಕಾರ್ಯಕ್ರಮ ಸಮಿತಿಗಳ ಪ್ರಾಥಮಿಕ ಕರ್ತವ್ಯ ಈ ಪ್ರೇರಣೆಯನ್ನು ಉಂಟುಮಾಡುವದಾಗಿರತಕ್ಕದ್ದು. ಸರಕಾರಗಳ ಸಹಕಾರವನ್ನು ಈ ಸಮಿತಿಗಳು ಸ್ವಾಗತಿಸಬಹುದಾದರೂ ಕಾರ್ಯಕ್ರಮಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜನರ ಸ್ವಂತ ಪ್ರಯತ್ನಗಳಿಂದಲೇ ಪೂರ್ತಿಗೊಳಿಸಲು ಹೆಣಗಬೇಕು.

೨. ಕೇಂದ್ರ ವಿಧಾಯಕ ಕಾರ್ಯಕ್ರಮ ಸಮಿತಿಯೆಂಬ ಚಿಕ್ಕ ಸಮಿತಿಯೊಂದನ್ನು ನೇಮಿಸಬೇಕೆಂದೂ ಈ ಕೆಳಗಿನ, ಅಂದರೆ ಖಾದಿ, ಗ್ರಾಮೋದ್ಯೋಗ, ಮೂಲ ಶಿಕ್ಷಣ, ಹರಿಜನ ಕಾರ್ಯ ಮತ್ತು ಅಕ್ಷರ ಪ್ರಚಾರ ಈ ಅಂಗಗಳ ನಿರ್ವಾಹದಲ್ಲಿ ಕಾಂಗ್ರೆಸ್ ಸಂಸ್ಥೆಗೂ ಜನತೆಗೂ ಸಲಹೆ ಕೊಡುವ ಕೆಲಸವನ್ನು ಅದಕ್ಕೆ ಒಪ್ಪಿಸಬೇಕೆಂದೂ ಈ ಸಮ್ಮೇಲನ ಕಾರ್ಯಸಮಿತಿಗೆ ಕೇಳಿಕೊಳ್ಳುತ್ತದೆ.

ಸಮಿತಿಯ ಕಾರ್ಯವನ್ನು ಸರಳವಾಗಿ ಮಾಡಲು ಈ ಸಮ್ಮೇಲನ ಈ ಕೆಳಗಿನಂತೆ ಶಿಫಾರಸು ಮಾಡುತ್ತದೆ:

(ಅ) ಅ. ಭಾ. ಕಾಂ. ಕಾರ್ಯಾಲಯದಲ್ಲಿ ವಿಧಾಯಕ ಕಾರ್ಯಕ್ರಮ ಶಾಖೆಯ ಕೆಲಸಕ್ಕೆ ಹೊಣೆಗಾರನಾದ ಶಾಶ್ವತ ಕಾರ್ಯದರ್ಶಿಯೊಬ್ಬನು ಇರತಕ್ಕದ್ದು.

(ಬ) ಪ್ರತಿಯೊಂದು ಪ್ರಾಂತದಲ್ಲಿಯೂ ಆ ಪ್ರಾಂತದಲ್ಲಿ ವಿಧಾಯಕ ಕಾರ್ಯ ನಡೆಸಲು ಒಂದೊಂದು ಚಿಕ್ಕ ಸಮಿತಿಯಿರಬೇಕು. ಅದನ್ನು ಪ್ರಾಂತಿಕ ಕಾಂಗ್ರೆಸ ಸಮಿತಿಯೇ ಆರಿಸಬೇಕಲ್ಲದೆ ಅದರಲ್ಲಿ ಅ. ಭಾ. ಚ. ಸಂ, ಅ. ಭಾ. ಗ್ರಾ. ಉ. ಸಂ, ಹಿಂದುಸ್ತಾನಿ ತಾಲೀಮೀ ಸಂಘ ಇವುಗಳ ಪ್ರಾಂತಿಕ ಶಾಖೆಗಳ ಪ್ರತಿನಿಧಿಗಳೂ ಇರಬೇಕು. ಇತರ ಅಂಗಗಳ ನಿರ್ವಾಹದಲ್ಲಿ ಸಹಾಯಕರಾಗಬಹುದಾದ ಸದಸ್ಯರನ್ನು ಸೇರಿಸಿಕೊಳ್ಳಲು ಆ ಸಮಿತಿಗೆ ಸ್ವಾತಂತ್ರ್ಯವಿರತಕ್ಕದ್ದು.

ಅಂಥ ಪ್ರಾಂತಿಕ ವಿಧಾಯಕ ಕಾರ್ಯಕ್ರಮ ಸಮಿತಿಯಲ್ಲಿರುವ ವಿಧಾಯಕ ಸಂಸ್ಥೆಗಳ ಪ್ರತಿನಿಧಿಗಳಲ್ಲದ ಇತರ ಸಾಮಾನ್ಯ ಸದಸ್ಯರಲ್ಲಿ ಪ್ರತಿಯೊಬ್ಬನಿಗೂ ಕಾರ್ಯಕ್ರಮದ ನಿರ್ದಿಷ್ಟ ಅಂಗಗಳ ನಿರ್ವಹಣದ ಹೊಣೆ ಒಪ್ಪಿಸಬೇಕು.

(ಕ) ಪ್ರತಿಯೊಂದು ಪ್ರಾಂತಿಕ ಕಾಂಗ್ರೆಸ ಸಮಿತಿಯಲ್ಲಿಯೂ ಒಂದೊಂದು ವಿಧಾಯಕ ಕಾರ್ಯಕ್ರಮ ಶಾಖೆಯಿರಬೇಕು. ಅದರ ನಿರ್ವಾಹಕ್ಕೆ ಒಬ್ಬ ಇಡಿ ಹೊತ್ತಿನ ಕಾರ್ಯದರ್ಶಿಯಿರತಕ್ಕದ್ದು. ಅವನನ್ನು ಪ್ರಾಂತಿಕ ಕಾಂಗ್ರೆಸ ಸಮಿತಿಯ ಕಾರ್ಯಸಮಿತಿಯೊಡನೆ ವಿಚಾರಿಸಿ ಅ. ಭಾ. ಕಾಂ. ಸಮಿತಿಯೇ ನೇಮಿಸಬೇಕು. ಅವನಿಗೆ ಸಂಬಳ ಕೊಡಬೇಕಾಗಿದ್ದರೆ ಅ. ಭಾ. ಕಾಂ ಸಮಿತಿಯೇ ಕೊಡಬೇಕು. ಆದರೆ ಆ ಶಾಖೆಯ ಇತರ ವೆಚ್ಚಗಳನ್ನೂ ಕಾರ್ಯಕ್ರಮವನ್ನು ಸಾಗಿಸುವ ವೆಚ್ಚವನ್ನೂ ಪ್ರಾಂ. ಕಾಂ. ಸಮಿತಿಯೇ ನೋಡಿಕೊಳ್ಳತಕ್ಕದ್ದು.

(ಡ) ಪ್ರಾಂತದಲ್ಲಿ ಕಾರ್ಯಕ್ರಮವನ್ನು ಆಚರಣೆಗೆ ತರಲು ಅವಶ್ಯವಾದ ಸಂಸ್ಥೆಗಳನ್ನು ಪ್ರಾಂತಿಕ ವಿಧಾಯಕ ಕಾರ್ಯಕ್ರಮ ಸಮಿತಿಯೇ ನಿರ್ಮಿಸಬೇಕು.

(ಇ) ವಿಧಾಯಕ ಕಾರ್ಯಕ್ರಮದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಕಾರ್ಯಕರ್ತರನ್ನು ತರಬೇತುಗೊಳಿಸುವ ಸಂದರ್ಭದಲ್ಲಿ, ಅದನ್ನು ಅ. ಭಾ. ಚ. ಸಂ, ಅ. ಭಾ. ಗ್ರಾ. ಉ. ಸಂ. ಮತ್ತು ತಾಲಿಮಿ ಸಂಘ ಇವುಗಳ ಮುಖಾಂತರ ಮಾಡಬೇಕು. ಅದರ ವೆಚ್ಚವನ್ನು ಪ್ರಾಂತಿಕ ಸಮಿತಿಗಳು ಹೊರಬೇಕು.

೪ ಕೈಕೊಳ್ಳಲ್ಪಡಬೇಕಾದ ಕಾರ್ಯಕ್ರಮವೂ ಕಾರ್ಯಾಂಗಗಳೂ ಈ ಕೆಳಗಿನಂತಿರಬೇಕು:

(ಅ) ಖಾದಿ: ಖಾದಿಯ ಸ್ವಯಂಪೂರ್ಣತೆಯ ಭಾಗಕ್ಕಷ್ಟೆ ಕಾಂಗ್ರೆಸ್ ಉಪಸಮಿತಿ ತನ್ನ ಚಟುವಟಿಕೆಯನ್ನು ಸೀಮಿತಗೊಳಿಸಬೇಕು.

ಕಾರ್ಯಕ್ರಮದ ಪ್ರಾರಂಭವನ್ನು ೬-೪-೪೭ ಕ್ಕೆ ಮಾಡಿ, ೧೪-೪-೪೮ ರೊಳಗೆ ಅಂದರೆ ಮುಂದಿನ ವರ್ಷದ ರಾಷ್ಟ್ರೀಯ ಸಪ್ತಾಹದ ಕೊನೆಯೊಳಗೆ ಅ. ಭಾ. ಚ. ಸಂಘದವರು ಹಾಕಿಕೊಟ್ಟ ಲಕ್ಷಣಕ್ಕೆ ಸರಿಹೋಗುವ ೧ ಲಕ್ಷ ಹೊಸ ಸ್ವಾವಲಂಬಿ ನೂಲುವವರನ್ನು ಸಿದ್ಧಗೊಳಿಸುವದೇ ಗುರಿಯಾಗಿರತಕ್ಕದ್ದು.

(ಬ) * ಗ್ರಾಮೋದ್ಯೋಗಗಳು: ಆಹಾರ, ವಸ್ತ್ರ ಮತ್ತು ಇತರ ಜೀವನಾವಶ್ಯಕತೆಗಳ ಉತ್ಪಾದನೆ ಮತ್ತು ಬಳಕೆಗಷ್ಟೆ ಕಾಂಗ್ರೆಸ ಉಪಸಮಿತಿ ತನ್ನ ಕೆಲಸವನ್ನು ಸೀಮಿತಗೊಳಿಸಬೇಕು. ಅದಕ್ಕೋಸ್ಕರ, ಪ್ರತಿಯೊಂದು ಪ್ರಾಂ. ಕಾಂ. ಸಮಿತಿಯೂ ತನ್ನ ಅಧಿಕಾರ ಕ್ಷೇತ್ರದಲ್ಲಿ (ಒಂದು ಲಕ್ಷ ಜನರಿಗಿಂತ ಹೆಚ್ಚು ಇರದ) ಕೆಲ ಚಿಕ್ಕ ಪ್ರದೇಶಗಳನ್ನು ಆಯ್ದುಕೊಂಡು ಆ ಪ್ರದೇಶದಲ್ಲಿ ಸಮತೋಲ ಆಹಾರ ನಿಯಮಕ್ಕನುಸಾರವಾದ ಸಾಕಷ್ಟು ಆಹಾರವನ್ನು ಉತ್ಪಾದಿಸಿ ಆ ಪ್ರದೇಶವನ್ನು ಸ್ವಾವಲಂಬಿಯಾಗಿ ಮಾಡುವ ಪ್ರಯೋಗವನ್ನು ಆರಂಭಿಸಬೇಕು. ಗೋಸಂವರ್ಧನೆ ಮತ್ತು ಗೌಳಿಗವ್ಯವಸಾಯಕ್ಕೆ ಆ ಪ್ರದೇಶದಲ್ಲಿ ಅಷ್ಟೇ ಮಹತ್ವ ಕೊಡಬೇಕು.

ಇತರ ಗ್ರಾಮೋದ್ಯೋಗಗಳ ಸಂಬಂಧದಲ್ಲಿ, ಕೈಯಿಂದ ಆಹಾರ ಪರಿವರ್ತನೆ ಮಾಡುವದಕ್ಕೆ, ಮುಖ್ಯವಾಗಿ ಬೆಲ್ಲ ಮಾಡುವದು, ಗಾಣದ ಎಣ್ಣೆ, ಭತ್ತ ಕುಟ್ಟುವದು, ಹಿಟ್ಟು ಬೀಸುವದು, ಆಹಾರ ಸಂರಕ್ಷಣೆ ಮೊದಲಾದ್ದಕ್ಕೆ ಅಗ್ರಸ್ಥಾನ ಕೊಡತಕ್ಕದ್ದು.

* ಸೂ: "ಬ" ಅಂಗದ ವಿಷಯದಲ್ಲಿ ಸವಿಸ್ತಾರ ಯೋಜನೆಯನ್ನೊಳಗೊಂಡ A Plan for Rural Development ಎಂಬ ಶ್ರೀ ಜೆ. ಸಿ. ಕುಮಾರಪ್ಪನವರ ಪುಸ್ತಕ ನೋಡಿರಿ.

ಎಲ್ಲ ಕಾಂಗ್ರೆಸ್ ಸಮಿತಿಗಳೂ ಸಮಿತಿಗಳ ಸದಸ್ಯರೂ ಕೈಗಾರಿಕೆಯ ಸಾಮುಗ್ರಿಗಳನ್ನೇ—ಅವು ಅಲಭ್ಯವಿದ್ದ ಹೊರತು—ಉಪಯೋಗಿಸಬೇಕೆಂದು ನಿರೀಕ್ಷಿಸಲಾಗಿದೆ.

(ಕ) ಪ್ರತಿಯೊಂದು ಪ್ರಾಂತದಲ್ಲಿ ಕಡಿಮೆಯೆಂದರೆ ೫ ಮೂಲ ಶಾಲೆಗಳುಳ್ಳ ಒಂದು ನಿಬಿಡವಾದ ಪ್ರದೇಶವನ್ನು ಸಂಘಟಿಸಬೇಕೆಂದು ಪ್ರಾಂತಿಕ ಕಾಂಗ್ರೆಸ ಸಮಿತಿಗಳಿಗೆ ಸೂಚನೆ ಕೊಡಬೇಕು. ಸಾಧ್ಯವಿದ್ದರೆ ಆ ಪ್ರದೇಶದಲ್ಲಿ ಒಂದು ಶಿಕ್ಷಕರ ತರಬೇತಿ ಕೇಂದ್ರವನ್ನು ಸ್ಥಾಪಿಸಬೇಕು. ಈ ಕಾರ್ಯ ಹಿಂದುಸ್ತಾನಿ ತಾಲಿಮಿ ಸಂಘದ ನಿರ್ದೇಶದಂತೆ ನಡೆಸಲ್ಪಡತಕ್ಕದ್ದು.

(ಡ) ಪ್ರತಿಯೊಂದು ಪ್ರಾಂತಿಕ ಕಾಂಗ್ರೆಸ್ ಸಮಿತಿಯೂ ಅಕ್ಷರ ಪ್ರಚಾರ ಕಾರ್ಯವನ್ನು ಕೈಕೊಂಡು ಸಾಧ್ಯವಿದ್ದಷ್ಟು ವಿಶಾಲ ಪ್ರಮಾಣದಲ್ಲಿ ಆ ಕೆಲಸವನ್ನು ನಡೆಸಬೇಕು. ಮತ್ತು ಮಾಡಿದ ಕೆಲಸದ ದಾಖಲೆಗಳನ್ನಿಡಬೇಕು. ಸಾಕ್ಷರತಾ ಪ್ರಚಾರದ ಜೊತೆಗೆ ಸಾಮೂಹಿಕ ಶಿಕ್ಷಣ ಕಾರ್ಯಕ್ರಮಗಳ ಮೂಲಕ ಜನತೆಯಲ್ಲಿ ರಾಷ್ಟ್ರೀಯ ಜಾಗ್ರತಿಯನ್ನು ಉಂಟುಮಾಡಲು ಪ್ರಯತ್ನಿಸಬೇಕೆಂಬದನ್ನು ಲಕ್ಷದಲ್ಲಿಡಬೇಕು.

(ಇ) ಪ್ರತಿಯೊಂದು ಪ್ರಾಂ. ಕಾಂ. ಸಮಿತಿಯೂ ಹರಿಜನರು ಆದಿವಾಸಿಗಳು ಮತ್ತಿತರ ದುರ್ಲಕ್ಷ್ಯಕ್ಕೆ ಗುರಿಯಾದ ಜನರ ಸಾಮಾಜಿಕ ಅಪಾತ್ರತೆಗಳನ್ನು ದೂರಮಾಡಿ ಅವರ ನಾಗರಿಕ ಹಕ್ಕುಗಳನ್ನು ಸ್ಥಾಪಿಸಿಕೊಡುವ ಕೆಲಸದಲ್ಲಿ ಮಗ್ನವಾಗಿರಬೇಕು. ಸಾಮಾಜಿಕ ಸಮಾನತೆಗಾಗಿ ಜನಮತವನ್ನು ಸಾಧಿಸುವಗೋಸ್ಕರ ಮೇಲೆ ಹೇಳಿದ ಪಂಗಡಗಳ ಜನರನ್ನು ಸಮಾಜದಲ್ಲಿ ಸಮಾನರಂತೆ ನಡೆಸಿಕೊಳ್ಳುವದಾಗಿ ಬಹಿರಂಗವಾಗಿ ಪ್ರಮಾಣಮಾಡುವ ಸಮಾರಂಭಗಳೇ ಮೊದಲಾದವುಗಳನ್ನು ಏರ್ಪಡಿಸುವದೂ ಅವಶ್ಯ.

(ಫ) ಒಕ್ಕಲಿಗರು: ಇದೊಂದು ಪ್ರಮುಖ ಶಾಖೆಯಾಗಿರತಕ್ಕದ್ದು. ಅದರ ಕರ್ತವ್ಯಗಳಲ್ಲಿ, ಒಕ್ಕಲಿಗ ವರ್ಗಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ಅಭ್ಯಸಿಸುವದೂ ಅವುಗಳನ್ನು ಪರಿಹರಿಸುವಗೋಸ್ಕರ ಮತ್ತು ಒಕ್ಕಲಿಗರನ್ನು ತಮ್ಮ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಹಿತಸಾಧನೆಗಾಗಿ ಸಂಘಟಿಸುವಗೋಸ್ಕರ ಜಿಲ್ಲಾ ಮತ್ತು ಇತರ ಅಧೀನ ಕಾಂಗ್ರೆಸ್ ಸಂಸ್ಥೆಗಳಿಗೆ ಅವಶ್ಯಕ ನಿರ್ದೇಶಗಳನ್ನು ಕಳಿಸುವದೂ ಸೇರಿದೆ.

ಪ್ರಸಿದ್ಧಿ:- ಈ ಶಾಖೆಯ ಕೆಲಸವು ಮಹತ್ವದಲ್ಲಿಯೂ ಪರಿಮಾಣದಲ್ಲಿಯೂ ದಿನಹೋದಂತೆ ಬೆಳೆಯುವದು. ಅದು ಬೇರೆ ಬೇರೆ ವಿಷಯಗಳಲ್ಲಿ ಅ ಭಾ. ಕಾಂ. ಸಮಿತಿಗೆ ವರದಿಗಳನ್ನು ಸಿದ್ಧಗೊಳಿಸುವದು; ಒಂದು ಮಾಸಿಕ ಪತ್ರವನ್ನು ನಡೆಸಿ ಅದರಲ್ಲಿ ಕೇವಲ ಗೊತ್ತುವಳಿ ಮತ್ತು ತೀರ್ಮಾನಗಳನ್ನು ಮಾತ್ರವಲ್ಲದೆ ಕಾಂಗ್ರೆಸ್ ಸಮಿತಿಗಳಿಗೂ ಕಾರ್ಯತತ್ಪರ ಕಾರ್ಯಕರ್ತರಿಗೂ ಉಪಯೋಗ ಬೀಳುವ ವಿಷಯಗಳನ್ನೂ ಕೊಡುವದು; ಈ ಬಗ್ಗೆ ಇತರ ಸಾಹಿತ್ಯವನ್ನೂ ನಿರ್ಮಿಸುವದು. ಇನ್ನು ಪ್ರತಿಪ್ರಾಂತಕ್ಕೂ ಅದರದೇ ವಿಶೇಷ ಸಮಸ್ಯೆಗಳಿವೆ. ಅವುಗಳನ್ನು ನಮ್ಮ ಕಾರ್ಯಕರ್ತರು ಸರಿಯಾಗಿ ತಿಳಿದುಕೊಳ್ಳುವದು ಅವಶ್ಯ. ಈ ಸಮಸ್ಯೆಗಳನ್ನು ಕುರಿತು ಚಿಕ್ಕ ಚಿಕ್ಕ ಪುಸ್ತಿಕೆಗಳನ್ನು ಹೊರಡಿಸತಕ್ಕದ್ದು. ಕೆಳಗಿನ ಸಮಿತಿಗಳಲ್ಲಿಯೂ ಈ ವಿಭಾಗದ ಪ್ರತಿರೂಪಗಳಿರುವದು ಅಗತ್ಯ.

ಕಾಂಗ್ರೆಸ ಸೇವಾದಲ:- ಒಳ್ಳೆ ವಿಶಾಲವಾಗಿ ಹಬ್ಬಿದ ಸ್ವಯಂಸೇವಕ ಸಂಘಟನೆಯ ಅವಶ್ಯಕತೆ ಸ್ವಯಂಸಿದ್ಧವಾಗಿದೆ. ಸ್ವಯಂಸೇವಕರು ಆರೆಹೊತ್ತಿನ ವಿಧಾಯಕ ಕಾರ್ಯಕರ್ತರಾಗಿರಬೇಕು. ಅವರಿಗೆ ನಾಗರಿಕತ್ವದ ತರಬೇತಿ ಕೊಡಬೇಕು. ಸೇವಾದಲ ಕಾರ್ಯದ ವಿವಿಧ ಅಂಗಗಳಿಗೆ ಲಕ್ಷ್ಯವೀಯುವುದು ಅವಶ್ಯವಾಗಿದೆ.

ಅಲ್ಪ ಸಂಖ್ಯಾಕರು:— ಅಲ್ಪ ಸಂಖ್ಯಾಕರ ಮತ್ತು ಹಿಂದುಳಿದ ಪ್ರದೇಶಗಳ ಹಾಗು ವರ್ಗಗಳ ಸಮಸ್ಯೆಗಳು ನಮಗೆ ಮೇಲಿಂದ ಮೇಲೆ ಎದುರಾಗುತ್ತಿವೆ. ಈ ಸಮಸ್ಯೆಗಳನ್ನು ಎಚ್ಚರದಿಂದ ಅಭ್ಯಸಿಸಿ ವಿದ್ಯಮಾನಗಳನ್ನು ತಲೆಹಾಕಬೇಕು. ವಿಶಿಷ್ಟ ದೂರುಗಳ ನಿವಾರಣೆಗಾಗಿ ಯಾವ ವ್ಯವಹಾರ್ಯ ಉಪಾಯಗಳನ್ನು ಕೈಕೊಳ್ಳಬೇಕು ಮತ್ತು ಈ ಸಂಬಂಧದಲ್ಲಿ ಏನು ಸಾಹಿತ್ಯವನ್ನು ಪ್ರಕಟಿಸಬೇಕು ಎಂಬುದನ್ನು ಈ ಶಾಖೆಯವರು ವಿಚಾರ ಮಾಡಬೇಕು.

ಕೂಲಿಕಾರರು:— ಈ ಕಠೋರ ಸಮಸ್ಯೆಯನ್ನು ತ್ವರೆಯಿಂದ, ಕೌಶಲದಿಂದ, ತಿಳುವಳಿಕೆಯಿಂದ ಬಿಡಿಸುವ ಅವಶ್ಯಕತೆ ಬಹಳ ಅವಸರದ್ದು. ಕಾಂಗ್ರೆಸ್ಸು ತನ್ನ ಕೂಲಿಕಾರ ಧೋರಣೆಯನ್ನು ನಿಶ್ಚಿತಗೊಳಿಸಿದೆ. ಪ್ರಾಂ. ಕಾಂ. ಸಮಿತಿಗಳೀಗ ವ್ಯವಹಾರ್ಯವೂ ಪರಿಣಾಮಕರವೂ ಆದ ಕ್ರಮಗಳನ್ನು ಕೈಕೊಳ್ಳಬೇಕಾಗಿದೆ.

ಶಾಸನಸಭಾ ಸಂಪರ್ಕ:— ನಮ್ಮ ಶಾಸನಸಭಾ ಕಾರ್ಯ ಮತ್ತು ಅದರೊಡನೆ ಕಾಂಗ್ರೆಸ್ ಕೆಲಸಕ್ಕಿರುವ ಸಂಬಂಧದಿಂದ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಅವುಗಳ ಸಮಾಚಾರ ತೆಗೆದುಕೊಳ್ಳಲು ಒಂದು ಪ್ರತ್ಯೇಕ ಶಾಖೆಯೇ ಬೇಕು.

ಗುರುತು ಹಾಕಿಕೊಂಡ ಕಾರ್ಯಕ್ರಮ ಸರಿಯಾಗಿಯೂ ತ್ವರಿತವಾಗಿಯೂ ಸಾಗಬೇಕೆಂಬಾದರೆ, ನಮ್ಮ ಪ್ರಾಂತಿಕ ಮತ್ತು ಜಿಲ್ಲಾ ಸಮಿತಿಗಳು ಹಿಂದುಸ್ತಾನದ ಎಲ್ಲ ಹಳ್ಳಿಗಳಲ್ಲಿಯೂ ವಿಧಾಯಕ ಕಾರ್ಯಕ್ರಮದ ಗ್ರಾಮಸಮಿತಿಗಳನ್ನು ಸ್ಥಾಪಿಸುವದು ಅವಶ್ಯ. ನಮ್ಮ ಪುನಸ್ಸಂಘಟನೆಯ ಮೊದಲನೆ ವರ್ಷದಲ್ಲಿ ಪ್ರತಿಪ್ರಾಂತದಲ್ಲಿಯ ನೂರಕ್ಕಿಪ್ಪತ್ತೈದು ಹಳ್ಳಿಗಳಲ್ಲಿಯಾದರೂ ಪ್ರಬಲ ಹಾಗು ಸಮರ್ಥ ಪ್ರಾಥಮಿಕ ಸಮಿತಿಗಳು ಸ್ಥಾಪಿಸಲ್ಪಡುವವೆಂದು ಆಶಿಸಲಾಗಿದೆ.

ಈ ವ್ಯಾಪಕ ವಿಧಾಯಕ ಕಾರ್ಯಕ್ರಮವನ್ನು ಕಾಂಗ್ರೆಸ್ ಸಮಿತಿಗಳು ಕಾರ್ಯಕ್ಷಮ ಮತ್ತು ಸುಸಂಘಟಿತ ಕಾರ್ಯಾಲಯಗಳ ಸಹಾಯದಿಂದ ಸಾಗಿಸಿದರೆ ಕಾಂಗ್ರೆಸ್ಸು ಇನ್ನಷ್ಟು ಬಲಿಷ್ಠವಾಗುವದಲ್ಲದೆ, ಹಿಂದುಸ್ತಾನದ ಜನತೆಯು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಸಾಧನೆಯ ಮಹಾ ಕರ್ತವ್ಯವನ್ನು ನೆರವೇರಿಸುವಲ್ಲಿ ಅದರ ಶಕ್ತಿ ಬೆಳೆದು, ಜನತೆಗೆ ಸ್ವ-ತಂತ್ರತೆಯ ಕಠಿನ ಹೊಣೆಗಾರಿಕೆಯನ್ನು ನಿರ್ವಹಿಸುವ ಸಾಮರ್ಥ್ಯವನ್ನು ತಂದುಕೊಟ್ಟಂತಾಗುವದೆಂದು ಈ ಸಮ್ಮೇಲನಕ್ಕೆ ಮನವರಿಕೆಯಾಗಿದೆ.

ಆನೇಗುಂದಿ ಹತ್ತಿರ ಇರುವ ನವವೃಂದಾವನದಲ್ಲಿ ಶ್ರೀ ಚಂದ್ರಿಕಾಚಾರ್ಯರ ಪುಣ್ಯತಿಥಿ ಮತ್ತು ಶ್ರೀ ಸುಧೀಂದ್ರ ಸ್ವಾಮಿಗಳ ಪುಣ್ಯತಿಥಿ ವಿಜೃಂಭಣೆಯಿಂದ ಸಾಂಗವಾದುವು. ಕೀರ್ತನಕೇಸರಿ ಜಯ. ರಾಮಾಚಾರ್ಯ ಕೊಪ್ಪಳ ಇವರು ಕೀರ್ತನೆ ಮಾಡಿದರು. ಶ್ರೀರಾಯರ ಮತ್ತು ವ್ಯಾಸರಾಯಮಠದ ಶ್ರೀಗಳು ಅನುಗ್ರಹದಿಂದ ಚೊಕ್ಕಟ ವ್ಯವಸ್ಥೆ ಏರ್ಪಡಿಸಲಾಗಿದ್ದಿತು. ಇಲ್ಲಿ ಅನುಕೂಲತೆಗಳನು ಹೆಚ್ಚಿಸುವದಕ್ಕಾಗಿ ಹೊಸದಾಗಿ ಸ್ಥಾಪಿತವಾಗಿರುವ ಸೇವಾ ಮಂಡಳದವರು ಪ್ರಯತ್ನಿಸುತ್ತಿರುವರು.

ಅಂತರರಾಷ್ಟ್ರೀಯ

ಆಂಗ್ಲೋ-ಫ್ರೆಂಚ ಒಪ್ಪಂದ

“ ಡಂಕರ್ಕ ” ಎಂಬ ಸ್ಥಳಕಳೆದ ಯುದ್ಧಾರಂಭದಲ್ಲಿ ಆಂಗ್ಲೋ-ಫ್ರೆಂಚ ಸೋಲಿನಕೂನೆಯ ರಂಗವಾಗಿ ಅನಂತರದಲ್ಲಿ ಆ ಹೆಸರು ಪ್ರಚಂಡ ಅನಾಹುತ ಎಂಬ ಅರ್ಥದಲ್ಲಿ ಉಪಯೋಗಿಸಲ್ಪಡುತಿದೆ. ಹಿಟ್ಲರನಿಂದ ಬೆನ್ನಟ್ಟಲ್ಪಟ್ಟು ವಿಧ್ವಸ್ತ ಫ್ರಾನ್ಸಿನಿಂದ ಪಲಾಯನ ಮಾಡಲು ಬ್ರಿಟಿಶರು ಉಪಯೋಗಿಸಿದ ಈ ಬಂದರ ನಗರದಲ್ಲಿಯ ಮತ್ತೆ ಮೊನ್ನೆ ಮಾರ್ಚ ೪ ಮಂಗಳವಾರದಿನ ಆಂಗ್ಲೋ-ಫ್ರೆಂಚರ ಸ್ನೇಹ ಒಪ್ಪಂದಕ್ಕೆ ಸಹಿ ಬಿತ್ತು. ಬ್ರಿಟನ್ನಿನ ಪರವಾಗಿ ವಿದೇಶ ಮಂತ್ರಿ ಬೆವಿನ್ನರೂ ಫ್ರಾನ್ಸಿನ ಪರವಾಗಿ ವಿದೇಶಮಂತ್ರಿ ಬಿಡಾಲರೂ ಸಹಿಹಾಕಿದ ಈ ಡಂಕರ್ಕ ಒಪ್ಪಂದದ ಬಗ್ಗೆ ಮಾಸ್ಕೋ ಅಷ್ಟು ಸಂತುಷ್ಟವಾಗಿಲ್ಲವಾದರೂ ಅದರ ಕಲಮುಗಳೇನೂ ರಶಿಯಾದ ವಿರುದ್ಧ ಗುರಿಹಿಡಿಯಲ್ಪಟ್ಟಿಲ್ಲ. ಜರ್ಮನಿಯು ಆಕ್ರಮಣಶೀಲತೆ ಪುನರುತ್ಥಾನಗೊಂಡಲ್ಲಿ ಅದನ್ನೆದುರಿಸುವಲ್ಲಿ ಉಭಯ ಪಕ್ಷಗಳು ಸಹಕರಿಸಬೇಕೆಂಬುದೇ ಅದರ ಆಶಯ. ರಶಿಯನ್ ಸರಕಾರದ ಮನಸ್ಸಿನಲ್ಲಿ ಏಳಬಹುದಾದ ಸಂಶಯಗಳನ್ನು ನಿವಾರಿಸಲೆಂದು ರಶಿಯಾದೊಡನೆ ಈಗಾಗಲೆ ಮಾಡಿಕೊಂಡಿರುವ ಒಪ್ಪಂದಗಳಿಗೆ ಈ ಒಪ್ಪಂದ ಬಾಧಕವಾಗಿಲ್ಲವೆಂದು ಪೀಠಿಕೆಯಲ್ಲಿ ಹೇಳಲಾಗಿದೆ. (ಬ್ರಿಟನ್ ಫ್ರಾನ್ಸಗಳೆರಡಕ್ಕೂ ರಶಿಯಾದೊಡನೆ ಒಪ್ಪಂದಗಳು ಈಗಾಗಲೆ ಇವೆ) ಆಂಗ್ಲೋ ಫ್ರೆಂಚ ಒಪ್ಪಂದದ ಮುಖ್ಯ ಕಲಮುಗಳು ಇಂತಿವೆ:

೧ ಜರ್ಮನ್ ಆಕ್ರಮಣಶೀಲ ಧೋರಣೆಯಿಂದ ಎರಡರಲ್ಲೊಂದು ಪಕ್ಷದ ಸುರಕ್ಷಿತತೆಗೆ ಅಪಾಯ ಬಂದರೆ ಎರಡೂ ಪಕ್ಷಗಳು ಸೇರಿ ಆ ಅಪಾಯ ಪರಿಹಾರಕ್ಕೆ ಉಭಯ ಸಮ್ಮತ ಕ್ರಮಗಳನ್ನು ಕೈಕೊಳ್ಳುವವು.

೨ ಯಾವುದೇ ಆರ್ಥಿಕ ವಾಗ್ದಾನವನ್ನು ನೆರವೇರಿಸಲು ಜರ್ಮನಿ ತಪ್ಪಿದ ಕಾರಣದಿಂದ ಎರಡರಲ್ಲೊಂದು ಪಕ್ಷಕ್ಕೆ ಅಹಿತವಾದರೆ ಉಭಯ ಸಮ್ಮತ ಕ್ರಮತೆಗೆದುಕೊಳ್ಳಲು ಎರಡೂ ಪಕ್ಷಗಳು ಸೇರಿ ವಿಚಾರಿಸುವವು.

೩ ಎರಡೂ ದೇಶಗಳ ಸಮೃದ್ಧಿ ಹಾಗು ಆರ್ಥಿಕ ಭದ್ರತೆಗಾಗಿ ಎರಡೂ ಪಕ್ಷಗಳು ಸಾಧ್ಯವಿದ್ದುದನ್ನೆಲ್ಲ ಮಾಡುವವು.

೪ ಎರಡು ಪಕ್ಷಗಳಲ್ಲಿ ಯಾವುದೊಂದರ ವಿರುದ್ಧವಾದ ಯಾವದೇ ಒಪ್ಪಂದದಲ್ಲಿ ಇನ್ನೊಂದು ಸೇರುವದಿಲ್ಲ.

೫ ಈ ಒಪ್ಪಂದಕ್ಕೆ (ಶಾಸನ ಸಭೆಗಳ) ಮನ್ನಣೆ ದೊರೆತೊಡನೆ ಅದು ಜಾರಿಗೆ ಬರುವದಲ್ಲದೆ ೫೦ ವರ್ಷಗಳ ವರೆಗೆ ಜಾರಿಯಲ್ಲಿರುವದು.

ರಶಿಯನ್ ಪ್ರಭಾವಕ್ಕೆ ತಡೆ

ಆಂಗ್ಲೋ—ಫ್ರೆಂಚ ರಾಜಕಾರಣಿಗಳು ಈ ಒಪ್ಪಂದದಲ್ಲಿ ರಶಿಯಾದ ವಿರುದ್ಧವಾದುದೇನೂ ಇಲ್ಲವೆಂದೂ ಪಶ್ಚಿಮ ಯುರೋಪಿನಲ್ಲಿ ರಶಿಯದ ವಿರುದ್ಧ ಬಣಕಟ್ಟುವ ಪ್ರಯತ್ನವಿಲ್ಲವೆಂದೂ ತಿಳಿಹೇಳಲು ಬಹಳ ಪ್ರಯತ್ನ ನಡೆಸುತಿದ್ದರೂ ಅದರ ಪರಿಣಾಮ ರಶಿಯನ್ ಪ್ರಭಾವಕ್ಕೆ ತಡೆಹಾಕುವದೇ ಆಗಿದೆ. ಫ್ರೆಂಚ ಕಮ್ಯುನಿಸ್ಟರಿಗೆ ಇದರಿಂದ ತುಂಬ ತೊಡಕಾಗುವದು. ಕೆಲವೇ ವಾರಗಳ ಮಾತುಕತೆಯಿಂದ ಈ ಒಪ್ಪಂದ ಸಿದ್ಧವಾಗಿ ಅವಸರದಿಂದ ಸಹಿಹಾಕಲ್ಪಟ್ಟುದಾದರೂ ಆಂಗ್ಲೋ—ಫ್ರೆಂಚ ಸಾಮ್ರಾಜ್ಯವಾದಿಗಳ ಮನಸಿನಲ್ಲಿ ಮುಸುಗುತಿರುವ ಕಮ್ಯುನಿಸ್ಟ್ ಪ್ರವಾಹಕ್ಕೆ ತಡೆಹಾಕುವ ಆತುರ ಬಹಳವಾಗಿತ್ತೆಂಬುದನ್ನೇ ಸೂಚಿಸುತ್ತಿದೆ. ಜರ್ಮನ್ ಆಕ್ರಮಣದ ಭಯ ಅಷ್ಟು ಸ್ಪಷ್ಟವೇನೂ ಆಗಿರಲಿಲ್ಲ. ನಿಜವಾಗಿ, ಜರ್ಮನ್ ಭವಿತವ್ಯದ ವಿಷಯದಲ್ಲಿ ಇಂಗ್ಲೀಷರಿಗೂ ಫ್ರೆಂಚರಿಗೂ ಇರುವ ಮತಭೇದ—ಉದಾಹರಣೆಗಾಗಿ ರೂಹ್ರ ಭಾಗದ ಮೇಲೆ ಫ್ರೆಂಚರೊಡ್ಡಿದ ಬೇಡಿಕೆಗೆ ಬ್ರಿಟಿಶರ ಅಸಮ್ಮತಿ—ಇನ್ನೂ ಬಗೆಹರಿಸಲ್ಪಡದಿರುವಾಗ ಈ ಒಪ್ಪಂದಕ್ಕೆ ಸಹಿಯಾಗಿದೆ. ಅಂದ ಮೇಲೆ ಎರಡೂ ದೇಶಗಳಲ್ಲಿರುವ ಸಮೀಪಗತವಾದ ಗಂಡಾಂತರದ ಭಯವೇ ಈ ಅವಸರದ ಒಪ್ಪಂದಕ್ಕೆ ಕಾರಣವಾಗಿರಬೇಕು.

ಒಪ್ಪಂದಕ್ಕೆ ಪ್ರತಿಧ್ವನಿಯೆಂಬಂತೆ ಪೋಲಂಡ-ಝೆಕೋಸ್ಲೋವಾಕಿಯಾಗಳಲ್ಲಿಯೂ ಮಿತ್ರತ್ವದ ಒಡಂಬಡಿಕೆಗೆ ಹೀಗೆಯೆ ಅವಸರದ ಸಹಿಬಿದ್ದಿತು. ಈ ಎರಡು ರಾಷ್ಟ್ರಗಳಲ್ಲಿಯೂ ಗಡಿಯ ವಿಷಯದಲ್ಲಿ ಬಗೆಹರಿಯದ ಹಲವು ವಿವಾದಗಳಿವೆ. ಪೋಲಂಡಿನಲ್ಲಾದ ಚುನಾವಣೆಗಳು ನ್ಯಾಯಸಮ್ಮತವಲ್ಲವೆಂದು ಆಂಗ್ಲೋ-ಅಮೇರಿಕನ್ನರು ಆಕ್ಷೇಪವೆತ್ತಿರುವದರಿಂದ ಪೂರ್ವ ಯುರೋಪಿನಲ್ಲಿ ಅವರ ಪ್ರಭಾವಕ್ಕೆ ಎಲ್ಲಿಯೂ ಪ್ರವೇಶದ್ವಾರ ಸಿಗಬಾರದೆಂಬುದೇ ಈ ಒಪ್ಪಂದದ ಒಳಗುಟ್ಟು. ಈ ಅಧಿಕಾರ ಲಾಲಸೆಯ ಚತುರಂಗದಾಟದ ಇನ್ನೊಂದು ಗತ್ತು ಗ್ರೀಸಿನಲ್ಲಿ ಕಾಣಿಸುತ್ತದೆ. ಗ್ರೀಸಿನಲ್ಲಿ ಈಗ ಅಧಿಕಾರದಲ್ಲಿರುವ ಸರಕಾರದ ಕೈಯನ್ನು ಬಲಗೊಳಿಸಲು ಆಂಗ್ಲೋ-ಅಮೇರಿಕನ್ನರು ಶತಪ್ರಯತ್ನ ಮಾಡುತಿದ್ದಾರೆ ಜಾಗತಿಕ ಟೀಕೆಗಳೂ ಗೃಹರಂಗದಲ್ಲಿನ ವಿರೋಧವೂ ಸೇರಿ ಇದೇ ಮಾರ್ಚ ೩೧ರೊಳಗೆ ಬ್ರಿಟಿಶ ಪಡೆಗಳನ್ನು ಗ್ರೀಸಿನಿಂದ ಹಿಂತೆಗೆಯುವ ನಿರ್ಣಯಕ್ಕೆ ಬ್ರಿಟಿಶ ಸರಕಾರವನ್ನು ತಂದಿವೆ. ಗ್ರೀಕ ಸರಕಾರವನ್ನು ಅದರ ಪಾಡಿಗೆ ಬಿಟ್ಟರೆ ಸಾಮ್ಯವಾದಿ—ಕಮ್ಯುನಿಸ್ಟ ಗುಂಪಿನ ಈಮ ಪಕ್ಷದ ಕ್ರಾಂತಿಕಾರಿಗಳ ಕಾಟದ ಮುಂದೆ ಅದು ಬಹಳ ದಿನತಾಳುವ ಆಸೆಯಿಲ್ಲ. ಅದಕಾಗಿ ಗ್ರೀಕ ಸರಕಾರದ ಸೈನ್ಯಕ್ಕೆ ಬ್ರಿಟಿಶರು ಅವಸರದಿಂದ ತರಬೇತಿ ಕೊಡುತಿರುವರಲ್ಲದೆ ಅಮೇರಿಕೆಯ ಸರಕಾರ ಉದಾರ ಹಸ್ತದಿಂದ ಪೀಡಿತ ಗ್ರೀಸಿಗೆ ಪೂರೈಕೆಗಳನ್ನು ಕಳಿಸುತ್ತಿದೆ ಗ್ರೀಕ ಸರಕಾರಕ್ಕೆ ೩೦ ದಶಲಕ್ಷ ಡಾಲರ ಸಾಲಕೊಡಬೇಕೆಂದು ಅಧ್ಯಕ್ಷ ಟ್ರೂಮನ್ನರು ಅಮೇರಿಕನ್ ಕಾಂಗ್ರೆಸ್ಸನ್ನು ಕೇಳಿಕೊಳ್ಳುವವರಿದ್ದಾರೆ. ಹೇಗಾದರೂ ಈ ಉಪಾಯಗಳಿಂದ ಮಾಸ್ಕೋದ ಪ್ರಭಾವದಿಂದ ಗ್ರೀಸನ್ನು ಹೊರಗಿರಿಸಲು ಪ್ರಯತ್ನ ನಡೆದಿದೆ.

ವಿದೇಶ ಮಂತ್ರಿ ಸಭೆ

ಈ ಎಲ್ಲ ಚತುರಂಗದ ಕಾಯಿಗಳ ಬಿರುಸಿನ ಓಡಾಟಗಳು ಮಾಸ್ಕೋದಲ್ಲಿ ಸೇರಿರುವ ವಿದೇಶ ಮಂತ್ರಿಗಳ ಸಭೆ ಹತ್ತಿರ ಬಂದಾಗಲೇ ನಡೆದಿವೆ ತಾ. ೧೦ ರಿಂದ ಪ್ರಾರಂಭವಾದೀ ಚತುರಾಷ್ಟ್ರ ವಿದೇಶ ಮಂತ್ರಿ ಸಭೆಯಲ್ಲಿ ಅತಿ ಮಹತ್ವದ ವಿಷಯಗಳು ನಿರ್ಣಯಿಸಲ್ಪಡಬೇಕಾಗಿವೆ. ಜರ್ಮನಿಯ ಭವಿತವ್ಯ, ಆಸ್ಟ್ರಿಯಾದೊಡನೆ ಶಾಂತಿ ಒಪ್ಪಂದ ಮೊದಲಾದವುಗಳ ನಿರ್ಣಯ ಅಲ್ಲಿ ಆಗಬೇಕಾಗಿದೆ. ಆ ಸಭೆಯಲ್ಲಿ ತಮ್ಮ ತಮ್ಮ ಬೇಡಿಕೆಗಳ ಬೆಂಬಲವನ್ನು ಹೆಚ್ಚಿಸಿಕೊಳ್ಳಲು ಎಲ್ಲ ಪ್ರಮುಖ ರಾಷ್ಟ್ರಗಳೂ ಹೆಣಗುತಿವೆ. ರೂಹ್ರ ಭಾಗವನ್ನು ನುಂಗಲು ಫ್ರಾನ್ಸ ಅಪೇಕ್ಷಿಸುತಿದೆಯೆಂಬಲ್ಲಿ ಏನೂ ಸಂಶಯವಿಲ್ಲ. ಸೈಲೇಶಿಯಾ ಮತ್ತು ಪ್ರಶಿಯಾ ಭಾಗಗಳು ಪೋಲಂಡಿಗೆ ಸಿಗಬೇಕೆಂದು ಅರ್ಧಮರ್ಧ ಒಪ್ಪಂದ ಈ ಹಿಂದೆಯೇ ಆಗಿದ್ದರೂ ಬ್ರಿಟಿಶ ವಿದೇಶಮಂತ್ರಿ ಬೆವಿನ್ನರು ಮಾಸ್ಕೋದ ಬೊಂಬೆಗಳಿಗೆ ಸಿಗುವ ಎಲುಬಿನ ಚೂರಿಗೆ ಕತ್ತರಿ ಹಾಕುವ ಅಪೇಕ್ಷೆಯುಳ್ಳವರಾಗಿದ್ದಾರೆ. ಜರ್ಮನಿಯಲ್ಲಿನ ಇಂಗ್ಲೀಷರ ಮತ್ತು ಅಮೇರಿಕನ್ನರ ಆಡಳಿತದಲ್ಲಿರುವ ಭಾಗಗಳನ್ನು ಒಂದಾಗಿ ಸಮಾವೇಶಗೊಳಿಸಿದ್ದರಿಂದ ಪಶ್ಚಿಮದ ಗುಂಪಿನ ಬಲ ಹೆಚ್ಚಿದೆಯೆಂದು ರಶಿಯಾಕ್ಕೆ ಚಿಂತೆಯುಂಟಾಗಿದೆ. ಈ ಎಲ್ಲ ತೊಡಕುಗಳು ಮಾಸ್ಕೋದಲ್ಲೀಗ ಬಗೆಹರಿಯ ಬೇಕಾಗಿದೆ.

ಪ್ರಶಿಯಾದ ನಿರ್ನಾಮ

ಏನೇ ಆದರೂ ಮಾಸ್ಕೋದ ವಿದೇಶ ಮಂತ್ರಿ ಸಭೆ ತಿಕ್ಕಾಟವಿಲ್ಲದೆ ಪ್ರಾರಂಭವಾಗಿದೆಯೆಂದು ಒಪ್ಪಬೇಕು. ಕಾರ್ಯಕ್ರಮ ಪಟ್ಟಿಯನ್ನಂತೂ ಮಂತ್ರಿಗಳು ವಿವಾದವಿಲ್ಲದೆ ಒಪ್ಪಿಬಿಟ್ಟಿದ್ದಾರೆ. ಅದರನ್ವಯ ಆಸ್ಟ್ರಿಯದ ಪ್ರಶ್ನೆ ಕೊನೆಯಲ್ಲಿ ಬರುವದು. ವಿದೇಶ ಮಂತ್ರಿಗಳು ಮೊದಲನೆ ದಿನವೇ ಇನ್ನೊಂದು ಮಹತ್ವದ ಪ್ರಶ್ನೆಯಲ್ಲಿ ಸರ್ವಸಮ್ಮತ ಒಪ್ಪಂದಕ್ಕೆ ಬಂದರು. ಅದೆಂದರೆ ಪ್ರಶಿಯಾದ ನಿರ್ನಾಮ ಜರ್ಮನ್ ರಾಜ್ಯದ ಘಟಕಗಳಲ್ಲೆಲ್ಲ ಅತಿ ಅಪಾಯಕರವಾದ ಭಾಗವಿದು. ಜರ್ಮನಿಯ ಯುದ್ಧ ಯೋಜನೆಗಳೂ ಒಳಸಂಚುಗಳೂ ಇಲ್ಲೇ ಮೊಳೆತು ಚಿಗಿತು ಗಿಡವಾಗುತ್ತ ಬಂದಿವೆ. ಇಲ್ಲಿಯ ಪ್ರಬಲ ಜಮೀನ್ದಾರ ಕುಟುಂಬಗಳಿಂದಲೇ ಜರ್ಮನಿಯ ಪ್ರಮುಖ ಯುದ್ಧ ನಾಯಕರೂ ಸೇನಾಪತಿಗಳೂ ಹುಟ್ಟಿ ಬಂದಿದ್ದಾರೆ. ಅದನ್ನು ನಿರ್ಣಯ ಮಾಡುವ ನಿರ್ಣಯದಿಂದ ಜರ್ಮನ್ ಯುದ್ಧ ಶಕ್ತಿ ಯುದ್ಧಾಪೇಕ್ಷೆಗಳೆರಡೂ ಬಹಳ ಇಳಿಯಬಹುದೆಂಬದು ಖಂಡಿತ. ರಶಿಯನ್ನರು ಈ “ಕ್ಷತ್ರಿಯ” ಜಮೀನ್ದಾರರ ಪಟ್ಟು ಹರಿಯಲು ಈಗಾಗಲೆ ಅವಶ್ಯವಿದ್ದುದನ್ನೆಲ್ಲ ಮಾಡಿದ್ದಾರೆ. ಅವರ ಆಸ್ತಿಗಳನ್ನು ಹರಿದು ರೈತರಿಗೆ ಹಂಚಿಬಿಟ್ಟಿದ್ದಾರೆ ಈಗ ಅದು ಶಾಶ್ವತವಾಗಿ ಜರ್ಮನಿಯಿಂದ ವಿಚ್ಛಿನ್ನವಾಗಿ ಹೋಗುವದು.

ತುಣುಕು ಸುದ್ದಿಗಳು

ಕೊನೆಗೊಮ್ಮೆ ಈಜಿಪ್ತನ್ ಸರಕಾರ ತನ್ನ ಮತ್ತು ಬ್ರಿಟನ್ನಿನ ನಡುವಣ ವಿವಾದವನ್ನು ಯುಕ್ತರಾಷ್ಟ್ರಸಂಘಕ್ಕೊಯ್ಯಲು ನಿರ್ಧರಿಸಿದೆ.

* * *

ಪಾಲಿಸ್ತಾನದ ಪ್ರಶ್ನೆಯನ್ನು ಯುಕ್ತರಾಷ್ಟ್ರ ಸಂಘಕ್ಕೊಯ್ಯುವ ನಿರ್ಣಯಕ್ಕೆ ಬ್ರಿಟನ್ನು ಬಂದಿರುವದರಿಂದ ಪಾಲಿಸ್ತಾನದಲ್ಲಿನ ಸಕ್ಕ ಸಂಗತಿಗಳನ್ನು ಕಂಡುಹಿಡಿಯಲು ಯುಕ್ತ ರಾಷ್ಟ್ರ ಸಂಸ್ಥೆಯವರು ಒಂದು ಶಿಷ್ಟಮಂಡಳ ಕಳಿಸುವರಂತೆ. ಇದರಲ್ಲಿ ಅರಬರಾಷ್ಟ್ರಗಳಿಗೂ ಯಹೂದ್ಯರಿಗೂ ಪ್ರಾತಿನಿಧ್ಯವಿಲ್ಲ.

* * *

ಸ್ಪೇನದ ಜನರಲ್ ಫ್ರಾಂಕೋನ ಕೊಲೆಯಾಗಿದೆಯೆಂಬ ಸುದ್ದಿ ಹಬ್ಬಿದ್ದು ಅದನ್ನೀಗ ನಿರಾಕರಿಸಲಾಗಿದೆ.

* * *

ಹಿಂದುಸ್ತಾನದಲ್ಲಿ ಜರಗಲಿರುವ ಏಶಿಯಾ ರಾಷ್ಟ್ರಗಳ ಸಾಂಸ್ಕೃತಿಕ ಸಮ್ಮೇಲನದಲ್ಲಿ ಭಾಗ ವಹಿಸಲು ದಕ್ಷಿಣ ಆಫ್ರಿಕೆಯ ಹಿಂದೀ ಧುರೀಣರಾದ ಡಾ. ನಾಯಕರ ಮತ್ತು ಡಾ. ದಾದೂ ಅವರಿಗೆ ಪಾಸಪೋರ್ಟ ನಿರಾಕರಿಸಿದ್ದ ದ. ಆ. ಸರಕಾರವೀಗ ಸಾರ್ವಜನಿಕ ಚಳವಳಿಯ ಪರಿಣಾಮವಾಗಿ ಪಾಸಪೋರ್ಟ ಕೊಡಲೊಪ್ಪಿದ್ದರಿಂದ ಹಿಂದೀಯರಿಗೆ ವಿಜಯವಾಗಿದೆ.

* * *

ಸ್ಟಾಲಿನ್ನರು ರಶಿಯನ್ ಸೇನಾಪಡೆಯ ನಾಯಕತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ಆದರೆ ಮಂತ್ರಿಮಂಡಲದ ಅಧ್ಯಕ್ಷತೆ ಮತ್ತು ಕಮ್ಯುನಿಸ್ಟ ಪಕ್ಷದ ಕಾರ್ಯದರ್ಶಿತ್ವ ಅವರ ಕೈಲೆ ಉಳಿಯುವವು.

ಯುದ್ಧೋತ್ತರ ಪುನರ್‌ರಚನೆಯಲ್ಲಿ

ಸಿದ್ದಾಪುರವನ್ನು ಮರೆಯದಿರಿ

(ಲೇ— ಶ್ರೀ ರಾ. ಮ. ಹೆಗಡೆ ದೊಡ್ಮನೆ)

ಹಿಂದುಸ್ತಾನದ ಸ್ವಾತಂತ್ರ್ಯ ಸಮರದ ಇತಿಹಾಸದಲ್ಲಿ, ಕರ್ನಾಟಕವು ಮುಖ್ಯ ಸ್ಥಾನವನ್ನು ಪಡೆಯುವದೆಂಬುದರಲ್ಲೇನೂ ಸಂದೇಹವಿಲ್ಲ. ಕರ್ನಾಟಕದಲ್ಲಾದರೂ ಉತ್ತರ ಕನ್ನಡದ, ಮತ್ತು ಉತ್ತರ ಕನ್ನಡ ಜಿಲ್ಲೆಯೊಳಗಿನ ಸಿದ್ದಾಪುರ ಮತ್ತು ಅಂಕೋಲಾ ತಾಲೂಕುಗಳ ಸ್ಥಾನವು ಮಹತ್ವದ್ದು. ಈ ಎರಡು ತಾಲೂಕುಗಳು ದೇಶದ ಸಲುವಾಗಿ ಮಾಡಿದ ಅಪರಿಮಿತ ಸೇವೆಯು ಅಜರಾಮರವಾದದ್ದು. ಈ ತಾಲೂಕುಗಳ ತ್ಯಾಗ ಮತ್ತು ಬಲಿದಾನಗಳಿಂದಲೇ ಉತ್ತರ ಕನ್ನಡದ ಮತ್ತು ತನ್ಮೂಲಕ ಕರ್ನಾಟಕದ ಹೆಸರು, ಕೀರ್ತಿ, ದೇಶವ್ಯಾಪಿಯಾಯಿತು ಎಂದರೆ ತಪ್ಪಾಗಲಾರದು.

ಆದರೆ ಖೇದಜನಕ ಸಂಗತಿ ಎಂದರೆ, ಇಂದು ದೇಶದ ಸಲುವಾಗಿ ತನು ಮನ ಧನವನ್ನರ್ಪಿಸಿದ ಕರ್ನಾಟಕದ ಅದರಲ್ಲೂ ಉತ್ತರ ಕನ್ನಡದ, ಉತ್ತರ ಕನ್ನಡದಲ್ಲೂ ಇಂಥ ತಾಲೂಕಿನ, ಹೀನ-ದೀನದಶೆಯ ಕಡೆಗೆ ಯಾರ ದೃಷ್ಟಿಯೂ ಹರಿಯುತ್ತಿಲ್ಲ.

ಇಂದು ಕರ್ನಾಟಕವು ಉಳಿದ ನೆರೆಹೊರೆಯ ನಾಡುಗಳಿಗಿಂತ ಉದ್ಯೋಗ ಆರ್ಥಿಕ ಬೆಳವಣಿಗೆಯಲ್ಲಿ ಕೀಳ್ಪಟ್ಟದಲ್ಲಿದೆ. ಕರ್ನಾಟಕದಲ್ಲೇ ಅತ್ಯಂತ ಹಿಂದುಳಿದ ಜಿಲ್ಲೆಯೆಂದರೆ ಉತ್ತರ ಕನ್ನಡ ಜಿಲ್ಲೆ. ಈ ಜಿಲ್ಲೆಯಲ್ಲಿ ವ್ಯಾಪಾರ ಔದ್ಯೋಗಿಕ ಏಳ್ಗೆಗೆ ಬೇಕಾಗುವ ಸಂಪತ್ತಿದ್ದರೂ ಸಾಧನ ಸಹಾಯಗಳಿಲ್ಲ. ಶಿಕ್ಷಣ ಸಂಬಂಧವಾದ ಅನುಕೂಲತೆಗಳಿಲ್ಲ. ಇಡೀ ಜಿಲ್ಲೆಯಲ್ಲಿ ರೇಲ್ವೆಯ ರಹದಾರಿಯಾಗಲಿ, ಇದ್ದ ಬಂದರಗಳ ಸುವ್ಯವಸ್ಥೆಯಾಗಲಿ, ಒಂದು ಕಾಲೇಜಾಗಲಿ ಇಲ್ಲ. ಈ ಬಗ್ಗೆ ಮೊನ್ನಿನ “ಕರ್ಮವೀರದಲ್ಲಿ” ಶ್ರೀಯುತ ಕೆ. ವಿ. ರಾವ್ ಇವರು ಒಂದು ಲೇಖನವನ್ನು ಬರೆದು ಉತ್ತರ ಕನ್ನಡ ಜಿಲ್ಲೆಯ ವಿವರ ಕೊಟ್ಟಿರುವರು.

ಉತ್ತರ ಕನ್ನಡದಲ್ಲೂ ಅತಿ ಹೀನ ದೀನ ಸ್ಥಿತಿಯಲ್ಲಿರುವ ತಾಲೂಕೆಂದರೆ ಸಿದ್ದಾಪುರ. ಈ ತಾಲೂಕು ಮಾಡಿದ ತ್ಯಾಗವು ಅಪ್ರತಿಮವಾದುದು. ಸಹಿಸಿದ ಕಷ್ಟನಷ್ಟಗಳು ವರ್ಣಿಸಲಸದಳವು. ಇದು ಕಾಂಗ್ರೆಸ್ಸಿನ ಆಜ್ಞೆಯನ್ನು ಅಕ್ಷರಶಃ ಪಾಲಿಸುತ್ತ ಬಂದಿದೆ. ಅದರ ಪ್ರತಿಯೊಂದು ಚಳವಳಿಯಲ್ಲಿಯೂ ತನ್ನ ಶಕ್ತಿಮೀರಿ ಸೇವೆ ಸಲ್ಲಿಸುತ್ತ ಬಂದಿದೆ. ಸನ್ ೧೯೩೦-೩೧ನೇ ಚಳವಳಿಯಲ್ಲಿ ಇದು ವಹಿಸಿದ ಪಾತ್ರವು ಇಡೀ ಹಿಂದುಸ್ತಾನವನ್ನು ಬೆರಗುಗೊಳಿಸಿತು. ಆಗಿನ ಘಟನೆಗಳನ್ನು ನೆನಸಿದರೆ ಇನ್ನೂ ಮೈ ಮೇಲೆ ಮುಳ್ಳು ಬರುತ್ತಿವೆ. ದೇಶದ ಅಥವಾ ಕಾಂಗ್ರೆಸ್ಸಿನ ಕರೆಗೆ ಓ ಕೊಟ್ಟು ಅದರ ಆಜ್ಞೆಯಂತೆ ಕೂಡಲೇ ಚಳವಳಿಯಲ್ಲಿ ಧುಮುಕಿತು. ಕರನಿರಾಕರಣೆಯಲ್ಲಿ ಭಾಗ ವಹಿಸಿತು. ಪರಿಣಾಮವಾಗಿ, ಸರಕಾರದ ದಬ್ಬಾಳಿಕೆಗೆ ತುತ್ತಾಗಬೇಕಾಯಿತು. ಆಗಿನ ಹೊಡೆತದಿಂದ ಎಷ್ಟೋ ರೈತರು ಇನ್ನೂ ಚೇತರಿಸಿಕೊಂಡಿಲ್ಲ.

ಸಿದ್ದಾಪುರದಲ್ಲಿ ಒಂದು ಹಾಯಸ್ಕೂಲ ಇಲ್ಲ. ಆರ್ಥಿಕ ಹೀನತೆಯ ಕಾರಣದಿಂದ ಪರಊರುಗಳಿಗೆ ಮಕ್ಕಳನ್ನು ಶಿಕ್ಷಣಕ್ಕಾಗಿ ಕಳಿಸುವದು ಇಲ್ಲಿಯ ಬಡಜನರಿಗೆ ಅಸಾಧ್ಯವಾದದ್ದರಿಂದ ವಿದ್ಯಾರ್ಥಿಗಳಿಗೆ ಬೇಕಾಗುವ ಜ್ಞಾನವಿಜ್ಞಾನವು ಸಿಗುವದಿಲ್ಲ. ಅವರನ್ನು ಬಲಾತ್ಕಾರದಿಂದ ನಿಲ್ಲಿಸಿಕೊಳ್ಳಬೇಕಾಗುತ್ತದೆ. ಇಡೀ ತಾಲೂಕಿನಲ್ಲಿ ಒಬ್ಬರಾದರೂ ಪದವೀಧರರಾಗಲಿ, ವಕೀಲ ಬ್ಯಾರಿಸ್ಟರರಾಗಲಿ ಇಲ್ಲ. ತಾಲೂಕಿನ ತುಂಬ ನಿರಕ್ಷರತೆಯು, ಅಜ್ಞಾನತೆಯು ದಟ್ಟವಾಗಿ ಹಬ್ಬಿದೆ. ದವಾಖಾನೆಗಳ ಅಭಾವದಿಂದ ಹಳ್ಳಿಗಳಲ್ಲಿ ಬೇನೆ ಬೇಸರಿಕೆಗಳ ಕಾರಣವಾಗಿ ಅನೇಕ ಜನರು ಅಕಾಲಮರಣಕ್ಕೆ ತುತ್ತಾಗುತ್ತಿರುವರು.

ಸಿದ್ದಾಪುರಕ್ಕೆ ಎಲ್ಲ ವಿಷಯಗಳ ಕೊರತೆ ಇದೆ. ಅವುಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಮಾನ್ಯ ಲ. ಮ. ಪಾಟೀಲರಿಗೆ (ಅವರ ಮೊನ್ನಿನ ಉ. ಕ. ಸಂಚಾರದ ಸಮಯದಲ್ಲಿ) ನಿವೇದಿಸಿದೆ. ಅವುಗಳಲ್ಲಿ ಕೆಲವನ್ನು ವಾಚಕರ ತಿಳುವಳಿಕೆಯ ಸಲುವಾಗಿ ಕೆಳಗೆ ಕೊಟ್ಟಿದೆ.

—೧೧ನೇ ಪುಟಕ್ಕೆ

ಹೊಸ ವಾಯಿಸರಾಯರು ಹೊಸದಾಗಿ ಪ್ರಾರಂಭಿಸುವರು ?

ನಡುಗಾಲ ಸರಕಾರದ ರಾಜೀನಾಮೆ— ಲೀಗಿಗೆ ಕಾಂಗ್ರೆಸ್ಸಿನ ನೇರವಾದ ಆಮಂತ್ರಣ— ಪಂಜಾಬವನ್ನು ಇಬ್ಭಾಗಿಸಬೇಕು

✲ ಕಾಮನ್ಸ ಸಭೆಯಲ್ಲಿ ಬ್ರಿಟಿಶ ಸರಕಾರದ ಹಿಂದೀ ನಿರ್ಣಯದ ಚರ್ಚೆಯ ಕಾಲಕ್ಕೆ ಕಾನ್ಸರ್ವೇಟಿವ ಪಕ್ಷದವರು ಮುಂಡಿಸಿದ ತಿದ್ದುಪಡಿಗಳು ಬಿದ್ದು ಹೋಗಿ ಸರಕಾರದ ಗೊತ್ತುವಳಿಯೇ ಪಾಸಾಯಿತು.

✲ ಕಾಂಗ್ರೆಸ್ ಕಾರ್ಯ ಸಮಿತಿ ಒಂದು ಗೊತ್ತುವಳಿಯ ಮೂಲಕ ಫೆ. ೨೦ರ ಬ್ರಿಟಿಶ ಹೇಳಿಕೆಯಿಂದ ಉದ್ಭವಿಸಿದ ಪರಿಸ್ಥಿತಿಯನ್ನು ಚರ್ಚಿಸಲು ಮುಸ್ಲಿಂ ಲೀಗಿಗೆ ಆಮಂತ್ರಣ ಕೊಟ್ಟಿದೆ.

✲ ಪಂಜಾಬದಲ್ಲಿ ಎಲ್ಲೆಲ್ಲಿಯೂ ಭಯಂಕರ ಜಾತೀಯ ದಂಗೆಗಳು ಸಂಭವಿಸಿ ಬಹಳ ಪ್ರಾಣ ಧನ ಹಾನಿಯಾಗಿದೆ. ಕೆಲವೆಡೆ ಇನ್ನೂ ಪರಿಸ್ಥಿತಿ ಹಿಡಿತಕ್ಕೆ ಬಂದಿಲ್ಲ.

ಕಾಂಗ್ರೆಸ ನಿರ್ಣಯ

೧೯೪೮ ಜೂನಿನೊಳಗಾಗಿ ಹಿಂದುಸ್ತಾನವನ್ನು ಬಿಟ್ಟು ಹೋಗುವ ನಿರ್ಣಯದಿಂದ ಹಿಂದೀ ಮುಂದಾಳುಗಳ ಮೇಲೆ ಬಿದ್ದ ಬೀಳಲಿರುವ ಅಪಾರ ಹೊಣೆಯನ್ನು ಈವರೆಗೆ ಕಾಂಗ್ರೆಸ್ಸೊಂದೇ ಪೂರ್ತಿಯಾಗಿ ಮನಗಂಡಿದೆಯೆಂದು ಹೇಳಬೇಕು. ತಾ ೨೪ ಕ್ಕೆ ಹೊಸದಿಲ್ಲಿಯಲ್ಲಿ ಕಾಂಗ್ರೆಸ ಕಾರ್ಯಸಮಿತಿಮಾಡಿದ ಗೊತ್ತುವಳಿಗಳು ಈ ಹೊಣೆಯರಿಮೆಯನ್ನು ಪೂರ್ಣವಾಗಿ ಬಿಂಬಿಸುತ್ತವೆ ಈ ಗೊತ್ತುವಳಿಗಳಮೂಲಕ ಕಾಂಗ್ರೆಸ್ಸು ಹಿಂದೀ ಪರಿಸ್ಥಿತಿಯನ್ನು ಹದಕ್ಕೆ ತರುವದಕ್ಕೆ ಬ್ರಿಟಿಶರ ಮುಖ ನೋಡದೆ ತಾನೇ ಮುಂದೆಬಂದಿದೆ. ಈ ಗೊತ್ತುವಳಿಗಳು ಈಗಾಗಲೆ ಪಂ. ಜವಾಹರಲಾಲರು ವ್ಯಕ್ತಗೊಳಿಸಿದ ಭಾವನೆಯನ್ನು ಹೆಚ್ಚು ಸ್ಫುಟವಾದ ಭಾಷೆಯಲ್ಲಿ ಉಲ್ಲೇಖಿಸಿವೆಯೆಂದು ಹೇಳಬೇಕು. ಮೊದಲನೆ ನಿರ್ಣಯದಲ್ಲಿ ಕಾಂಗ್ರೆಸ್ಸು ಬ್ರಿಟಿಶ ಸರಕಾರದ ಹೊರಡುವ ನಿರ್ಣಯವನ್ನು ಸ್ವಾಗತಿಸಿದೆಯಲ್ಲದೆ ಈ ಸಂಧಿಕಾಲದ ಅನೇಕ ರಾಜಕೀಯ ಆರ್ಥಿಕ ಬಿಕ್ಕಟ್ಟುಗಳನ್ನು ಎದುರಿಸಲು ಸಾಧ್ಯವಾಗಬೇಕಾದರೆ ನಡುಗಾಲ ಸರಕಾರವನ್ನು ಸಾಮಂತ ಸ್ವರಾಜ್ಯ ಸರಕಾರದಂತೆ ಪರಿಗಣಿಸುವದೂ ಅದನ್ನು ಸಂಯುಕ್ತಹೊಣೆಗಾರಿಕೆಯ ಮಂತ್ರಿ ಮಂಡಲವಾಗಿ ಮಾಡುವದೂ ಅತ್ಯವಶ್ಯವೆಂದು ಬ್ರಿಟಿಶ ಸರಕಾರಕ್ಕೆ ಸೂಚನೆಕೊಟ್ಟಿದೆ. ಇದಲ್ಲದೆ ಶಾಂತತೆಯಿಂದ ಅಧಿಕಾರವನ್ನು ವರ್ಗಾಯಿಸುವ ಕಾರ್ಯಸರಳವಾಗುವಂತೆ ಘಟನಾಸಮಿತಿಯಲ್ಲಿ ಎಲ್ಲ ಹಿಂದೀಯರು ಸಹಕರಿಸಬೇಕೆಂದು ಮತ್ತೊಮ್ಮೆ ಪ್ರಾರ್ಥಿಸಿಕೊಂಡಿದೆ. ಸಂಶಯ ಚಿತ್ತರ ಸಂಶಯಗಳನ್ನು ನಿವಾರಿಸುವಗೋಸುಗ ಮೇ ೧೬ ರ ಘೋಷಣೆಯನ್ನು ಡಿಸೆಂಬರ ೬ ರ ಅರ್ಥ ವಿವರಣೆಯೊಡನೆ ಕಾಂಗ್ರೆಸ್ಸು ಸ್ವೀಕರಿಸಿದೆಯೆಂದೂ ಘಟನಾ ಸಮಿತಿಯಲ್ಲಿ ಯಾರಮೇಲೂ ಯಾವ ನಿರ್ಬಂಧವನ್ನೂ ಹೇರಲಾಗುವದಿಲ್ಲ ಮತ್ತು ಆ ಘಟನೆಯನ್ನು ಅಂಗೀಕರಿಸಿದ ಭಾಗಗಳಿಗಷ್ಟೇ ಅದು ಅನ್ವಯಿಸುವದೆಂದೂ ಯಾವದೇ ಪ್ರಾಂತವಾಗಲಿ ಪ್ರಾಂತದ ಭಾಗವಾಗಲಿ ಆ ಘಟನೆಗಳನ್ನೊಪ್ಪಿ ಒಕ್ಕೂಟದಲ್ಲಿ ಸೇರಬಯಸಿದರೆ ಯಾರೂ ಅದನ್ನು ತಡೆಯತಕ್ಕದ್ದಲ್ಲೆಂದೂ ಆ ಗೊತ್ತುವಳಿ ಹೇಳಿದೆ.

ಲೀಗಿಗೆ ಆಮಂತ್ರಣ

ಇಷ್ಟು ಸೌಮ್ಯ ಸೌಹಾರ್ದಪರ ಭಾಷೆಯಲ್ಲಿ "ದ್ವೇಷ ವೈಮನಸ್ಯಗಳ ಸಮಾಧಿಕಟ್ಟಿ ಹೊಸ ಯುಗದಲ್ಲಿ ಕಾರ್ಯದಿಂದ ಕಾಲಿಡೋಣ" ವೆಂದು ಸಂಸ್ಥಾನಗಳಿಗೂ ಇತರ ಸಂಶಯಗ್ರಸ್ತ ಪಂಗಡಗಳಿಗೂ ಆಮಂತ್ರಣವಿತ್ತುದು ಮಾತ್ರವಲ್ಲದೆ ಕಾಂಗ್ರೆಸ್ಸು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಪ್ರತ್ಯಕ್ಷ ಭಾಷೆಯಲ್ಲಿ, ಲೀಗಿಗೆ ಬಿನ್ನಹ ಮಾಡಿಕೊಳ್ಳುವ ಇನ್ನೊಂದು ಗೊತ್ತುವಳಿಯನ್ನು ಮಾಡಿದೆ. "ಬ್ರಿಟಿಶ ಸರಕಾರ ಹಿಂದೀಯರಿಗೆ ಅಧಿಕಾರ ಒಪ್ಪಿಸಲು ನಿರ್ಧರಿಸಿದೆ. ಈ ಬದಲಾವಣೆಗೆ ಭಾರತದ ಜನತೆ ಸಂಯುಕ್ತವಾಗಿಯೂ ಪರಸ್ಪರ ಸಹಕಾರದಿಂದಲೂ ಸಿದ್ಧವಾಗಿ ಅಧಿಕಾರ ವರ್ಗೀಕರಣ ಸುಗಮವಾಗಿ ನೆರವೇರುವಂತೆ ನೋಡಿಕೊಳ್ಳಬೇಕಾಗಿದೆ. ಆದ್ದರಿಂದ ಈಗ ಉದ್ಭವಿಸಿರುವ ಪರಿಸ್ಥಿತಿಯನ್ನು ಚರ್ಚಿಸುವದಕ್ಕಾಗಿ ಮತ್ತು ಅದನ್ನೆದುರಿಸುವ ಉಪಾಯಗಳನ್ನು ಹುಡುಕುವದಕ್ಕಾಗಿ ಅ. ಭಾ. ಮುಸ್ಲಿಂ ಲೀಗಿಗೆ ಕಾಂಗ್ರೆಸ್ ಪ್ರತಿನಿಧಿಗಳನ್ನು ಭೆಟ್ಟಿಯಾಗಲು ಈ ಕಾರ್ಯ ಸಮಿತಿ ಆಮಂತ್ರಣ ಕೊಡುತ್ತದೆ" ಯೆಂದು ಆ ಗೊತ್ತುವಳಿ ಹೇಳುತ್ತದೆ. ಇದು ಅತ್ಯಂತ ಸೌಹಾರ್ದಪೂರ್ಣ ಮತ್ತು ಮುತ್ಸದ್ದಿತನದ ಹೆಜ್ಜೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ಕೇವಲ ಆತ್ಮಾಭಿಮಾನದ ದೃಷ್ಟಿಯಿಂದ ಕೂಡ ಈ ಗೆಳೆತನದ ಕೈಯನ್ನು ಲೀಗುತಳ್ಳಿ ಬಿಡಲಾರದು. ಆದರೂ ಈ ಸಂಕೇತಕ್ಕೆ ಲೀಗಿನ ಉತ್ತರವೇನು ? ಅದಿನ್ನೂ ಸ್ಪಷ್ಟವಾಗಿಲ್ಲ. ಅಧಿಕೃತವಾಗಿ ಲೀಗು ಪಿಟ್ಟೆಂದಿಲ್ಲ. ಆದರೆ ಈ ಗೊತ್ತುವಳಿಯಿಂದ ಹೊಸಪರಿಸ್ಥಿತಿ ಉಂಟಾಗಿಲ್ಲವಾಗಿ ಲೀಗಕಾರ್ಯ ಸಮಿತಿಯನ್ನು ಕರೆಯುವ ಅವಶ್ಯಕತೆಯಿಲ್ಲವೆಂದು ನಡುಗಾಲ ಸರಕಾರದ ಮಂತ್ರಿಗಳೂ ಲೀಗ್ ಕಾರ್ಯ ಸಮಿತಿಯ ಸದಸ್ಯರೂ ಜಿನ್ನಾಸಾಹೇಬರ ಅಂತರಂಗದ ಗೆಳೆಯರೂ ಆದ ಆಯ. ಆಯ. ಚುಂದ್ರಿಗಾರರು ಹೇಳಿದರೆಂದು ವರದಿಯಾಗಿತ್ತು. ಈ ವರದಿಯನ್ನು ಚುಂದ್ರಿಗಾರರು ಆ ಮೇಲೆ ನಿರಾಕರಿಸಿದರೆಂಬುದು ನಿಜ. ಆದರೆ ನಿರಾಕರಣೆಯ ಸಂಗಡಲೇ ಆಪ್ತ ಸಂಭಾಷಣೆಯನ್ನು ಕದ್ದು ಕೇಳಿ ಸುದ್ದಿಗಾರ ಹೀಗೆ ವರದಿ ಮಾಡಿದ್ದಾನೆಂದು ಅವರು ಹೇಳಿದ್ದಾರೆ. ಅಂದ ಮೇಲೆ ಆಪ್ತ ಸಂಭಾಷಣೆಯಲ್ಲಾದರೂ ಮಂತ್ರಿವರ್ಯರು ಹೀಗೆ ಹೇಳಿದರೆಂದಾದ್ದರಿಂದ ಜಿನ್ನಾರ ಮನಸ್ಸು ಹೇಗೆ ವರ್ತಿಸುತಿದೆಯೆಂದೂಹಿಸಬಹುದು. "ಹಲವು ಸರಕಾರಗಳಿಗೆ ಅಧಿಕಾರಒಪ್ಪಿಸಬೇಕಾದೀತೆಂ"ಬ ಬ್ರಿಟಿಶ ಘೋಷಣೆಯ ಅಂಶವನ್ನು ಗಟ್ಟಿಯಾಗಿ ಅಪ್ಪಿಕೊಂಡು ಲೀಗು ಕನಸು ಕಾಣುತಿರಬಹುದೆ? ಏನೇ ಇದ್ದರೂ ಬ್ರಿಟಿಶರ ನಿಜವಾದ ಉದ್ದೇಶ ತಿಳಿದು ಬರುವ ವರೆಗೆ ಜಿನ್ನಾ ಸಾಹೇಬರು ಮೂಕರಾಗಿಯೆ ಉಳಿಯುವರೆಂದು ನಂಬಬಹುದು.

ಬ್ರಿಟಿಶ ಉದ್ದೇಶವೇನು?

ಬ್ರಿಟಿಶರ ಉದ್ದೇಶವೇನಿದೆ? ಜೂನ ೧೯೪೮ ಕ್ಕೆ ಹೊರಟು ಹೋಗುವೆವೆಂದು ಅವರು ಘೋಷಿಸಿದ್ದರೂ ಇನ್ನೂ ಈ ಪ್ರಶ್ನೆ ಕೇಳುವದು ತಪ್ಪಿಲ್ಲ. ಆ ಘೋಷಣೆಯಲ್ಲಿ ಅಷ್ಟೊಂದು ಸಂದಿಗ್ಧಾಂಶಗಳಿವೆ. "ಕೆಲವು ಪ್ರದೇಶಗಳಲ್ಲಿ ಪ್ರಾಂತಗಳಿಗೆ ಅಧಿಕಾರವೊಪ್ಪಿಸಬೇಕಾದೀತು" ಎಂಬ ಅವರ ಹೇಳಿಕೆಯ ಸರಿಯಾದ ಅರ್ಥ ಇನ್ನೂ ಸ್ಪಷ್ಟವಾಗಿಲ್ಲ. ಲಾರ್ಡ್ಸ ಸಭೆಯ ಚರ್ಚೆಯಿಂದಂತೂ ಈ ಕತ್ತಲು ಗುಹೆಯಲ್ಲಿ ಏನೂ ಬೆಳಕು ಬೀಳಲಿಲ್ಲ. ಎರಡು ದಿನ ಘನಘೋರವಾಗಿ ನಡೆದ ಕಾಮನ್ಸ ಚರ್ಚೆಯಿಂದಾದರೂ ಈ ಪ್ರಶ್ನೆಗೆ ನಿರ್ದಿಷ್ಟ ಉತ್ತರ ದೊರೆತಿಲ್ಲ. ಏಕೆ ಇಷ್ಟು ಬೇಗನೆ ಹೊರಬಿದ್ದು ಹೋಗುವ ನಿರ್ಣಯಕ್ಕೆ ಬರಬೇಕಾಯಿತು, ಹಿಂದುಸ್ತಾನವನ್ನು ಇನ್ನು ಮೇಲೆ ಅಂಕೆಯಲ್ಲಿಟ್ಟುಕೊಳ್ಳುವದು ಹೇಗೆ ಅಸಾಧ್ಯವಾಗಿ ಕಂಡುಬಂತು, ಇತ್ಯಾದಿ ಪ್ರಶ್ನೆಗಳನ್ನೇನೋ ಸರ್ ಸ್ಟಾಫೋರ್ಡ ಕ್ರಿಪ್ಸರು ಹಿಂಜಿಹಿಂಜಿ ಉತ್ತರ ಕೊಟ್ಟರು. ಆದರೆ ಮೇಲೆ ಹೇಳಿದ ಸಂದಿಗ್ಧಾಂಶಗಳು ಮಾತ್ರ ಬೆಳಕು ಕಾಣಲಿಲ್ಲ. ಬದಲಿಗೆ ಅವು ಇನ್ನಷ್ಟು ರಹಸ್ಯಪೂರ್ಣವಾಗುವಂತೆ ಕ್ರಿಪ್ಸರು ಮಾತಾಡಿದರು. ಪರಿಸ್ಥಿತಿಯನ್ನು ಅನುಲಕ್ಷಿಸಿ ನಿರ್ಣಯ ತೆಗೆದುಕೊಳ್ಳಬೇಕಾದುದರಿಂದ ಈಗಲೇ ಮಾತಿನಿಂದ ಕಟ್ಟು ಬೀಳಲು ಸರ್ಕಾರ ಸಿದ್ಧವಿಲ್ಲವೆಂದು ತಿಳಿಸಲಾಯಿತು. ಬ್ರಿಟಿಶ ಸರಕಾರ ಹಿಂದುಸ್ತಾನದ ಐಕ್ಯವನ್ನು ಉಳಿಸಲು ಸರ್ವಪ್ರಯತ್ನ ಮಾಡುವದೆಂದು ಅವರ ಮಾತಿನಿಂದ ತಿಳಿದುಬಂತು. ಸಾಧ್ಯವಾದರೆ ಅದನ್ನು ಸಾಧಿಸಲು ಈ ಸಂದಿಗ್ಧಾಂಶಗಳನ್ನು ಅದು ಉಪಯೋಗಿಸಿಕೊಳ್ಳುವದು. ಅರ್ಥಾತ್ ಹಟಮಾರಿಪಕ್ಷಗಳನ್ನು ಸ್ವಯೈಕ್ಯತರಲು ಸಂದಿಗ್ಧಾಂಶಗಳನ್ನು ತಮಗೆ ಬೇಕಾದಂತೆ ಬ್ರಿಟಿಶರು ಅಳವಡಿಸಿಕೊಳ್ಳಬಹುದು. ಇದಕ್ಕಿಂತ ಹೆಚ್ಚಾಗಿ ಕಾಮನ್ಸ ಚರ್ಚೆಯಿಂದ ಪಂ. ಜವಾಹರಲಾಲರ ಮೊದಲಾದ ಹಿಂದೀ ಮುಖಂಡ ಮೇಲೆ ಚರ್ಚಿಲ್ಲರಿಗಿರುವ ಬಲುದಿನದ ದ್ವೇಷವನ್ನು ಕಾರಲು ಒಂದು ಅವಕಾಶ ದೊರಕಿದಂತಾಯಿತೇ ಹೊರತು ಮತ್ತೇನೂ ಪ್ರಯೋಜನ ದೊರೆಯಲಿಲ್ಲ. ಮಿ. ಎ. ವಿ. ಅಲೆಗ್ಝಾಂಡರರು ಹೇಳಿದಂತೆ, ಹಿಂದೀ ಮುಂದಾಳುಗಳನ್ನು ಹೀಗೆ ಪಾರ್ಲಮೆಂಟ ಭವನದಲ್ಲಿ ಹಳಿದು ಕಾನ್ಸರ್ವೇಟಿವರು ಉಭಯ ದೇಶಗಳ ಸಂಬಂಧವನ್ನು ಇನ್ನಷ್ಟು ಕೆಡುವಂತೆ ಮಾಡಿದ್ದಲ್ಲದೆ, ಹಿಂದೀಯರು ಒಗ್ಗಟ್ಟಾಗಲಾರರೆಂಬ ಸಂಶಯವನ್ನು ವ್ಯಕ್ತಗೊಳಿಸಿ ಈ ಐಕ್ಯದ ಸಂಭವವನ್ನು ಕಡಿಮೆ ಮಾಡಿದರು.

ಪುನಃ ಶ್ರೀಗಣ ?

ಲೀಗು ಘಟನಾ ಸಮಿತಿಯನ್ನು ಸೇರುವ ಆಶೆ ಇನ್ನು ಇರುವಾಗ ಅದನ್ನು ನಡುಗಾಲ ಸರಕಾರದಿಂದ ಹೊರಗಿಳ್ಕುವದು ಸಮಂಜಸವಲ್ಲೆಂಬ ಅರ್ಥದ ಮಾತುಗಳನ್ನು ಕ್ರಿಪ್ಸರು ಆಡಿದರು. ಆದ್ದರಿಂದ ಲಾರ್ಡ ಮೌಂಟ ಬ್ಯಾಟನ್ನರು ಅಧಿಕಾರ ವಹಿಸಿದೊಡನೆ ಈ ದಿಶೆಯಲ್ಲಿ ಪ್ರಯತ್ನ ಮಾಡುವರೆಂದು ತರ್ಕಿಸಲಾಗಿದೆ. ಹೊಸ ವಾಯಿಸರಾಯರು ಈ ತಿಂಗಳ ಮೂರನೆ ವಾರದಲ್ಲಿ ಅಧಿಕಾರ ಗ್ರಹಣ ಮಾಡುವರು. ಒಡನೆ ಅವರು ನಡುಗಾಲಸರಕಾರದ ಔಪಚಾರಿಕ ರಾಜೀನಾಮೆಯನ್ನು ಕೇಳುವರೆಂದೂ ಆ ರಾಜೀನಾಮೆಯನ್ನು ಸ್ವೀಕರಿಸಿ ಶ್ರೀಗಣದಿಂದ ಇಡೀ ಪ್ರಶ್ನೆಯನ್ನು ಪ್ರಾರಂಭಿಸುವರೆಂದೂ ಊಹಾಪೋಹ ವುಂಟಾಗಿದೆ. ಮಂತ್ರಿಗಳನ್ನು ತಿರುಗಿ ನೇಮಿಸಿಕೊಳ್ಳುವಾಗ ಘಟನಾ ಸಮಿತಿಯಲ್ಲಿ ಸೇರಲೊಪ್ಪಿದ ಪಕ್ಷಗಳನ್ನಷ್ಟೇ ತೆಗೆದುಕೊಂಡು ಲೀಗು ಹಟಮಾರಿತನವನ್ನು ತೋರಿಸಿದರೆ ಅದನ್ನು ಹೊರಗಿರಿಸುವರಂತೆ ಇದಲ್ಲದೆ ಕಾಂಗ್ರೆಸ್ ಗೊತ್ತುವಳಿಯಲ್ಲಿ ಹೇಳಿದಂತೆ ನಡುಗಾಲ ಸರಕಾರವನ್ನು ಸಾಮಂತ ಮಂತ್ರಿಮಂಡಲದಂತೆ ನಡೆಸಿಕೊಂಡು ಅದನ್ನು ಸಂಯುಕ್ತ ಹೊಣೆಗಾರಿಕೆಯದನ್ನಾಗಿ ಮಾಡಬೇಕೆಂದು ಆ ಗೊತ್ತುವಳಿಗಿಂತ ಮೊದಲೇ ನಿರ್ಣಯಿಸಲಾಗಿತ್ತೆಂದು ತಿಳಿಯುತ್ತದೆ. ಪ್ರಾಂತಗಳಿಗೆ ಅಧಿಕಾರವೊಪ್ಪಿಸಬೇಕೆಂಬ ಪ್ರಸಂಗವೇ ಬರುವಂತೆ ಲೀಗು ಘಟನಾ ಸಮಿತಿಯಿಂದ ಹೊರಗುಳಿದರೆ ಕೇವಲ ಘಟನಾ ಸಮಿತಿಯಲ್ಲಿ ಸೇರಿದ ಪ್ರಾಂತಗಳಿಗೆ ಮಾತ್ರ ಸಂಬಂಧಿಸುವ ನಡುಗಾಲ ಸರಕಾರದಲ್ಲೇನು ಸ್ಥಾನ ? ಲೀಗನ್ನು ಒಳಗೆ ತರಲು ಇದೇ ಕೊನೆಯ ಪ್ರಯತ್ನವಾಗಬಹುದು.

ಪಂಜಾಬನ್ನು ಇಬ್ಭಾಗಿಸಿರಿ

ಬ್ರಿಟಿಶ ಸರಕಾರ ಏನೇಮಾಡಲಿ ಮಾಡದಿರಲಿ, ಲೀಗು ಬರಲಿ ಬಿಡಲಿ, ಕಾಂಗ್ರೆಸ್ಸು ತನ್ನ ಹೊಣೆಯರಿತು ಮುನ್ನುಗ್ಗುತ್ತಲೇ ಇದೆ. ಹಿಂದುಸ್ತಾನ ಅಖಂಡವಿರಲಿ, ವಿಚ್ಛಿನ್ನವಾಗಲಿ ಸ್ವಾತಂತ್ರ್ಯವನ್ನು ದೊರಕಿಸುವ ಈ ಸಂದರ್ಭವನ್ನು ಅದು ಕಳೆದುಕೊಳ್ಳಲು ಸಿದ್ಧವಿಲ್ಲ. ತನ್ನೊಡನೆ ಬರಲೊಪ್ಪುವವರನ್ನು ಕಟ್ಟಿಕೊಂಡು ಉಳಿದವರನ್ನು ಅವರ ಪಾಡಿಗೆ ಬಿಟ್ಟು ಮುಂದುವರಿಯಲು ಅದು ನಿರ್ಧರಿಸಿದೆ. ನರೇಂದ್ರ ಮಂಡಲದ ಸಂಧಾನ ಸಮಿತಿಯೊಡನೆ ಘಟನಾ ಸಮಿತಿ ಒಪ್ಪಂದಮಾಡಿಕೊಂಡಿದೆ. ಅರ್ಧದಷ್ಟು ಸ್ಥಾನಗಳನ್ನಾದರೂ ಪ್ರಜಾಪ್ರತಿನಿಧಿಗಳಿಗೆ ಕೊಡಲು ನರೇಂದ್ರ ಪ್ರತಿನಿಧಿಗಳೊಪ್ಪಿದ್ದಾರೆ. ಆದರೆ ನರೇಂದ್ರರಲ್ಲಿಯೂ ಕೆಲವರು ಕಾಂಗ್ರೆಸನ್ನು ಹೀಡಿಸುವ ಆಶೆಬಿಟ್ಟಿಲ್ಲ. ಆದರಿಂದಲೇ ಇಡೀ ಒಪ್ಪಂದಕ್ಕೆ ನರೇಂದ್ರ ಮಂಡಲದ ಮುಖಾಸಭೆಯು ಒಪ್ಪಿಗೆದೇಕೆಂದು ಹೊಸ ಛಿದ್ರ ತೆಗೆದು ಭೋಪಾಲನವಾಬರು ಪರಿಸ್ಥಿತಿಯಲ್ಲಿ ಇನ್ನೊಂದು ಸಂದಿಗ್ಧತೆಯನ್ನು ತಂದು ಹಾಕಿದ್ದಾರೆ. ಬರುವ ಪರ್ಗವೇ ಪರಿಸ್ಥಾಧಿಕಾರ ಹೋಗುವದರಿಂದ ಸ್ವತಂತ್ರ ರಾಜರಾಗುವ ಆತುರ ಕೆಲ ನರೇಂದ್ರರಲ್ಲುಂಟಾಗಿರಬಹುದು. ಈ ಎಲ್ಲ ಅಪಸ್ವರಗಳನ್ನು ಒಂದೇ ಶ್ರುತಿಗೆ ಕೂಡಿಸಲು ಬಹಳ ಕಾಲಬೇಕು. ಅದಕ್ಕಾಗಿ ಕಾಂಗ್ರೆಸ್ಸು ಬರುವವರನ್ನು ಮಾತ್ರ ಕಟ್ಟಿಕೊಂಡು ಸಾಗಲು ನಿರ್ಧರಿಸಿದೆ. ಆದರೆ ಐಕ್ಯದ ಮತ್ತು ಸ್ವಾತಂತ್ರ್ಯದ ವಿರೋಧಿಗಳಿಗೆ ಮನಸಿಗೆ ಬಂದದ್ದನ್ನೆಲ್ಲ ದೋಚಿಕೊಂಡು ಹೋಗಗೊಡಲು ಅದು ಸಿದ್ಧವಿಲ್ಲ. ಕಾರ್ಯಸಮಿತಿ ಪಂಜಾಬದ ವಿಭಜನೆಯ ಬಗ್ಗೆ ಮಾಡಿದ ಗೊತ್ತುವಳಿ ಇದನ್ನೇ ತೋರಿಸುತದೆ. ಮುಸ್ಲಿಂಲೀಗು ಗವರ್ನರ ಜಂಕಿನ್ಸರೊಡನೆ ಒಳಸಂಚು ಮಾಡಿ ಖಿಝರ ಹಯಾತ್ ಮಂತ್ರಿ ಮಂಡಲದಿಂದ ರಾಜೀನಾಮೆ ಕೊಡಿಸುವಲ್ಲಿ ಯಶಸ್ವಿಯಾದ ಮೇಲೆ ಪಂಜಾಬದಲ್ಲೆಲ್ಲ ನಡೆದ ಪಾಕಿಸ್ತಾನ ನಿರೋಧಿ ಪ್ರದರ್ಶನದ ಬೆನ್ನಿಗೆ ಅಮಾನುಷ ಅತ್ಯಾಚಾರಗಳಿಂದೊಡಗೂಡಿದ ಗಲಭೆಗಳು ನಡೆಯತೊಡಗಿವೆ. ಪಶ್ಚಿಮ ಪಂಜಾಬದಲ್ಲಿ ಲೀಗ ಅನುಯಾಯಿಗಳ ಪುಂಡತನದಿಂದ ಹಿಂದೂ—ಸೀಖ ಜನರ ಜೀವನವಿತ್ತಗಳಿಗೆ ಗಂಡಾಂತರ ಬಂದಿದೆ. ಎಲ್ಲ ಕಡೆಗಳಲ್ಲಿಯೂ ಜಾತೀಯ ಗಲಭೆಗಳು ಜರಗುತಿವೆ. ಲಾಹೋರ, ಅಮೃತಸರ, ರಾವಳಪಿಂಡಿ ಮೊದಲಾದೆಡೆಗಳಲ್ಲಿ ಅಮಾನುಷ ಹತ್ಯಾಕಾಂಡ, ಧ್ವಂಸ, ಅಗ್ನಿಕಾಂಡಗಳು ಜರಗಿವೆ. ಅಮೃತಸರವೊಂದರಲ್ಲೇ ೬ ರಿಂದ ೧೦ ಕೋಟಿ ರೂಪಾಯಿಗಳ ಹಾನಿಯಾಗಿದೆ. ಈ ಪರಿಸ್ಥಿತಿಯಲ್ಲಿ ಪಂಜಾಬದಲ್ಲಿ ಶಾಶ್ವತ ಶಾಂತಿಯನ್ನುಂಟು ಮಾಡಲು ಪಂಜಾಬವನ್ನು ಮುಸ್ಲಿಂ ಬಹುಸಂಖ್ಯಾಕ ಪ್ರದೇಶ ಮತ್ತು ಮುಸ್ಲಿಮೇತರ ಅಂದರೆ ಹಿಂದೂ ಸೀಖ ಬಹುಸಂಖ್ಯಾಕ ಪ್ರದೇಶವಾಗಿ ಇಬ್ಭಾಗಿಸಿ ಎರಡು ಪ್ರಾಂತಗಳನ್ನಾಗಿ ಮಾಡುವದೊಂದೇ ಉಪಾಯವೆಂದು ಅರ್ಥ ಬರುವ ಗೊತ್ತುವಳಿಯನ್ನು ಕಾಂಗ್ರೆಸ್ ಕಾರ್ಯ ಸಮಿತಿ ಸ್ವೀಕರಿಸಿದೆ. ೧೯೪೮ ಜೂನಿಗೆ ಬ್ರಿಟಿಶರು ಅಧಿಕಾರ ತ್ಯಾಗ ಮಾಡುವ ಹೊತ್ತಿಗೆ ಬಹಳ ಮುಂಚೆಯೆ ಪಂಜಾಬ ಸರಕಾರದಲ್ಲಿ ತಾವು ಗಟ್ಟಿಯಾಗಿ ಬೇರೂರಿ ಪಂಜಾಬದ ನೇತೃತ್ವದಲ್ಲಿ ಪಾಕಿಸ್ತಾನ ಸ್ಥಾಪಿಸುವ ಉದ್ದೇಶದಿಂದಲೇ ನಾಗರಿಕ ಸ್ವಾತಂತ್ರ್ಯದ ಹೋರಾಟದ ಸೋಗಿನಲ್ಲಿ ಗೊಂದಲವನ್ನುಂಟುಮಾಡಿ ಸಂಮಿಶ್ರ ಮಂತ್ರಿಮಂಡಲವನ್ನೋಡಿಸಿದ ಲೀಗು ಹಿಂದೂ—ಸೀಖರ ಸಂಘಟಿತ ವಿರೋಧದ ದೆಸೆಯಿಂದ ಮಂತ್ರಿಮಂಡಲವನ್ನು ರಚಿಸಲಾರದೆ ಹೋಗಿದೆ. ಅದರ ಮೇಲೆ ಈ ಕಾಂಗ್ರೆಸ್ ಗೊತ್ತುವಳಿಯಿಂದ ಪಂಜಾಬವನ್ನು ಪೂರ್ತಿಯಾಗಿ ನುಂಗುವ ಪಾಕಿಸ್ತಾನ ವಾದಿಗಳ ಆಸೆಗೆ ಮೊಟ್ಟಮೊದಲು ತಣ್ಣೀರು ಬಿದ್ದಂತಾಯಿತು. ಪಂಜಾಬ ವಿಭಜನೆಯ ಯೋಜನೆಗೆ ಸೀಖರ ಬೆಂಬಲ ಈಗಾಗಲೇ ದೊರೆತಿದ್ದು ವಾಯಿಸರಾಯರ ಮುಖಾಂತರ ಬ್ರಿಟಿಶ ಸರಕಾರಕ್ಕೆ ಈ ವಿಷಯದಲ್ಲಿ ಈಗಾಗಲೆ ಒತ್ತಾಯ ಮಾಡಲಾಗಿದೆ. ಬಂಗಾಲದಲ್ಲಿ ಈಗಾಗಲೆ ವಿಭಜನೆಯ ಚಳವಳಿ ಸಾಕಷ್ಟು ಮುಂದುವರಿದಿದೆ. ಹಟಮಾರಿ ಧೋರಣೆಗೇ ಲೀಗು ಅಂಟಿಕೊಂಡರೆ ಪೂರ್ವ ಪಂಜಾಬದ ಬಹುಸಂಖ್ಯಾಕ ಹಿಂದು ಸೀಖರ ಮತ್ತು ಪಶ್ಚಿಮ ಬಂಗಾಲದ ಹಿಂದುಗಳ ಬೇಡಿಕೆಗಳನ್ನು ತಡೆಯುವದು ಬ್ರಿಟಿಶರಿಗೆ ಕಠಿಣ ಹೋಗಬಹುದು. ಅಗ ಇಡಿ ಹಿಂದುಸ್ತಾನದ ವಿಭಜನೆ ಯಾವ ನಿಯಮದಿಂದಾಗಬೇಕೋ ಪ್ರಾಂತಗಳಿಗೂ ಅದೇ ನಿಯಮ ಅನ್ವಯಿಸಬಾರದೆಂದು ಲೀಗು ಹೇಗೆ ಹೇಳುವದು? ಪಾಕಿಸ್ತಾನವಾದರೂ ಈ ಎರಡು ಪ್ರಮುಖ ಭಾಗಗಳನ್ನು ಕಳೆದುಕೊಂಡರೆ ಅತಿ ದುರ್ಬಲವಾಗುವದು. ಕಾಂಗ್ರೆಸ್ಸಿನ ಈ ಗೊತ್ತುವಳಿ ಒಳ್ಳೆ ಗತ್ತುಗಾರಿಕೆಯದೇ ಸರಿ.

ಬ್ರಿಟಿಷರು ಹೊರಟರು

ಬ್ರಿಟಿಷ್ ಸರಕಾರದವರು ಜೂನ ೧೯೪೮ರೊಳಗಾಗಿ ಅಧಿಕಾರ ತ್ಯಾಗ ಮಾಡುವರಾಗಿ ಮುಖ್ಯ ಮಂತ್ರಿ ಅ್ಯಟ್ಲಿ ಯವರು ಸಾರಿದ್ದಕ್ಕೆ ಬ್ರಿಟಿಷ್ ಪಾರ್ಲಮೆಂಟಿನ ಒಪ್ಪಿಗೆಯು ದೊರೆತು, ಈಗ ಅದರ ರೀತಿಯ ಆ ಬಗ್ಗೆ ಇದ್ದ ಸಂಶಯಗಳೆಲ್ಲ ನಿವಾರಣೆಯಾಗಲು ಸಾಕು. ಬ್ರಿಟಿಷ್ ಪಾರ್ಲಮೆಂಟಿನಲ್ಲಿ ಈ ಸಂಬಂಧದಲ್ಲಿ ನಡೆದ ಚರ್ಚೆ ಉದ್ಬೋಧಕವಾಗಿತ್ತಲ್ಲದೆ ಹಿಂದುಸ್ತಾನದಲ್ಲಿಯ ಪರಿಸ್ಥಿತಿಯು ಯಥಾರ್ಥ ಚಿತ್ರಕ್ಕೆ ಸುಸಂಗತವಾಗಿದ್ದಿತು. ಬ್ರಿಟಿಷರು ಅಧಿಕಾರ ತ್ಯಾಗಮಾಡುವುದು ಅನಿವಾರ್ಯವಾಗಿದೆಯೆಂದು ಕಾಮಿಟಾರ ಮಂತ್ರಿಗಳು ಸಾರಿದ್ದರು. "ಬ್ರಿಟಿಷ್ ಸಾಮ್ರಾಜ್ಯದ ದಿವಾಳಿ ತೆಗೆಯಲು ನಾನೇನು ಮುಖ್ಯ ಮಂತ್ರಿಯನ್ನು ವಹಿಸಿಲ್ಲ" ಎಂದು ಅಧ್ಯಕ್ಷತೆಯಿಂದ ಹೇಳಿಕೊಳ್ಳುತ್ತಿದ್ದ ಚರ್ಚಿಲ್ಲರ ಹೊಟ್ಟೆಯುರಿ ಇದರಿಂದ ಶಾಂತವಾಗಿಸಿದಂತಾಗಿದೆ. ಅವರು ತಮ್ಮ ಹೊಟ್ಟೆಯೊಳಗಿನ ಉರಿಯನ್ನು ಹೊರಚೆಲ್ಲದಿರಲಿಲ್ಲ. ಬ್ರಿಟಿಷ ಸರಕಾರದ ಮೇಲೆ ಮತ್ತು ಹಿಂದೀ ಧುರೀಣರ ಮೇಲೆ ಸಲ್ಲದ ಆರೋಪಗಳನ್ನು ಮಾಡದಿರಲಿಲ್ಲ. ಬ್ರಿಟಿಷ್ ಕಾಮಿಟಾರ ಪಕ್ಷ ತ್ರಿಪ್ಸ ಕೂಡುಗೆಯು ಕಾಲಕ್ಕೆ ಕೊಟ್ಟ ವಚನದಿಂದ ತಾವು ಅರೋಪಿಸದೆ ಇರಲಿಲ್ಲ. ಅದರೆ ಬ್ರಿಟಿಷ್ ಮಂತ್ರಿಮಂಡಳದ ಧುರೀಣರಾದ ಅ್ಯಟ್ಲಿ, ಅಲೆಕ್ಸಾಂಡರ ಸರ್ ಸ್ಟಾಪರ್ಡ ಕ್ರಿಪ್ಸರು ಸಮಂಜಸ ಉತ್ತರ ಕೊಟ್ಟು ಚರ್ಚಿಲ್ಲರ ಬಾಯಿ ಮುಚ್ಚಿಬಿಟ್ಟರು. ಬ್ರಿಟಿಷ ಸರಕಾರವು ಇದರಲ್ಲಿ ದಾರಿತಪ್ಪಿ ನಡೆದಿಲ್ಲ. ತಮ್ಮ ಬೋಧಕ ಧೋರಣವನ್ನೇ ಸ್ವೀಕರಿಸಿರುವರೆಂದು ಖಂಡತುಂಡವಾಗಿ ಹೇಳಿಬಿಟ್ಟರು. ಹಿಂದೀಯರಿಗೆ ಹೊಣೆಗಾರಿಕೆಯ ಪಾಠವನ್ನು ಕಲಿಸಿದ್ದು ಪಕ್ಕ ಬ್ರಿಟಿಷ್ ಮುತ್ಸದ್ದಿಗಳನ್ನು ಹಳಿದರು. ಸಾಮ್ರಾಜ್ಯವಾದಿಗಳ ಕ್ಷುದ್ರ ವಿಚಾರಗಳನ್ನೆಲ್ಲ ಖಂಡಿಸಿಬಿಟ್ಟರು. ಈ ರೀತಿಯಾಗಿ ತಮ್ಮ ವಿಧಾನಗಳಿಗೆಲ್ಲ ಕಾಮಿಟಾರ ಮಂತ್ರಿಗಳು ಸಮಂಜಸ ಉತ್ತರ ಕೊಟ್ಟು ಅವನ್ನೆಲ್ಲ ಸಾರಿಸಿಬಿಟ್ಟದ್ದರಿಂದ ಚರ್ಚಿಲ್ ಪ್ರಭೃತಿಗಳು ಮುಖಭಂಗ ಮಾಡಿಕೊಂಡು ಕೂಡ್ರಬೇಕಾಯಿತು. ಈ ರೀತಿ ವಿರೋಧ ಪಕ್ಷದ ಅಬ್ಬರ ಅಡಗಿ ಸರಕಾರದ ಘೋಷಣೆಗೆ ಪಾರ್ಲಮೆಂಟಿನ ಒಪ್ಪಿಗೆ ದೊರೆತದ್ದರಿಂದ ಸರಕಾರದ ಅಧಿಕಾರ ತ್ಯಾಗದಲ್ಲಿ ಯಾವದೇ ಬಗೆಯ ವಿಘ್ನವಿಲ್ಲ. ಹಿಂದೀ ಪಕ್ಷ ಸಂಗಡಗಳ ಮೇಲೆಯೇ ಹೊಣೆ ಉಳಿದಂತಾಗಿದೆ. ಹಿಂದೀಯರು ತಮ್ಮಲ್ಲಿ ಒಡಂಬಡಿಕೆ ಮಾಡಿಕೊಂಡು ಕೇಂದ್ರ ಸರಕಾರವನ್ನು ರಚಿಸಿಕೊಂಡದ್ದಾದರೆ ಬ್ರಿಟಿಷ್ ಸರಕಾರದವರು ಆ ಕೇಂದ್ರ ಸರಕಾರಕ್ಕೆ ಅಧಿಕಾರವನ್ನೊಪ್ಪಿಸಿಕೊಟ್ಟು ಹೊರಟು ಹೋಗಬಲ್ಲರು. ತಮ್ಮ ಮಹತ್ವದ ನಿರ್ಧಾರದನ್ವಯ ಕಾರ್ಯಕಾರಿ ಮಾಡುವದಕ್ಕಾಗಿಯೇ ಲಾರ್ಡ ಮೌಂಟ ಬ್ಯಾಟನ್‌ರನ್ನು ಸರಕಾರದವರ ಹೊಸ ವೈಸರಾಯರನ್ನಾಗಿ ಕಳಿಸಿದರು. ಬ್ರಿಟಿಷರ ಈ ನಿರ್ಣಯ ಅಭಿನಂದನೀಯವಾಗಿದೆಂದು ಬೇರೆ ಹೇಳಬೇಕಿಲ್ಲ.

ತ್ಯಾಗಶಾರ್ಹ ಧೋರಣೆ

ಕಾಂಗ್ರೆಸ ಕಾರ್ಯಸಮಿತಿಯು ಬ್ರಿಟಿಷ್ ಸರಕಾರದ ಈ ನಿರ್ಧಾರದ ಬಗ್ಗೆ ಕೂಲಂಕಷ ವಿಚಾರ ಮಾಡಿ ನಿರ್ಣಯವನ್ನು ಸ್ವೀಕರಿಸಿ ಉಳಿದ ಪಕ್ಷಸಂಗಡಗಳಿಗೆ ಮಾರ್ಗದರ್ಶನ ಮಾಡಿಕೊಟ್ಟದ್ದು ಆ ಹಿರಿಯ ಸಂಸ್ಥೆಗೆ ಉಚಿತವೆ ಆಗಿದೆ. ಮೂರು ಮಹತ್ವದ ಗೊತ್ತುವಳಿಗಳನ್ನು ಕಾಂಗ್ರೆಸ್ಸು ಸ್ವೀಕರಿಸಿದೆ. ಬ್ರಿಟಿಷ ಸರಕಾರದವರು ಮಾಡಿದ ಮಹತ್ವದ ಘೋಷಣೆಯಿಂದ ಅಧಿಕಾರತ್ಯಾಗದ ಬಗ್ಗೆ ಹಿಂದೀಯರಲ್ಲಿದ್ದ ಸಂಶಯವೆಲ್ಲ ನಿವಾರಣೆಯಾದುದಕ್ಕಾಗಿ ಸರಕಾರವನ್ನು ಅಭಿನಂದಿಸಿ ಈ ನಿರ್ಧಾರವನ್ನು ಸ್ವಾಗತಿಸಿದೆ. ಅದರೆ ಈ ಮಹತ್ವದ ಘೋಷಣೆಯಲ್ಲಿ ಕೆಲ ಸಂದಿಗ್ಧ ವಿಷಯಗಳು ಇದ್ದು ಉಳಿದದ್ದರಿಂದ ಸರಕಾರದವರು ಆ ಬಗ್ಗೆ ನಿರ್ದಿಷ್ಟ ಕೃತಿಯನ್ನು ಸುಚರಿಸಿ ಅವನ್ನೆಲ್ಲ ನಿರಸನ ಮಾಡಬೇಕೆಂದು ಕಾಂಗ್ರೆಸ ಕಾರ್ಯಸಮಿತಿ ಸೂಚಿಸಿಯನ್ನೂ ಮಾಡಿದೆ. ಸದ್ಯಃಕಾಲ ಸರಕಾರದ ಕಾರ್ಯಪದ್ಧತಿಯ ವಿಷಯದಲ್ಲಿ ಬ್ರಿಟಿಷ್ ಸರಕಾರದವರು ಅನುಸರಿಸಬೇಕಾದ ಮಾರ್ಗವನ್ನೂ ತೋರಿಸಿಕೊಟ್ಟಿರುವರು. ಸದ್ಯದ ಸದ್ಯಃಕಾಲ ಸರಕಾರ ಸಾಮಂತ ಸ್ವರಾಜ್ಯ ಸರಕಾರವೆಂದು ಭಾವಿಸಿ ಅದಕ್ಕನುಸರಿಸಿ ಅದಕ್ಕೊಪ್ಪಿಸಿಬಿಟ್ಟು ವೈಸರಾಯರು ಕೇವಲ ಘಟನಾತ್ಮಕ ಹಿರಿಯರಂತೆ ನಡೆಯುವದನ್ನು. ಕೇಂದ್ರ ಸರಕಾರ ಸಂಯುಕ್ತ ಹೊಣೆಗಾರಿಕೆಯ ಮತ್ತು ಪೂರ್ಣ ಅಧಿಕಾರದ ಮಂತ್ರಿಮಂಡಳದಂತೆ ಕಾರ್ಯನಡೆಸುವದೂ ಅವಶ್ಯಕ. ಇದಕ್ಕೆ ವ್ಯತಿರಿಕ್ತವಾದ ಬೇರೊಂದು ಮಂತ್ರಿಮಂಡಳ ಬಹಳ ಅಪಾಯಕಾರಕವೆಂದು ಮುಂತಾಗಿ ಕಾಂಗ್ರೆಸ ಕಾರ್ಯಸಮಿತಿ ಸ್ಪಷ್ಟ ಅಭಿಪ್ರಾಯ ಪಟ್ಟಿದೆ. ಕಾಂಗ್ರೆಸ್ ಕಾರ್ಯಸಮಿತಿಯ ಈ ಸೂಚನೆ ಅತ್ಯಂತ ಸಮಂಜಸ ಮತ್ತು ಸಾಲೋಚಿತವಾಗಿದೆಂದು ಬೇರೆ ಹೇಳಬೇಕಿಲ್ಲ. ಬ್ರಿಟಿಷ್ ಸರಕಾರದವರು ಈ ಸಂಬಂಧದಲ್ಲಿ ನಿಶ್ಚಿತಮಾರ್ಗವನ್ನು ಸುಸರಿಸಬೇಕೆಂದು ಒತ್ತಾಯ ಪಡಿಸದಿರಲಾರೆವು.

ಕಾಂಗ್ರೆಸ್ಸಿನ ಕರೆ

ಕಾಂಗ್ರೆಸು ಈ ರೀತಿ ಬ್ರಿಟಿಷ್ ಸರಕಾರದ ಧೋರಣವನ್ನು ಸ್ವಾಗತಿಸಿ ಅವಶ್ಯಕ ಸೂಚನೆಯನ್ನು ಮಾಡಿದ್ದಲ್ಲದೆ ಮುಸ್ಲಿಂಲೀಗಿಗೂ ಆಮಂತ್ರಣವನ್ನು ಕೊಟ್ಟು ಅವಶ್ಯಕ ಭಿದಾರ್ಥವನ್ನೂ ತೋರಿಸಿದೆ. ಬ್ರಿಟಿಶ ಸರಕಾರದವರ ಅಧಿಕಾರ ತ್ಯಾಗಮಾಡಲು ಸಿದ್ಧರಾಗಿರುವ ಈ ಸಮಯದಲ್ಲಿ ಹಿಂದುಸ್ಥಾನದಲ್ಲಿರುವ ಪಕ್ಷ ಸಂಗಡಗಳೆಲ್ಲ ಮತಭೇದಗಳನ್ನು ಮರೆತು ಐಕ್ಯದಿಂದ ಆ ಅಧಿಕಾರವನ್ನು ಒಪ್ಪಿಸಿ ಕೊಳ್ಳುವದು ಅವಶ್ಯವಾಗಿದೆ. ಇಂಥ ಸಂಧಿಕಾಲದಲ್ಲಿ ಭಾರತೀಯರು ತಮ್ಮ ತಮ್ಮಲ್ಲಿ ಬಡಿದಾಡುತ್ತ ಕುಳಿತರೆ ಹಿಂದುಸ್ಥಾನದಲ್ಲಿ ಅಶಾಂತಿಯು ಬೇಗೆ ಪಟ್ಟಿ ಹಿತಕ್ಕಿಂತ ಅಹಿತವೇ ಹೆಚ್ಚುವುದೆಂಬುದು ನಿಶ್ಚಿತ. ಇದನ್ನೆಲ್ಲ ಅನುಲಕ್ಷಿಸಿಯೇ ಕಾಂಗ್ರೆಸು ಮುಸ್ಲಿಂಲೀಗಿಗೆ ಸಹಕಾರದ ಆಮಂತ್ರಣವನ್ನು ಕೊಟ್ಟಿದೆ. ಹಿಂದುಸ್ಥಾನದ ಒಕ್ಕಟ್ಟು ಮತ್ತು ಅದರ ಘಟಕಗಳ ಘಟನೆಯನ್ನು ರಚಿಸಲು ಸಹಾಯಕರಾಗಬೇಕೆಂದು ಬಿನ್ನವಿಸಿಕೊಂಡಿದೆ. ಇಂಥ ಪರ್ವಕಾಲದಲ್ಲಿ ಮುಸ್ಲಿಂ ಲೀಗು ಹಟಮಾರಿತನವನ್ನು ಬಿಟ್ಟುಕೊಟ್ಟು ಹಿಂದುಸ್ಥಾನದ ಸ್ವಾತಂತ್ರ್ಯ ಘಟನೆಯನ್ನು ಸಿದ್ಧಪಡಿಸುವಲ್ಲಿ ಘಟನಾ ಸಮಿತಿಯಲ್ಲಿ ಭಾಗವಹಿಸುವದು ಅತ್ಯಾವಶ್ಯವಾಗಿದೆ. ಈ ಬಗೆಯ ಸಮಂಜಸ ಧೋರಣವನ್ನು ಬಿಟ್ಟುಕೊಟ್ಟು ದೇಶವನ್ನು ಇಬ್ಭಾಗಿಸುವ ಅನುಚಿತ ಮಾರ್ಗವನ್ನೇ ಅನುಸರಿಸಬೇಕೆಂದು ಮುಸ್ಲಿಂಲೀಗು ಹಟ ಹಿಡಿದರೆ ಹಿಂದುಸ್ಥಾನದಲ್ಲಿ ಯಾದವೀ ಕಲಹ ನಡೆದು ರಕ್ತಪಾತವಾಗುವಲ್ಲಿ ಸಂದೇಹವಿಲ್ಲ. ಹಿಂದುಸ್ಥಾನದ ಅಡೆತಡೆಯನ್ನು ಸಾಗಿಸಲು ಅಸಮರ್ಥವಾದೆಂದು ಇದರಿಂದ ಆಗ್ರಹಿಸಲ್ಲಿಕ್ಕೆ ಸಾರಿದಂತಾಗುವುದು. ಪರಕೀಯರ ಪ್ರಭುತ್ವವೇ ಹಿಂದುಸ್ಥಾನದಲ್ಲಿ ಶಾಂತಿ ಸುವ್ಯವಸ್ಥೆಗೆ ಪರಿಣಾಮಕಾರಿ ಎಂದೆಂದೂ ಒಪ್ಪಿದಂತಾಗುವದು. ಆದುದರಿಂದ ಕಾಂಗ್ರೆಸ್ಸು ಸಕಾಲದಲ್ಲಿ ಮಾಡಿಕೊಂಡ ಈ ಬಿನ್ನಹವನ್ನು ಮುಸ್ಲಿಂ ಲೀಗು ಮತ್ತು ಇತರ ಪಕ್ಷ ಸಂಗಡಗಳು ಮನ್ನಿಸಿ ಘಟನಾ ಸಮಿತಿಯ ಕಾರ್ಯದಲ್ಲಿ ಸಹಕರಿಸಿ ಸರ್ವಸಮ್ಮತವಾದ ಘಟನೆಯನ್ನು ಸಿದ್ಧಪಡಿಸಬೇಕು. ಅಂದರೇನೇ ಅಂಥ ಘಟನಾಬದ್ಧವಾದ ಕೇಂದ್ರ ಸರಕಾರಕ್ಕೆ ಅಧಿಕಾರವನ್ನೊಪ್ಪಿಸಲು ಬ್ರಿಟಿಷ್ ಸರಕಾರಕ್ಕೆ ಸುಲಭವಾಗುವದು.

ಪಂಜಾಬಿನ ಪರಿಸ್ಥಿತಿ

ಪಂಜಾಬಿನ ಸಮ್ಮಿಶ್ರ ಮಂತ್ರಿ ಮಂಡಳದ ಅಧ್ಯಕ್ಷರೂ ಮುಖ್ಯ ಮಂತ್ರಿಗಳೂ ಆದ ಸರ ಖಿಜಾರರು ಮಂತ್ರಿಮಂಡಳಕ್ಕೆ ರಾಜೀನಾಮೆ ಕೊಟ್ಟರು. ಹೀಗೆ ಮಾಡುವ ಮೊದಲು ಅವರು ತಮ್ಮ ಸಹಕಾರಿಗಳ ಒಪ್ಪಿಗೆಯನ್ನು ಪಡೆಯಲಿಲ್ಲ. ದೇಶದಲ್ಲಿ ಶಾಂತಿಯನ್ನು ಪ್ರಸ್ಥಾಪಿಸುವ ದೃಷ್ಟಿಯಿಂದಲೆ ತಾವು ಹೀಗೆ ಮಾಡುತಿರುವುದಾಗಿ ಅವರು ಸಾರಿದರು. ಗವರ್ನರರಾದರೂ ಪರಿಸ್ಥಿತಿಯನ್ನು ಪೂರ್ಣ ವಿಚಾರ ಮಾಡದೆ ಒಮ್ಮೆಲೆ ಮುಸ್ಲಿಂ ಲೀಗ ಅಧ್ಯಕ್ಷರಿಗೆ ಹೊಸ ಮಂತ್ರಿಮಂಡಳವನ್ನು ರಚಿಸಲು ಆಮಂತ್ರಣ ಕೊಟ್ಟರು. ಲೀಗ ಅಧ್ಯಕ್ಷ ಮಮದೋತ ಖಾನರು ಮಂತ್ರಿಮಂಡಳ ರಚಿಸುವ ಹೊಣೆಯನ್ನೂ ಹೊತ್ತುಕೊಂಡರು. ಅದರೆ ಸಮ್ಮಿಶ್ರ ಮಂತ್ರಿಮಂಡಳ ರಚಿಸುವುದು ಸಾಧ್ಯವಾಗದ್ದರಿಂದ ಗವರ್ನರರು ೯೩ ನೇ ಕಲಮಿನನ್ವಯ ಅಧಿಕಾರವನ್ನು ತಮ್ಮ ಕಡೆಗೆ ತೆಗೆದುಕೊಂಡಿರುವರು. ಪಂಜಾಬಿನಲ್ಲಿ ಜಾತೀಯ ಮಂತ್ರಿಮಂಡಳವನ್ನು ಸ್ಥಾಪಿಸುವ ಪ್ರಯತ್ನ ನಡೆದುದನ್ನು ಮುಸಲ್ಮಾನೇತರರು ಪ್ರತಿಭಟಿಸುತಿರುವರು. ಇದು ನ್ಯಾಯ್ಯವೇ ಆಗಿದೆ. ಅದರೆ ಈ ಬಗೆಯ ಪ್ರತಿಭಟನೆಯನ್ನು ವಿರೋಧಿ ಪಕ್ಷದವರು ನಡೆಸುತಿರುವದು ನಿಜವಾಗಿಯೂ ಶೋಚನೀಯವಾಗಿದೆ. ಸಮ್ಮಿಶ್ರ ಮಂತ್ರಿಮಂಡಳದ ವಿರುದ್ಧ ಮುಸ್ಲಿಂ ಲೀಗಿನವರು ನಡೆಸಿದ ಪ್ರತಿಭಟನೆಯ ಕಾಲಕ್ಕೆ ಮುಸಲ್ಮಾನೇತರರು ಯಾವದೇ ಬಗೆಯ ಅಡ್ಡಿಯನ್ನುಂಟು ಮಾಡಲಿಲ್ಲ, ಗೊಂದಲವಂತೂ ನಡೆಯಲೇ ಇಲ್ಲ. ಅದರೆ ಈಗ ಮಾತ್ರ ಮುಸಲ್ಮಾನೇತರರು ನಡೆಸಿದ ಪ್ರತಿಭಟನೆಯನ್ನು ವಿರೋಧಿಗಳು ಹಿಂಸೆಯಿಂದ ಎದುರಿಸುತ್ತಿರುವರು. ಇದರಿಂದ ಪ್ರಾಂತದಲ್ಲೆಲ್ಲ ಅಶಾಂತ ಪರಿಸ್ಥಿತಿಯುಂಟಾಗಿದೆ. ಹತ್ಯಾಕಾಂಡವೂ ನಡೆದಿದೆ. ಮುಸ್ಲಿಂಲೀಗಿನವರು ವಹಿಸಿದ ಈ ಧೋರಣ ಅತ್ಯಂತ ಅಸಮಂಜಸ ಮತ್ತು ಅನ್ಯಾಯದ್ದಾಗಿದೆಂದು ಬೇರೆ ಹೇಳಬೇಕಿಲ್ಲ. ಮತಪ್ರದರ್ಶನ ಮಾಡಲಿಕ್ಕೆ ತಮಗೆ ಅಧಿಕಾರವಿದ್ದಷ್ಟೇ ಉಳಿದವರಿಗೂ ಇರುವದೆಂಬುದನ್ನು ಲೀಗಿನವರು ತಿಳಿದುಕೊಳ್ಳಬೇಕು. ಕೇವಲ ಬಹುಸಂಖ್ಯಾಕರ ಬಲದಿಮೆಯನ್ನು ಅಲ್ಪಸಂಖ್ಯಾಕರ ಮೇಲೆ ನಡೆಸಲುದ್ಯುಕ್ತರಾಗುವದು ಯಾವರೀತಿಯಿಂದಲೂ ನ್ಯಾಯ್ಯವಲ್ಲ. ಜಾತ್ಯಂಧತೆಯನ್ನು ಮತ್ತು ಪಾಕಿಸ್ತಾನದ ಅಸಮಂಜಸ ಬೇಡಿಕೆಯನ್ನು ಬಿಟ್ಟುಗೊಡಲು ಲೀಗ ಧುರೀಣರು ಸಿದ್ಧರಾದರೆ ಮಾತ್ರ ಪಂಜಾಬಿನಲ್ಲಿ ಸಮ್ಮಿಶ್ರ ಮಂತ್ರಿಮಂಡಳ ಸ್ಥಾಪಿತವಾಗಬಹುದು. ಇಲ್ಲದಿದ್ದರೆ ಗವರ್ನರರ ಆಡಳಿತವನ್ನೆ ಜನ ಒಪ್ಪಿಕೊಳ್ಳಬೇಕಾಗುವದು. ಪ್ರಜಾಪ್ರಭುತ್ವ ನಾಗರಿಕ ಸ್ವತಂತ್ರ್ಯಕ್ಕಾಗಿ ಹೋರಾಡುತಿರುವುದಾಗಿ ಅಧ್ಯಕ್ಷತೆಯಿಂದ ಹೇಳಿಕೊಳ್ಳುತಿರುವ ಮುಸ್ಲಿಂಲೀಗಿನವರು ತಮ್ಮ ಹಟಮಾರಿತನದಿಂದಲೆ ಬರಮಾಡಿಕೊಂಡ ಗವರ್ನರರ ಆಡಳಿತವನ್ನು ಅದೆಂತು ಸಹಿಸುವರೋ ?

ಪಂಜಾಬನ್ನು ಒಡೆಯಬೇಕು

ಪಂಜಾಬಿನಲ್ಲಿಯ ಈ ಅಶಾಂತ ಪರಿಸ್ಥಿತಿಯನ್ನು ಮತ್ತು ಲೀಗಿನವರ ಹಟಮಾರಿತನವನ್ನು ನೋಡಿ ಕಾಂಗ್ರೆಸ್ ಕಾರ್ಯಸಮಿತಿಯವರು ಪಂಜಾಬನ್ನು ಇಬ್ಭಾಗಿಸಬೇಕೆಂಬ ನಿರ್ಣಯಕ್ಕೆ ಬಂದಿರುವರು. ಪ್ರಾಂತಗಳನ್ನು ಇಬ್ಭಾಗಿಸಲು ಮೊದಲಿನಿಂದ ವಿರೋಧಿಸುತಿದ್ದ ಕಾಂಗ್ರೆಸ್ಸಿನವರು ಈಗ ಇಂಥ ಗೊತ್ತುವಳಿ ಸ್ವೀಕರಿಸಿದ್ದನ್ನು ನೋಡಿ ಯಾರಿಗಾದರೂ ಆಶ್ಚರ್ಯವಾಗದಿರದು. ಆದರೆ ಪರಿಸ್ಥಿತಿಯನ್ನು ಶಾಂತಗೊಳಿಸಲು ಅನ್ಯ ಮಾರ್ಗ ತೋರದ್ದರಿಂದ ಅನಿವಾರ್ಯವಾಗಿ ಈ ರೀತಿ ಪಂಜಾಬನ್ನಿಬ್ಭಾಗಿಸುವ ಗೊತ್ತುವಳಿ ಪಾಸು ಮಾಡಬೇಕಾಗಿ ಬಂದಿದೆ. ಮುಸ್ಲಿಂ ಲೀಗಿನವರು ತಳೆದ ಹಟಮಾರಿತನದ ಧೋರಣವೆ ಈ ಗೊತ್ತುವಳಿಗೆ ಕಾರಣವೆಂದು ಬೇರೆ ಹೇಳಬೇಕಿಲ್ಲ. ಮುಸ್ಲಿಂ ಲೀಗು ಅಲ್ಪಸಂಖ್ಯಾಕರ ಹಕ್ಕು ಬಾಧ್ಯತೆಗಳನ್ನು ನಾಗರಿಕ ಸ್ವಾತಂತ್ರ್ಯವನ್ನು ರಕ್ಷಿಸುವದೆಂದು ಬಾಯಿಂದ ಹೇಳುತಿದ್ದರೂ ಪಂಜಾಬಿನಲ್ಲಿ ನಡೆದ ಜಾತೀಯ ಗಲಭೆ ಮತ್ತು ಸಿಂಧದಲ್ಲಿ ಮುಸ್ಲಿಂ ಲೀಗು ಸ್ವೀಕರಿಸಿದ ಜಾತೀಯ ಧೋರಣೆ ಮೊದಲಾದವು ಗಳಿಂದ ಮುಸ್ಲಿಂ ಲೀಗಿನ ಆಡಳಿತದಲ್ಲಿ ಅಲ್ಪಸಂಖ್ಯಾಕರಿಗೆ ಉಳಿಗಾಲವಿಲ್ಲೆಂಬುದು ಸಿದ್ಧವಾಗುವದು. ಸಿಂಧದಲ್ಲಿ ಮುಸ್ಲಿಂ ಲೀಗು ಪಾಕಿಸ್ತಾನ ಬಹುಮತದ ಜೋರಿನಿಂದ ನಡೆಸಿದ ಕೃತಿಯು ಖಂಡನೀಯವೆಂದು ಬೇರೆ ಹೇಳಬೇಕಿಲ್ಲ. ಸ್ವಯಂ ನಿರ್ಣಯ ತತ್ವದ ವಿಕೃತನ್ಯಾಸ ಮಾಡಿ ಮುಸ್ಲಿಂ ಲೀಗು ವಹಿಸಿದ ಧೋರಣದ ಪರ್ಯವಸಾನವಿದು. ಪಂಜಾಬಿನ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಹಿಂದೂ ಮತ್ತು ಶೀಖ ಮೊದಲಾದ ಧರ್ಮದವರು ೧೦೦ ಕ್ಕೆ ೬೦ ರಷ್ಟಿರುವದರಿಂದ ಅವರು ಆ ಸ್ವಯಂ ನಿರ್ಣಯದ ಹಕ್ಕು ಪ್ರಸ್ಥಾಪಿಸಲು ಹವಣಿಸುವದು ನ್ಯಾಯ್ಯವೆ ಎಂದು ಹೇಳಬಹುದು. ಲೀಗಿನವರು ತಮ್ಮ ಮೇಲಿನ ಹೊಣೆಗಾರಿಕೆಯನ್ನು ಚೆನ್ನಾಗಿ ತಿಳಿದುಕೊಳ್ಳದೆ ಜಾತೀಯ ಪಿಶಾಚಿಗೆ ಬಲಿ ಬಿದ್ದದ್ದರಿಂದ ಈಗ ಅದರ ಫಲಗಳನ್ನು ಇಡೀ ಪ್ರಾಂತವೆ ಅನುಭೋಗಿಸಬೇಕಾದ ಪ್ರಸಂಗ ಬಂದಿದೆ. ಈ ದೃಷ್ಟಿಯಿಂದ ಕಾಂಗ್ರೆಸಿನ ನಿರ್ಣಯವು ಯೋಗ್ಯವೆಂದೇ ಹೇಳಬೇಕಾಗುವದು.

ಜಾತೀಯ ಗಲಭೆಗಳು

ಮುಂಬಯಿ ಕಲಕತ್ತಾ ಮೊದಲಾದ ಕಡೆ ಜಾತೀಯ ಗಲಭೆಗಳು ಕೆಲಮಟ್ಟಿಗೆ ಶಾಂತವಾಗಿವೆಂದು ಸಂತೋಷಪಡುತಿರುವಾಗಲೆ ಪಂಜಾಬ ಮತ್ತು ಸರಹದ್ದ ಪ್ರಾಂತಗಳಲ್ಲಿ ಅವು ಉಗ್ರ ಸ್ವರೂಪವನ್ನು ತಳೆದಿವೆ. ಗೋಲೀಬಾರು ಲಾಠಿ ಪ್ರಹಾರ ಮೊದಲಾದವುಗಳೂ ನಡೆದಿವೆ. ಕೊಳ್ಳೆ ಲೂಟ ಇಂತಗಳು ನಡೆದಿವೆ. ಸೈನಿಕರು ಶಾಂತತೆಯನ್ನು ಕಾಯುವ ಹೊಣೆ ಹೊತ್ತುಕೊಂಡಿರುವರು. ಹಿಂದುಸ್ಥಾನದಲ್ಲಿ ಈ ವರೆಗೆ ಅತ್ಯಂತ ಶಾಂತವಿದ್ದ ಈ ಎರಡು ಪ್ರಾಂತಗಳಲ್ಲಿ ಹತ್ಯಾಕಾಂಡ ಕೊಲೆ ಸುಲಿಗೆ ನಡೆದುದು ಶೋಚನೀಯವಾಗಿದೆ. ಸರಹದ್ದದಲ್ಲಿಯೂ ಇಂತಗಳು ಪ್ರಾರಂಭವಾಗಿವೆ. ಮಂತ್ರಿವರ್ಯ ಮೆಹರಚಂದ ಖನ್ನಾರವರನ್ನು ಗುಂಡಿಕ್ಕಿ ಕೊಲ್ಲುವ ಪ್ರಯತ್ನವೂ ನಡೆಯಿತು. ಆದರೆ ಸುದೈವದಿಂದ ಅವರಿಗೆ ಗುಂಡು ತಾಕಲಿಲ್ಲ. ಸಮೀಪದಲ್ಲಿಯೆ ಅದು ಹಾಯಿದು ಹೋಯಿತು. ಈ ನಿಂದ್ಯ ಕೃತಿಯನ್ನು ಮುಸ್ಲಿಂ ಲೀಗಿನವರು ಸ್ಪಷ್ಟ ಶಬ್ದಗಳಲ್ಲಿ ಖಂಡಿಸುವದು ಅತ್ಯವಶ್ಯವಾಗಿದೆ. ಈ ರೀತಿ ಹಿಂಸಾಕೃತ್ಯಗಳು ನಡೆಯಹತ್ತಿದರೆ ಇಲ್ಲವೆ ಅವುಗಳಿಗೆ ಲೀಗಿನವರಾಗಲಿ ಬೇರೆ ಯಾರೇ ಆಗಲಿ ಅವಕಾಶ ಕೊಟ್ಟರೆ ದೇಶದಲ್ಲಿ ಯಾವ ವ್ಯಕ್ತಿ ಜೀವಿತಗಳೂ ಸುರಕ್ಷಿತವಿರಲಾರವು. ಈ ಬಗ್ಗೆ ಮುಸ್ಲಿಂ ಲೀಗಿನವರು ಮತ್ತು ಇತರರು ಶಾಂತ ಮತ್ತು ನಿರ್ವಿಕಾರ ಮನಸಿನಿಂದ ವಿಚಾರಮಾಡಬೇಕು. ಮತ್ತು ಪರಿಸ್ಥಿತಿಯನ್ನು ಶಾಂತಗೊಳಿಸುವದಕ್ಕಾಗಿ ಎಲ್ಲ ಬಗೆಯಿಂದ ಪ್ರಯತ್ನಿಸಬೇಕು. ಆಯಾ ಪ್ರಾಂತಿಕ ಸರಕಾರಗಳಾದರೂ ಈ ಸಂಬಂಧದಲ್ಲಿ ಉಗ್ರ ಉಪಾಯಗಳನ್ನು ಕೈಕೊಳ್ಳಬೇಕು. ಇರಿತ ಮೊದಲಾದಂಥ ಹೀನ ಕೃತ್ಯಗಳನ್ನು ಮಾಡುವವರಿಗೆ ದೇಹಾಂತ ಇಲ್ಲವೆ ಆಮರಣ ಕಾರಾಗೃಹವಾಸದ ಶಿಕ್ಷೆ ವಿಧಿಸುವಂತೆ ಅವಶ್ಯಕ ಕಾಯದೆಯನ್ನು ಜಾರಿಯಲ್ಲಿ ತರಬೇಕು. ಇಂಥ ಸಮಾಜದ್ರೋಹಿಗಳನ್ನು ಎಷ್ಟು ನಿಂದಿಸಿದರೂ ಕಡಿಮೆಯೆ. ಮುಂಬೈ ಸರಕಾರದವರು ಈ ಬಗೆಯ ಉಗ್ರ ಉಪಾಯಗಳನ್ನು ಕೈಕೊಳ್ಳಹತ್ತಿದ್ದರಿಂದ ಮುಂಬಯಿಯಲ್ಲಿ ಇರಿತಗಳು ಬಹಳ ಮಟ್ಟಿಗೆ ಕಡಿಮೆಯಾಗಿವೆ, ಇಲ್ಲಿಂದರೂ ಚಿಂತೆಯಿಲ್ಲ. ಈ ರೀತಿ ಆಯಾ ಜಾತಿ ಪಕ್ಷಸಂಗಡಗಳ ಧುರೀಣರು ಮತ್ತು ಶಾಂತಿ ಸಂಸ್ಥಾಪನೆಗಾಗಿ ಒಮ್ಮನಸ್ಸಿನಿಂದ ಪ್ರಯತ್ನಿಸಬೇಕೆಂದು ಆಗ್ರಹಪಡಿಸುತ್ತೇವೆ.